ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೭೫
ವಿಚಾರ ಸಾಹಿತ್ಯಮಾಲೆ – ೮೮
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಅಹಂ ಅನ್ನು ಅಳಿಸಿ ಹಾಕಿ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

### ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ

**ಎನ್. ರಾಮಾನುಜ** – ಅಧ್ಯಕ್ಷರು

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**

(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಅಹಂ ಅನ್ನು ಅಳಿಸಿ ಹಾಕಿ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**

**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**

**–ಋಗ್ವೇದ, I ೮೯–೧**

ಮೂಲ

**ರಮಣ ಮಹರ್ಷಿ**

ಅನುವಾದ

**ಬಾ. ವೇ. ಶ್ರೀಧರ**


**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು

ಮತ್ತು

**ಭಾರತೀಯ ವಿದ್ಯಾ ಭವನ,** ಮೈಸೂರು

**Aham Annu Alisi Haaku:** Kannada translation of *Erase the Ego* : **Ramana Maharshi;** Compiled by **Swami Rajeshwarananda;** Kannada translation by **B. V. Sridhara;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp.xxviii + 44. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxviii + ೪೪
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು - ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.


ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ-ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ-ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ-ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ-ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.



(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.



(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ  ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಸ್ವಾಮಿ ರಾಜೇಶ್ವರಾನಂದ ಅವರು ಸಂಕಲಿಸಿರುವ 'ಅಹಂ ಅನ್ನು ಅಳಿಸಿ ಹಾಕು' ಶ್ರೀ ರಮಣ ಮಹರ್ಷಿಗಳ ಚಿಂತನೆಯನ್ನು ಒಳಗೊಂಡಿರುವ *Erase the Ego* ಎಂಬ ಕೃತಿಯ ಕನ್ನಡ ಅನುವಾದ. ಇದನ್ನು ಬಾ. ವೇ. ಶ್ರೀಧರ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಪೀಠಿಕೆ

ದಕ್ಷಿಣ ಭಾರತದ ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳ ಕೆಲವು ಪ್ರಮುಖವಾದ ಮತ್ತು ಮಹತ್ತ್ವಪೂರ್ಣವಾದ ಉಪದೇಶಗಳು ಇಲ್ಲಿವೆ. ಪರಮ ಪಾವನವಾದ ಈ ಉಪದೇಶಗಳನ್ನು ತಿರುವಣ್ಣಾಮಲೆಯ ರಮಣಾಶ್ರಮದಿಂದ ಪ್ರಕಟವಾದ ಕೃತಿಗಳಿಂದ ಆಯ್ದು ಕೊಡಲಾಗಿದೆ. ಈ ಮಾತುಗಳೆಲ್ಲವೂ ಅವರ ಸ್ವಂತದವು.

## ಭಿನ್ನಹ

ಈ ಲೋಕಗಳೆಲ್ಲವೂ ಯಾವುದರಲ್ಲಿ ನೆಲೆಯಾಗಿವೆಯೋ, ಯಾವುದರಿಂದ ಹುಟ್ಟುವುವೋ, ಯಾವುದಕ್ಕಾಗಿ ಅವು ಇವೆಯೋ, ಯಾವುದರಿಂದ ಅಸ್ತಿತ್ವದಲ್ಲಿರುವುವೋ, ಸತ್ಯವಾಗಿ ಇವೆಯೋ ಅದೇ ಸತ್ಯ, ನಾವು ಅದನ್ನು ಹೃದಯದಲ್ಲಿ ಆರಾಧಿಸೋಣ.

ಏಕೈಕ ಆತ್ಮವೇ, ಏಕೈಕ ಸತ್ಯವೇ ನಿತ್ಯವಾಗಿ ಇರುವುದು. ಪೂಜ್ಯ ಗುರು ದಕ್ಷಿಣಮೂರ್ತಿ, ಅದನ್ನು ಮಾತೇ ಇಲ್ಲದೆ ಶಕ್ತಿಯುತವಾಗಿ ಹೊರಗಡಿಣಿಕುವಾಗ, ಬೇರೆ ಯಾರೇ ಆಗಲಿ ಹೇಗೆ ಮಾತಿನಿಂದ ಹೇಳಬಲ್ಲರು?

ಸನಕ ಮೊದಲಾದವರಿಗೆ ಶಾಂತಿಯನ್ನು ದಯಪಾಲಿಸಲು ದಕ್ಷಿಣಮೂರ್ತಿಯಾಗಿ ಅವತರಿಸಿ, ತನ್ನ ಮೌನದ ಅವಸ್ಥೆಯನ್ನು ಅರುಹಿದನೋ, ಮತ್ತು ಆತ್ಮಸ್ವರೂಪವನ್ನು ಈ ಮಂತ್ರದಲ್ಲಿ ವ್ಯಕ್ತಪಡಿಸಿರುವನೋ ಆ ಶಂಕರನು ನನ್ನಲ್ಲಿ ನೆಲಸಿರುವನು.

ಅರುಣ – 'ಅ', 'ರು', 'ಣ' – ಎನ್ನುವುದು ಸತ್, ಚಿತ್, ಆನಂದಗಳನ್ನು ಸೂಚಿಸುತ್ತವೆ; 'ತತ್ ತ್ವಂ ಅಸಿ' ಎಂಬ ಮಹಾ ವಾಕ್ಯದಲ್ಲಿ ಹೇಳಿರುವುದೇ ಪರಮಾತ್ಮ, ಜೀವಾತ್ಮಗಳ ಏಕತೆ. 'ಅಚಲ' ಎನ್ನುವುದು ಪರಿಪೂರ್ಣತೆಯನ್ನು ಹೇಳುತ್ತದೆ. ಆದ್ದರಿಂದ ಆ ಪರಮಾತ್ಮನ ಧ್ಯಾನಕ್ಕಾಗಿ ಸ್ವರ್ಣಕಾಂತಿಯ ಅರುಣಾಚಲದ ಪೂಜೆಯು ಮೋಕ್ಷದಾಯಕ.

"ನೀನೇ ನನ್ನ ತಂದೆ, ನೀನೇ ನನ್ನ ತಾಯಿ, ನೀನೇ ನನ್ನ ಬಂಧು ಬಾಂಧವ, ನನ್ನ ಸಕಲ ಸಂಪತ್ತು" ಮೊದಲಾಗಿ ಒಂದು ಹಾಡನ್ನು ಪ್ರಾರ್ಥನೆಯಾಗಿ ಹಾಡಲಾಯಿತು. ಶ್ರೀ ರಮಣರು ಮುಗುಳುನಗೆಯಿಂದ ಹೀಗೆ ನುಡಿದರು: "ಹೌದು, ಹೌದು, ನೀನೇ ಅದು, ಇದು ಮತ್ತು ಇನ್ನೊಂದು; ಎಲ್ಲವೂ ನೀನೇ; 'ನಾನು' ಎನ್ನುವ ಒಂದನ್ನು ಬಿಟ್ಟು, 'ನಾನೇ ನೀನಾಗಿರುವೆ' ಎಂದು ಹೇಳಿ ಆ ಅಹಂಕಾರವನ್ನು ಬಿಡಬಾರದು?

**–ಶ್ರೀ ರಮಣ ಮಹರ್ಷಿ**



## ಪ್ರಾಸ್ತಾವಿಕ

ಭಗವಾನ್ ಶ್ರೀ ರಮಣ ಮಹರ್ಷಿಗಳು ಮೋಕ್ಷದ ಸಾಕಾರಮೂರ್ತಿ, ಪರಮ ಶಾಂತಿಯ ಮೂಲ ಮತ್ತು ಸೀಮಾರಹಿತ ಸ್ವಾತಂತ್ರ್ಯ ಸಾಗರ. ಅವರೇ ಭೂಮಿಯ ಮೇಲಿನ ಬದುಕಿನ ಒಗಟಿಗೆಲ್ಲಾ ಉತ್ತರ.

ಅವರ ಘನಗಂಭೀರವಾದ ದವ್ಯಸನ್ನಿಧಿಯು ನಮ್ಮ ದೇಹ, ಮಿದುಳುಗಳಿಂದ ನಮ್ಮನ್ನು ಉನ್ನತಿಗೇರಿಸಿ ನಮ್ಮನ್ನು ಆತ್ಮಸಾಕ್ಷಾತ್ಕಾರದತ್ತ ಒಯ್ಯುತ್ತದೆ. ಅವರ ದಿವ್ಯಸನ್ನಿಧಿಯಲ್ಲಿನ ಈ ಆತ್ಮಸಾಕ್ಷಾತ್ಕಾರ ನಮ್ಮ ನರನಾಡಿಗಳ ಮೂಲಕ ಹರಿಯುತ್ತದೆಯೋ, ನಮ್ಮ ಹೃದಯದಲ್ಲಿ ಮಿಡಿಯುತ್ತಿದೆಯೋ, ನಮ್ಮ ಹೃದಯದ ಮಿಡಿತ ತುಡಿತಗಳೊಡನೆ ಮೇಳೈಸಿದೆಯೋ ಎನ್ನುವಂತಿತ್ತು.

ಅವರ ಮಾತುಗಳು ಇಂದಿಗೂ, ಅನಂತವೂ ನಿತ್ಯವೂ ಅವಿನಾಶಿಯೂ (deathless) ಆದ ನಮ್ಮ ಆತ್ಮದ ಸ್ವರ್ಗೀಯ ಆನಂದದಲ್ಲಿರುವಂತೆ ಮಾಡುತ್ತದೆ. ಅವರ ಮೌನವೂ ಪವಿತ್ರವೂ ಆದ ನೋಟಕ್ಕೆ ಆತ್ಮಜ್ಞಾನದ ಅಮೃತ ಸಿಂಚನಗೈಯುವ ಶಕ್ತಿಯಿತ್ತು; ಅದು ನಮ್ಮ ಮನೋಧರ್ಮದ ಹಾಗೂ ಬದುಕಿನ ಜೀವಶಕ್ತಿಯಾಗುತ್ತಿತ್ತು.

ಭಗವಾನ್ ಶ್ರೀ ರಮಣರು ಮನುಕುಲದ ಆದರ್ಶಪುರುಷರು. ಅವರು ಆಧ್ಯಾತ್ಮಿಕ ಶಾಂತಿಯ ಸುಗಂಧವನ್ನು ಸೂಸುವ ಅದ್ಭುತ ವ್ಯಕ್ತಿ. ಅವರು ಪ್ರಕಾಂಡ ಧೀಮಂತರ ಹಿಂದಿನ ನಿಗೂಢ ತತ್ತ್ವ. ಅವರ ಬದುಕು ಕ್ರಿಯಾತ್ಮಕ ಮೌನವನ್ನಾಧರಿಸಿದ ದಿವ್ಯ ಜ್ಯೋತಿಯ ಅಧ್ಯಯನ.

ಅವರ ಸನ್ನಿಧಿಯಲ್ಲಿದ್ದರೆ ಸಾಕು, ಇಹಲೋಕದ ತಾಪತ್ರಯಗಳು, ನೋವುಗಳು ಬೆಂಕಿಯ ಮುಂದಿನ ಹಿಮಗಡ್ಡೆಯಂತೆ ಕರಗಿ ನೀರಾಗುತ್ತವೆ. ಕಣ್ಮರೆಯಾದ ದಿವ್ಯಜ್ಞಾನತಂತ್ರದ ಆವಿಷ್ಕಾರ ಅವರದು. ಇದು ಮಾನವಕುಲಕ್ಕೆ ಒಂದು ವರ.

ಅವರು ಯಾವುದರಿಂದಲೂ ನಿರ್ಬಂಧಕ್ಕೊಳಗಾಗದೆ ಬದುಕಿನ ಎಲ್ಲಾ ಮುಖಗಳನ್ನೂ ಸ್ಪರ್ಶಿಸುತ್ತಾರೆ. ಯಾವುದೇ ದಾರ್ಶನಿಕ ಪಂಥ, ಆರಾಧನಾ ಪದ್ಧತಿ, ಮತ ಸಿದ್ಧಾಂತಗಳು ಅವರನ್ನು ತಮ್ಮವರೆಂದು ಹೇಳಲಾಗದು; ಏಕೆಂದರೆ ಅವರು ಯಾವುದೇ ಸಿದ್ಧ ವರ್ಗೀಕರಣಕ್ಕೆ ಸುಲಭವಾಗಿ ಹೊಂದುವುದಿಲ್ಲ. ಅವರು ಸ್ವತಂತ್ರವಾಗಿ ಬದುಕಿದರು, ಸ್ವತಂತ್ರವಾಗಿಯೇ ಉಳಿದರು; ಮತ್ತು ಅದೇ ರೀತಿ ಪ್ರತಿಯೊಬ್ಬರನ್ನೂ ಸ್ವತಂತ್ರವಾಗೇ ಉಳಿಯಲು ಬಿಟ್ಟರು.

ಋಷಿ, ದಾರ್ಶನಿಕ, ಏಕಾಂತಿ, ಅವತಾರ ಪುರುಷ – ಈ ಯಾವ ಪದಗಳೂ ಅವರನ್ನು ಸರಿಯಾಗಿ ಬಣ್ಣಿಸಲಾರವು. ಅವೆಲ್ಲವೂ ಸಪ್ಪೆಯಾಗುತ್ತವೆ; ಏಕೆಂದರೆ ಅವರು ಇವೆಲ್ಲವನ್ನೂ ಮೀರಿದವರು. ಅವರು ಹಿಂದಿನ ಯಾವುದೋ ಒಂದು ಸಂಪ್ರದಾಯದ, ಪರಂಪರೆಯ ಇಂದಿನ ಉತ್ಪನ್ನವಲ್ಲ.

ಯಾವುದೇ ಗುರುವಾಗಲಿ, ಶಾಸ್ತ್ರಗಳಾಗಲಿ ಅವರನ್ನು ಮಹಾನ್ ವ್ಯಕ್ತಿಯನ್ನಾಗಿಯೋ ಜ್ಞಾನಿಯನ್ನಾಗಿಯೋ ಮಾಡಲಿಲ್ಲ. ಅವರು ತಾನೇ ತಾನಾಗಿ,

ನಿಜ ಸ್ವರೂಪದಲ್ಲಿದ್ದು ಅನನ್ಯವಾಗಿದ್ದರು. ಶಾಸ್ತ್ರಗಳು ಹಾಗೂ ಭಾಷ್ಯಗಳಲ್ಲಿನ ಅವರ ಸೈದ್ಧಾಂತಿಕ ಜ್ಞಾನ ಆತ್ಮಸಾಕ್ಷಾತ್ಕಾರದ ನಂತರ ಅವರಿಗೆ ಪ್ರಾಪ್ತವಾಯಿತು. ಅವರೇ ಸ್ವತಃ ಅನ್ವೇಷಣೆಯೂ ಪರಮ ಪುರುಷಾರ್ಥವೂ ಆಗಿದ್ದರು.

ಅವರು ನಮ್ಮದೇ ಸಹಜವಾದ, ಸ್ಪಷ್ಟವಾದ, ಬಟ್ಟಬಯಲಾದ, ಸೃಷ್ಟಿಸುವಂಥದ್ದಾಗಲಿ ಸಾಧಿಸಿ ಪಡೆಯುವಂಥದಾಗಲಿ ಅಲ್ಲದ, ಸ್ವಯಂ ವೇದ್ಯವಾದ, ಆದಿ ಅಂತ್ಯಗಳಿಲ್ಲದ, ನಿತ್ಯವಾದ, ಬದುಕಿನ ಮಹತ್ವಪೂರ್ಣವೂ ಪರಮ ಪುರುಷಾರ್ಥವೂ ಆದ ದಿವ್ಯ ಪ್ರಜ್ಞೆಯನ್ನು ಅನ್ವೇಷಿಸಲು ನಮಗೆ ದಾರಿ ತೋರಿಸಿಕೊಟ್ಟರು.

ಅಂಥ ಸಾಕ್ಷಾತ್ಕಾರವು ಪ್ರತಿಯೊಬ್ಬರಿಗೂ ಅಂತಿಮವಾಗಿ ಶುದ್ಧ ಚೈತನ್ಯವನ್ನು ನೀಡುತ್ತದೆ. ಇದು ನಿರಾಕಾರವೂ, ಕಾಲಾತೀತವೂ, ಆಕಾಶಾತೀತವೂ, ಅಹೇತುಕವೂ, ಅಹಂಕಾರರಹಿತವೂ, ಸ್ವತಂತ್ರವೂ, ಶಾಂತವೂ ಆದ ಸ್ಥಿತಿ. ಪ್ರತಿಯೊಬ್ಬರ ಬಾಗಿಲ ಬಳಿ ನಿಲ್ಲುವ ಮಹಿಮಾನ್ವಿತ ದಿವ್ಯಜ್ಞಾನಕ್ಕೆ ಅವರೇ ಸಾಕ್ಷಿ.

ಹೀಗಾಗಿ ನಮ್ಮ ಹೃದಯ ವಿಶ್ವದ ಹೃದಯ. ಭ್ರಮೆಗಳು, ಕನಸುಗಳು, ಗೊಂದಲಗಳು, ವಿರೋಧಗಳು ಕಾಲ್ತೆಗೆದು, ಒಬ್ಬನ – ಅವನು ಕರಿಯನೇ ಆಗಿರಲಿ, ಕಂದು ಬಣ್ಣದವನೇ ಆಗಿರಲಿ, ಬಿಳಿಯನೇ ಆಗಿರಲಿ, ಹಳದಿಯವನೇ ಆಗಿರಲಿ – ಬದುಕಿನಲ್ಲಿ ಕರುಣಾಳು ಬೆಳಕಿನಿಂದ ಜ್ಞಾನೋದಯವಾಗುತ್ತದೆ.

ಈಗಿನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬೇನೆಗಳಿಲ್ಲದ ಮತ್ತು ಅವುಗಳ ನೂರೊಂದು ಪ್ರೇತಗಳಿಲ್ಲದ, ಕಳೆದುಹೋದ ಆಸ್ತಿಯನ್ನು, ಸಂತೋಷವನ್ನು ಮನುಕುಲಕ್ಕೆ ಮರಳಿ ತಂದ ಸರ್ವರೋಗ ನಿವಾರಕರು ಅವರು. ಮಾನವನನ್ನು ಮಾನವನಿಂದ, ವರ್ಗವನ್ನು ವರ್ಗದಿಂದ, ರಾಷ್ಟ್ರವನ್ನು ರಾಷ್ಟ್ರದಿಂದ ಒಡೆದು ಹೊಸದನ್ನು ಕಳೆಗಳಂತೆ ಸೃಷ್ಟಿಸುವ ತೊಂದರೆಗಳಿಗೆ ಪರಿಹಾರವು ಮಾನವಕುಲದ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದರಲ್ಲಿದೆ.

ಆಧ್ಯಾತ್ಮಿಕ ತಳಹದಿಯಿಲ್ಲದೆ, ನೈತಿಕ ತಳಹದಿಯಿಲ್ಲದೆ, ಮೈತ್ರಿಭಾವ, ಭ್ರಾತೃಭಾವ, ಮತ್ತು ನೆರೆಹೊರೆಕೆಗಳ ಮೌಲ್ಯವನ್ನು ಮನಗಾಣದೆ ಯಾವುದೇ ಸಮಾಜವಾಗಲಿ ದೇಶವಾಗಲಿ ಉಳಿದಿರಲಾರದು. ಅಂಥ ಉನ್ನತ ಜೀವನದ ಮಹೋನ್ನತ ಪರಿಸರದಿಂದ ಎಲ್ಲಾ ತೊಂದರೆಗಳು ತಿಕ್ಕಾಟಗಳು, ದ್ವೇಷ ಮಾತ್ಸರ್ಯಗಳು ಮತ್ತು ವೈಷಮ್ಯಗಳೂ ತಂತಾನೆ ಕೊನೆಗೊಳ್ಳುತ್ತವೆ. ಅಂಥ ದಿವ್ಯ ಸಾಂತ್ವನಕಾರಿಯು ಈಗ ತಿರುಗುಮುರುಗಾಗಿ ಅವ್ಯವಸ್ಥೆಯಲ್ಲಿರುವ, ಮನುಷ್ಯನ ದೇಹ, ಮನಸ್ಸು ಮತ್ತು ಆತ್ಮಗಳೆಂಬ ಮುಕ್ಕೂಟದ ನೋವುಗಳನ್ನು ಹೋಗಲಾಡಿಸುತ್ತದೆ; ಮತ್ತು ಅದರ ಕಳೆದುಹೋದ ಸ್ಥಿತಪ್ರಜ್ಞೆಯನ್ನು ಹಿಂದಕ್ಕೆ ತರುತ್ತದೆ.

ದೈವತ್ವದ ಲೋಕದಲ್ಲಿ ನಿಜವಾಗಿ ಕಣ್ಣಿಗೆ ಕಾಣದ ಬಲಗಳಿವೆ; ಅವು ಶಕ್ತಿ, ಶಾಂತಿ ಮತ್ತು ಬಾಹುಳ್ಯಗಳ ನಿಜವಾದ ಆಕರಗಳು. ಶ್ರೀ ರಮಣ ಮಹರ್ಷಿಗಳು ನಮ್ಮಲ್ಲಿ ಪ್ರತಿಯೊಬ್ಬರನ್ನೂ ಆಧ್ಯಾತ್ಮಿಕ ಸ್ವರ್ಗದ ಆನಂದಕ್ಕೆ ಜಾಗೃತಗೊಳಿಸುತ್ತಾರೆ; ಆ ಸ್ವರ್ಗದಲ್ಲಿ ಕಿಂಚಿತ್ತೂ ಲೌಕಿಕತೆ ಇಲ್ಲದ ಎಲ್ಲಾ ಲೋಕಗಳೂ ಇವೆ.

ಭಗವಾನರ ತತ್ತ್ವ ಆತ್ಮದ ಪ್ರಾಯೋಗಿಕ ತತ್ತ್ವ. ಅದೇ ಸತ್ಯ, ಜ್ಞಾನ, ಮತ್ತು ಆನಂದ. ಅದರ ಗಡಿಯನ್ನು ತೀರ್ಮಾನಗಳಿಂದ ಮತ್ತು ಭೇದಗಳಿಂದ ಗುರುತು ಮಾಡಲಾಗದು. ಸಂದೇಹವಾದ (scepticism), ಅಜ್ಞೇಯತಾವಾದ(agnosticism)ವಾಗಿ



ಪರಿಣಮಿಸಲು ಅದು ಮನಸ್ಸಿಗೆ ಹೊರಗಿನದಲ್ಲ ಅಥವಾ ಭಾವನಾಮಾತ್ರದ್ದಲ್ಲ. ಭೌತವಾದ (materialism) ಮತ್ತು ಪ್ರಕೃತಿವಾದ(naturalism)ವಾಗಲು ಅದು ಇಂದ್ರಿಯಗ್ರಾಹ್ಯ ವಿಷಯವಲ್ಲ. ವ್ಯಕ್ತಿನಿಷ್ಠ ಪ್ರಾಮಾಣ್ಯವಾದ (subjectivism) ಮತ್ತು ಸ್ವಾತ್ಮೈಕಮಾತ್ರತಾವಾದ (solipsism)ವಾಗಲು ಅದು ಭಾವನೆಗಳ ಪ್ರವಾಹವಲ್ಲ. ಅದು ಜಗನ್ಮಿಥ್ಯಾವಾದ (acosmics) ಅಲ್ಲ, ಮನುಷ್ಯತ್ವಾರೋಪವಾದ (anthromorplism) ಅಲ್ಲ, ಸೈತಾನನೂ ದೇವರಂತೆ ನಿತ್ಯ ಮತ್ತು ದೇವರ ನಿತ್ಯ ವೈರಿ ಎನ್ನುವ ಮ್ಯಾನಿಕಿ ಸಿದ್ಧಾಂತವೂ (Manicheism) ಅಲ್ಲ; ಅಥವಾ ಅಂಥದೇ ಬೇರಾವ ವಾದವೂ ಅಲ್ಲ. ಅದು ಭಾವನಾವಾದವಾಗಲಿ (idealism), ನಿರಾಶಾವಾದವಾಗಲಿ (pessimism) ಅಲ್ಲ. ಅಥವಾ ಎಲ್ಲಾ ವಾದಗಳ(isms)ಗಳ ಸಮ್ಮಿಶ್ರಣವೂ ಅಲ್ಲ.

ಸತ್ಯ ಎನ್ನುವುದು ಅಸ್ತಿತ್ವವೇ ಆಗಿದೆ. ಅದು ಪ್ರಜ್ಞೆಯೇ ಆಗಿದೆ. ವಸ್ತುಗಳು ಅನುಭವಜನ್ಯ ಜ್ಞಾನದಲ್ಲಿ ಭೇದವನ್ನು ತರುತ್ತವೆ; ಅಭೇದವಾದ, ಅದ್ವೈತವಾದ ಆತ್ಮಕ್ಕೆ ಅನ್ವಯವಾಗದು.

ಭಗವಾನ್ ಶ್ರೀ ರಮಣರು ಅಸ್ತಿತ್ವದ ಏಕತೆಗೆ, ಭಗವಂತನ ಅದ್ವೈತತೆಗೆ, ಮತಧರ್ಮಗಳ ಸಾಮರಸ್ಯವನ್ನು ಬೆಂಬಲಿಸುತ್ತಾರೆ. ಅವರು ಪ್ರಶಾಂತತೆ, ಉದಾತ್ತತೆ ಮತ್ತು ಗಂಭೀರತೆಗಳನ್ನು ಪ್ರಸರಿಸುತ್ತಾ ಆತ್ಮದ ಆಗಸದಲ್ಲಿ ಜ್ಞಾನಸೂರ್ಯನಾಗಿ ಬೆಳಗುತ್ತಾರೆ. ಅವರು ದಾರಿದೀಪವಾಗಿ ದಾರಿತೋರುವ ಮಾರ್ಗದರ್ಶಕ, ಆಧ್ಯಾತ್ಮಿಕ ಚಾಲಶಕ್ತಿ.

ಅವರ ಉಪದೇಶಗಳು ಚೇತೋಹಾರಿಯಾಗುವಷ್ಟು ಸ್ಪಷ್ಟ ಮತ್ತು ಶಕ್ತಿಯುತ. ಅವು ಆತ್ಮದ ಪ್ರವಾಹದ್ವಾರಗಳನ್ನು, ತೂಬುಗಳನ್ನು ತೆರೆದು ಅತ್ಯುತ್ಕೃಷ್ಟ ಚೈತನ್ಯದ ಜೀವಜಲ ನುಗ್ಗುವಂತೆ ಮಾಡುತ್ತದೆ.

ಅವರ ವಿಚಾರಕ್ಕೆಡೆಗೊಡದ ನಂಬಿಕೆಯಿಂದ ಮುಕ್ತವಾದ ತತ್ತ್ವವು ಓಬೀರಾಯನ ಕಾಲದ ಸಂಪ್ರದಾಯಗಳಿಂದ ಬಂಧಿತವಾಗಿಲ್ಲ. ಅದು ಆಕಾಶದಷ್ಟು ವಿಶಾಲ, ಸಮುದ್ರದಷ್ಟು ಆಳ, ಸೂರ್ಯರಶ್ಮಿಗಳಷ್ಟು ಸಾರ್ವತ್ರಿಕ. ಅವರು ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಶಾಂತವಾದ ವಿದ್ಯಮಾನದ ಹಿಂದೆ ಇರುವ, ಸುಪ್ತವಾದ ದೈವತ್ವವನ್ನು, ಗುಪ್ತಶಕ್ತಿಯನ್ನು, ಮೂಲಭೂತ ತತ್ತ್ವವನ್ನು ಉದ್ದೀಪನಗೊಳಿಸುವರು. ಅವರ ಜೀವನವೇ ಬ್ರಹ್ಮಸತ್ಯದ, ಪರಮಾತ್ಮನ ಮತ್ತು ಇಂದ್ರಿಯಗ್ರಾಹ್ಯ ಜಗತ್ತಿನ ಅವಾಸ್ತವಿಕತೆಯ ಪ್ರದರ್ಶನ.

ಅವರ ತತ್ತ್ವೋಪದೇಶವು ಆತ್ಮದ ದೈವತ್ವವನ್ನು, ಮಾನವಕುಲದ ಏಕತೆ ಮತ್ತು ಭಗವಂತನ ಅವಿಭಾಜ್ಯತೆಗಳನ್ನು – ನಂಬಿಕೆ ಅಥವಾ ಅಭಿಪ್ರಾಯ, ಆರಾಧನೆ ಅಥವಾ ನಂಬಿಕೆಗಳು, ಮೂಢನಂಬಿಕೆಗಳು ಅಥವಾ ಸಿದ್ಧಾಂತಗಳಲ್ಲದೆ ತಮ್ಮ ಅನುಭವದ ಸತ್ಯಗಳಾಗಿ ಹೊರಗೆಡಹಿದ್ದಾರೆ. ಭಗವಾನರನ್ನು ಅರಿಯುವುದು ಸ್ವತಃ ಭಗವಾನರೇ ಆಗುವುದು; ಏಕೆಂದರೆ ಅವರೇ ದೇವರು, ದೇವರೇ ಅರಿವು.

ಭಗವಾನರ ಪವಿತ್ರ ತುಟಿಗಳಿಂದ ಉಸುರಿದ ಒಂದೇ ಒಂದು ಪದವೇ ನಮ್ಮ ಜೀವನದುದ್ದಕ್ಕೂ ನಮ್ಮ ಆತ್ಮವನ್ನು ಉತ್ತೇಜಿಸಿ, ಅದರ ಸಹಜವಾದ ಅಮರತ್ವ ಮತ್ತು ಅನಂತತೆಯ ಬಗ್ಗೆ ಜಾಗೃತಿಗೊಳಿಸಲು ಸಾಕು. ಆದರೆ ದಿವ್ಯ ಜ್ಞಾನವಿಲ್ಲದೆ, ವೇದಿಕೆಗಳ

ಮೇಲಿಂದ ಮಾಡಿದ ಭವ್ಯ ಭಾಷಣಗಳು ಯಾವುದೇ ಪರಿಣಾಮ ಬೀರದೆ ಒಂದು ಕಿವಿಯ ಮೇಲೆ ಬಿದ್ದು ಇನ್ನೊಂದು ಕಿವಿಯಿಂದ ಹೊರಹೋಗುವಂಥವು.

ಭಗವಾನರ ಪವಿತ್ರವೂ ಗಂಭೀರವೂ ಆದ ಮೌನವು ಮಾತುಗಳಿಗಿಂತ ಗಟ್ಟಿಯಾಗಿ ಮಾತಾಡುತ್ತದೆ; ಮತ್ತು ಅವರ ಗಂಭೀರವೂ ಭವ್ಯವೂ ಆದ ನೋಟವೂ ಸ್ಪಷ್ಟವಾಗಿ ಪ್ರಭಾವಪೂರ್ಣವಾಗಿತ್ತು.

ಐಹಿಕ ಜಗತ್ತಿನ ಸೃಷ್ಟಿ ಮತ್ತು ಲಯಗಳು ಅವರಲ್ಲಿ ಇಲ್ಲ; ಅಥವಾ ಅವರಿಗಾಗಿ ಇಲ್ಲ. ನಾವು ಅವರನ್ನು ಎಲ್ಲೆಂದರಲ್ಲಿ ಕಾಣಲಾಗದು; ಆದರೆ ಅವರನ್ನು ಪ್ರತಿಯೊಂದು ಕಡೆಯೂ ಕಾಣಬಹುದು (ಸಾಕ್ಷಾತ್ಕರಿಸಿಕೊಳ್ಳಬಹುದು). ಅವರೊಬ್ಬರೇ ಪ್ರತಿಯೊಂದು ಮುಖದಿಂದಲೂ ಬೆಳಗುವರು.

ಅವರು ಜ್ಞಾನಿಗಳ ಜ್ಞಾನ, ಬಲಿಷ್ಠರ ಬಲ, ಮಿದುಳಿನ ಬುದ್ಧಿಯ ಹೊಳಹು, ಮತ್ತು ಆತ್ಮದ ಪ್ರಕಾಶ. ಅವರು ನಿಜವಾದ "ನಾನು", ನಮ್ಮ ಎಲ್ಲಾ ತೋರ್ಕೆಯ "ನಾನು–ಗಳ" ಅನೇಕಗಳ ಏಕ.

ಅವರು ಎಲ್ಲಾ ಸಣ್ಣಪುಟ್ಟ ಪ್ರಜ್ಞೆಗಳನ್ನು – ಬಾಹ್ಯ, ಅಂತರಂಗ, ಸಂಚಯಿತ, ಮಧ್ಯವರ್ತಿ ಮತ್ತು ಏಕರೀತಿಯವು – ಒಳಗೊಂಡ ಮತ್ತು ಅವುಗಳಿಂದ ಅತೀತರಾದ ಪರಮಪ್ರಜ್ಞೆ.

ಅವರು ನಮ್ಮೊಳಗಿರುವ ಏಕೈಕ ಸತ್ಯ, ನಾವು ಅವರ ಅಭಿವ್ಯಕ್ತಿ ಮಾತ್ರ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಆ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಶಕ್ತಿಯಿಲ್ಲದಿರಬಹುದು. ಆದರೆ ನಾವು ಅದನ್ನು ಒಂದೇ ಒಂದು ಸಲವೂ ಕೀಳಾಗಿ ಕಾಣಬರದು. ಒಂದಲ್ಲ ಒಂದು ದಿನ ಭಗವಾನರ ದಿವ್ಯ ಅಸ್ತಿತ್ವ ನಮ್ಮ ಬದುಕುಗಳಲ್ಲಿನ ಜೀವಂತ ಸತ್ಯವೆಂದು ಹೇಳಲೇಬೇಕಾಗುತ್ತದೆ.

ಅವರು ಪರತತ್ತ್ವ ಮತ್ತು ಅನಂತ ಸ್ವರೂಪಿಯಾದ ಭಗವಂತ. ಅವರು ಅಮೃತತ್ವದಲ್ಲಿ ನೆಲೆಯಾಗಿ ನಿಂತ ಶಾಶ್ವತ ಪುರುಷ (the Eternal). ಅವರು ಜೀವಾತ್ಮಗಳ ತ್ರಿಜ್ಯಗಳು ಬಂದು ಸೇರುವ ಕೇಂದ್ರ. ಪರಿಧಿಯಿಲ್ಲದ ವೃತ್ತದ ಕೇಂದ್ರ ಅವರು. ಅವರು ಕೇಂದ್ರವೂ ಹೌದು, ಪರಿಧಿಯೂ ಹೌದು.

ವ್ಯಕ್ತಿಪ್ರಜ್ಞೆಯ ರಚನೆಯನ್ನು ಭೇದಿಸಿದಾಗ, ಶ್ರೀ ರಮಣರು ತಮ್ಮ ದಿವ್ಯ ಗಾಂಭೀರ್ಯದಿಂದಲೂ, ಆನಂದಮಯವಾಗಿಯೂ ಮಹಾಮಹಿಮೆಯಿಂದಲೂ ವಿರಾಜಮಾನರಾಗಿರುತ್ತಾರೆ. ಆಗ ನಾವು ಅವರನ್ನು ಮುಖಾಮುಖಿ ಎದುರಾಗುತ್ತೇವೆ.

ವಿಶ್ವದ ಮಧುರಗಾನದಲ್ಲಿ ಅವರೇ ಸ್ವರಮೇಳ ಮತ್ತು ಶಾಂತಿ. ಜ್ಞಾನದೇಗುಲದಲ್ಲಿ, ಪ್ರತಿಯೊಂದು ಆತ್ಮದ ಗುಡಿಯಲ್ಲಿ, ವಿಶ್ವದ ಮಂದಿರದಲ್ಲಿ ಅವರೊಬ್ಬರೇ ಏಕೈಕ ಸತ್ಯ.

ಅವರು ಈ ಭೂಮಂಡಲದ ಅನೇಕತೆಗಳೆಲ್ಲದರ ಮಧ್ಯೆ ಇರುವ ಏಕತೆ. ಅವರು ಎಲ್ಲಾ ವಾದಗಳು (isms), ಪಂಥಗಳು, ಜಾತಿ, ಧರ್ಮ, ವರ್ಣ, ದೇಶ ಮೊದಲಾದವುಗಳನ್ನು ಮೀರಿದವರು. ಅವರು ನಮ್ಮಲ್ಲಿ ಲಿಂಗರಹಿತ ಆತ್ಮ, ಅಮರ್ತ್ಯರೂ ಸರ್ವಾಂತರ್ಯಾಮಿಯೂ ಸರ್ವಶಕ್ತರೂ ಸರ್ವಜ್ಞರೂ ಆಗಿದ್ದಾರೆ.

ಶ್ರೀ ರಮಣರ ಸತ್ಯತೆ ಪ್ರಾಂತೀಯವಾಗಲಿ ಸೀಮಿತವಾದದ್ದಾಗಲಿ ಅಲ್ಲ. ಸತ್ಯದಲ್ಲಿ ಪ್ರಾಂತೀಯ ಮನೋಭಾವನೆಯೆನ್ನುವುದು ಶಬ್ದವಿರೋಧ. ಸರ್ವೋಚ್ಚ ಸತ್ಯಕ್ಕೆ



ಎಲ್ಲೆಗೆರೆಗಳಿಲ್ಲ; ಅದು ಗಡಿಯಿಂದ ಗಡಿಗೆ ಸಾಗುವುದಿಲ್ಲ. ಅನಂತ ಸ್ವರೂಪಿ ಪರಮಾತ್ಮನಲ್ಲಿ ಭೇದವಿಲ್ಲ.

ನಮಗೆ ಶ್ರದ್ಧೆ, ನಂಬಿಕೆ ಹೋದಾಗಲೋ, ನಮ್ಮ ಮೇಲೇ ನಂಬಿಕೆ ಹೋದಾಗಲೋ, ಪ್ರಮಾದಗಳನ್ನು ಎಸಗಿದಾಗಲೋ ನಮ್ಮನ್ನು ಕೆಳಕ್ಕೆಳೆಯುವ ನಮ್ಮ ನೀಚಪ್ರವೃತ್ತಿಗಳ ಮೇಲೆ ಜಯ ಸಾಧಿಸಲು ದೈವತ್ವದ ಧೈರ್ಯ ಮತ್ತು ಮಹಾವಿಶ್ವಾಸಗಳನ್ನು ನಮ್ಮಲ್ಲಿ ತುಂಬುವಂತೆ ಶ್ರೀ ರಮಣರನ್ನು ಕೇಳಿಕೊಂಡು ಧ್ಯಾನಿಸೋಣ. ಒಬ್ಬ ಋಷಿಯನ್ನು ಸತತವಾದ ಧ್ಯಾನದಿಂದ ಉಳಿಸುವುದು, ಮರೆತು ಅಳಿಸುವುದು ನಮ್ಮ ಕೈಯಲ್ಲಿದೆ.

ಜೀವನದಲ್ಲಿ ಉದಾತ್ತವೂ ಭವ್ಯವೂ ಆದ ದೃಢವಾದ ಉದ್ದೇಶದಿಂದ ನೆಲೆಯಾಗಿ ಇರೋಣ ಮತ್ತು ಚಂಚಲವಾದ ಮನಸ್ಸಿನಿಂದ ವಿಚಲಿತವಾಗುವುದು ಬೇಡ. ನಮ್ಮೊಳಗಿರುವ ಶ್ರೀ ರಮಣರ ಜೀವಂತ ಹಾಗೂ ಮುಕ್ತ ಆತ್ಮರು ಪ್ರಕಟವಾಗಿ ಪರಿಪೂರ್ಣರಾಗಿ ಅರಳೋಣ. ನಮ್ಮದೇ ಆದರ್ಶ ವರಪ್ರಸಾದವಾದ ಪರಮಾತ್ಮ ಸಾಕ್ಷಾತ್ಕಾರವನ್ನು ಹಾಳುಮಾಡಿಕೊಳ್ಳುವುದು ಬೇಡ.

ಈ ಲೇಖಕರು ಸುಮಾರು ನಲವತ್ತು ವರ್ಷಗಳ ಕಾಲ ಭಗವಾನ್ ಶ್ರೀ ರಮಣರ ಸಂಪರ್ಕಹೊಂದುವ ಅಪರೂಪವಾದ ಪುಣ್ಯವಿಶೇಷ ಪಡೆದಿದ್ದರು. ಅವರಿಗೆ ಭಗವಾನರ ಪಾದಕಮಲಗಳ ಸನ್ನಿಧಿಯಲ್ಲಿ ಸಂತತವಾಗಿ ತಿಂಗಳುಗಟ್ಟಲೆ ಕಾಲ ಇರುವ ಅನೇಕ ಅವಕಾಶಗಳು ದೊರೆತವು. ನಿಮ್ಮ ಪ್ರೀತಿಪಾತ್ರರೂ, ಪರಮಪಾವನರೂ ಆದ ಭಗವಾನರ ಪವಿತ್ರ ಪಾದಗಳ ಒಂದು ಧೂಳಿ, ಅಷ್ಟೆ ಎಂದು ಈ ಲೇಖಕರು ಹೃದಯಾಂತರಾಳದಿಂದ ಭಾವಿಸಿ, ಈ ಪ್ರಕಟಣೆಯನ್ನು ಅವರಿಗೆ ಗೌರವದ ಕಾಣಿಕೆಯಾಗಿ ಅರ್ಪಿಸುತ್ತಾರೆ.

**ಸ್ವಾಮಿ ರಾಜೇಶ್ವರಾನಂದ**

ಶ್ರೀ ರಮಣ ಆಶ್ರಮ,
ತಿರುವಣ್ಣಾಮಲೆ,
ತಮಿಳು ನಾಡು, ಭಾರತ.

ಓಂ ಶ್ರೀ ರಮಣ ಅರ್ಪಣಮಸ್ತು!

Blank



## ಪರಿವಿಡಿ


| | |
|---|---|
| ಮುನ್ನುಡಿ | v |
| ಸಂದೇಶ | vii |
| ಹಾರೈಕೆ | viii |
| ಪ್ರಾಸ್ತಾವಿಕ ನುಡಿ | ix |
| ಪೀಠಿಕೆ | xi |
| ಅರಿಕೆ | xiv |
| ಕುಲಪತಿಗಳ ಪ್ರಸ್ತಾವನೆ | xv |
| ಪೀಠಿಕೆ | xvii |
| ಭಿನ್ನಹ | xviii |
| ಪ್ರಾಸ್ತಾವಿಕ | xix |
| ಉಪದೇಶಗಳು | ೧ |
| ಮಾತುಕತೆ | ೩೭ |

Blank



# ಅಹಂ ಅನ್ನು ಅಳಿಸಿ ಹಾಕಿ

## ಉಪದೇಶಗಳು

ಒಂದು ಸಲ ಆಂಧ್ರದ ಒಬ್ಬ ಯುವಕ ಬಂದು ಹೇಳಿದ: "ಭಗವಾನ್, ಮೋಕ್ಷಾಕಾಂಕ್ಷಿಯಾಗಿ, ಮೋಕ್ಷಮಾರ್ಗವನ್ನು ಅರಿಯಲು ಕಾತರನಾಗಿ, ನಾನು ವೇದಾಂತವನ್ನು ಕುರಿತ ಎಲ್ಲಾ ಬಗೆಯ ಕೃತಿಗಳನ್ನೂ ಓದಿದ್ದೇನೆ. ಅವುಗಳೆಲ್ಲ ನಾನಾ ಮಾರ್ಗಗಳನ್ನು ಹೇಳುತ್ತವೆ. ನಾನು ಹಲವಾರು ಜನ ವಿದ್ವಾಂಸರ ಬಳಿ ಹೋಗಿ ಅವರ ಬಳಿ ಇದರ ಬಗ್ಗೆ ಕೇಳಿದಾಗ, ಒಬ್ಬೊಬ್ಬರೂ ಒಂದೊಂದು ದಾರಿಯನ್ನು ಅನುಸರಿಸಬೇಕೆಂದು ಹೇಳಿದರು. ನಾನೀಗ ಗೊಂದಲಕ್ಕೆ ಸಿಲುಕಿ ತಮ್ಮ ಬಳಿ ಬಂದಿರುವೆ. ನಾನು ಯಾವ ದಾರಿ ಹಿಡಿಯಬೇಕೆಂದು ದಯವಿಟ್ಟು ತಿಳಿಸಿ."

ನಗುಮುಖದಿಂದ ಭಗವಾನ್ ನುಡಿದರು: "ಸರಿ, ನೀನು ಯಾವ ದಾರಿಯಿಂದ ಬಂದೆಯೋ ಅದೇ ದಾರಿ ಹಿಡಿ." ಆಗ ಅಲ್ಲಿದ್ದ ಭಕ್ತರೆಲ್ಲ ನಿಬ್ಬೆರಗಾದರು. ಆ ಬಡಪಾಯಿ ಯುವಕನಿಗೆ ಏನು ಹೇಳಬೇಕೋ ತಿಳಿಯದಾಯಿತು. ಭಗವಾನರು ಸಭಾಂಗಣವನ್ನು ಬಿಟ್ಟುಹೋಗುವವರೆಗೆ ಕಾದು, ಅಲ್ಲಿದ್ದವರತ್ತ ಬೇಡುವ ರೀತಿಯಲ್ಲಿ, ಖಿನ್ನವದನನಾಗಿ ಹೇಳಿದ: "ಮಹನೀಯರೆ, ನಾನು ತುಂಬಾ ಆಸೆ ಇಟ್ಟುಕೊಂಡು, ಹಣವನ್ನೂ ತೊಂದರೆಯನ್ನೂ ಲೆಕ್ಕಿಸದೆ, ಮೋಕ್ಷಮಾರ್ಗವನ್ನು ತಿಳಿಯುವ ಕಡುಬಯಕೆಯಿಂದ ಬಹಳ ದೂರದಿಂದ ಬಂದಿದ್ದೇನೆ. ನಾನು ಬಂದ ದಾರಿಯಲ್ಲೇ ಹಿಂದಕ್ಕೆ ಹೋಗು ಎಂದು ಅವರು ನನಗೆ ಹೇಳುವುದು ನ್ಯಾಯವೇ? ಇದು ತಮಾಷೆಯ ಮಾತೇ?"

ಆಗ ಅವರಲ್ಲೊಬ್ಬ ಹೇಳಿದ: "ಇಲ್ಲ ಸ್ವಾಮಿ, ಅದು ತಮಾಷೆಯಲ್ಲ. ಅದು ಸರಿಯಾದ ಉತ್ತರ: 'ನಾನು ಯಾರು?' ಎಂಬುದು ಮೋಕ್ಷಕ್ಕೆ ಅತ್ಯಂತ ಸುಲಭವಾದ ಮಾರ್ಗ. ನೀವು ಅವರನ್ನು ಯಾವ ದಾರಿಯಲ್ಲಿ ಹೋಗಬೇಕೆಂದು ಕೇಳಿದಿರಿ; ಅದಕ್ಕೆ ಅವರು ಹೇಳಿದ 'ನೀವು ಬಂದ ದಾರಿಯಲ್ಲಿ ಹೋಗಿ' ಎಂಬ ಮಾತಿನ ಅರ್ಥವೇನೆಂದರೆ, ಆ 'ನಾನು' ಎಲ್ಲಿಂದ ಬಂತು ಎಂಬುದನ್ನು ಶೋಧನೆ ಮಾಡಿದರೆ, ನಿಮಗೆ ಮೋಕ್ಷ ಲಭಿಸುವುದು ಎಂದರ್ಥ."

ವ್ಯಕ್ತಿಗಾಗಲಿ ಸಮಾಜಕ್ಕಾಗಲಿ ಶಾಂತಿಯೇ ಗುರಿಯಾಗಿರಬೇಕು. ಶಾಂತಿಯು ಆತ್ಮಶುದ್ಧಿಗಾಗಿ, ಅಧಿಕಾರವು ಸಮಾಜೋದ್ಧಾರಕ್ಕಾಗಿ. ಅಧಿಕಾರದಿಂದ ಸಮಾಜದ

ಹಿತ ಸಾಧಿಸಿದನಂತರ, ಅಲ್ಲಿ ಶಾಂತಿ ಸ್ಥಾಪಿಸಬೇಕು. ಸಮಾಜ ಎನ್ನುವುದು ದೇಹ; ಅದರ ಸದಸ್ಯರು ಅಂಗಗಳು, ಅವರ ಕರ್ತವ್ಯಗಳು ಅದರ ಚಟುವಟಿಕೆಗಳು, ಅಂಗಗಳು ಒಳ್ಳೆಯ ಸಾಮರಸ್ಯದಿಂದ ದೇಹದೊಳಗೆ ಕಾರ್ಯನಿರ್ವಹಿಸುವಂತೆ, ಸಮಾಜದ ಸದಸ್ಯನೊಬ್ಬನು ನಿಃಸ್ವಾರ್ಥ ಸೇವೆಯ ಮೂಲಕ ಅದಕ್ಕೆ ನಿಷ್ಠನಾಗಿದ್ದರೆ, ಅವನು ಮುಂದಕ್ಕೆ ಬರುತ್ತಾನೆ. ಕಾಯೇನ, ವಾಚಾ, ಮನಸಾ ಒಬ್ಬನು ನಿಷ್ಠೆಯಿಂದ ಸಮಾಜದ ಸೇವೆ ಮಾಡುತ್ತಾ, ಅವನು ತನ್ನ ಸಮಾಜದ ಇತರ ಸದಸ್ಯರೂ ಅದೇ ರೀತಿ ಸೇವೆ ಮಾಡಬೇಕೆಂದು ಪ್ರೋತ್ಸಾಹಿಸಬೇಕು.

ಗುರುಕೃಪೆ ಯಾವಾಗಲೂ ಇರುತ್ತದೆ. ಅದು ಎಲ್ಲೋ ಮೇಲೆ ಬಲುದೂರದ ಆಕಾಶದಲ್ಲಿದೆಯೆಂದೂ, ಅದು ಅಲ್ಲಿಂದ ಇಳಿದು ಬರಬೇಕೆಂದೂ ನೀವು ಭಾವಿಸುತ್ತೀರಿ. ಅದು ನಿಜವಾಗಿ ನಿಮ್ಮೊಳಗೇ, ನಿಮ್ಮ ಹೃದಯದೊಳಗೇ ಇದೆ. ನಿಮ್ಮ ಮನಸ್ಸನ್ನು ಅದರ ಮೂಲಕ್ಕೆ ಇಳಿಬಿಟ್ಟರೆ ಇಲ್ಲವೆ ಮುಳುಗಿಸಿದರೆ, ನಿಮ್ಮೊಳಗಿನಿಂದ ಕೃಪೆಯು ಕಾರಂಜಿಯಿಂದ ಚಿಮ್ಮುವಂತೆ ಚಿಮ್ಮುತ್ತದೆ.

ಭಕ್ತನೊಬ್ಬನು ಒಂದು ಹಂತವನ್ನು ತಲುಪಿ, ಬೋಧೆಗೆ ಅಧಿಕಾರಿಯಾದಾಗ, ಅವನ ಆರಾಧ್ಯದೈವವೇ ಗುರುವಾಗಿ ಬಂದು ಅವನನ್ನು ಕೈಹಿಡಿದು ನಡೆಸುತ್ತಾನೆ. ಆ ಗುರುವು ಅವನಿಗೆ ಹೀಗೆ ಹೇಳಲು ಮಾತ್ರ ಬರುತ್ತಾನೆ: 'ದೇವರು ನಿನ್ನೊಳಗೇ ಇದ್ದಾನೆ. ಒಳಗೆ ಇಳಿದು ಸಾಕ್ಷಾತ್ಕಾರ ಮಾಡಿಕೊ.' ದೇವರು, ಗುರು ಮತ್ತು ಆತ್ಮ ಇವೆಲ್ಲಾ ಒಂದೇ.

ದೈವಾನುಗ್ರಹವೆಂಬುದು ಆರಂಭ, ಮಧ್ಯ ಮತ್ತು ಅಂತ್ಯ. ದೈವಾನುಗ್ರಹವೇ ಆತ್ಮ. ದೇಹವೇ ಆತ್ಮ ಎಂಬ ತಪ್ಪು ಭಾವನೆಯಿಂದ ದೈವಾನುಗ್ರಹ ಸಶರೀರವಾಗಿ ಬರುವುದೆಂದು ಭಾವಿಸಲಾಗಿದೆ. ಆದರೆ ಗುರುವಿನ ದೃಷ್ಟಿಕೋನ ಆತ್ಮಸಾಕ್ಷಾತ್ಕಾರದತ್ತ. ಆತ್ಮವು ಒಂದೇ. ಆತ್ಮ ಒಂದೇ ನಿತ್ಯ; ಆತ್ಮವೇ ದೈವಕೃಪೆಯಲ್ಲವೇ ಎಂದು ಗುರು ನಿಮಗೆ ಹೇಳುತ್ತಾನೆ. ಭಗವತ್ಕೃಪೆ ಎಲ್ಲಿಂದ ಬರುತ್ತದೆ? ಆತ್ಮದಿಂದಲೇ. ಆತ್ಮ ಪ್ರಕಟವಾದರೆ ಭಗವದನುಗ್ರಹ ಪ್ರಕಟವಾದಂತೆ; ಮತ್ತು ಭಗವದನುಗ್ರಹ ಪ್ರಕಟವಾದರೆ ಆತ್ಮ ಪ್ರಕಟವಾದಂತೆ. ತಪ್ಪು ಗ್ರಹಿಕೆಯಿಂದಲೂ ತನಗೆ ಬಾಹ್ಯವಾದ ವಸ್ತುಗಳಿಂದ ನಿರೀಕ್ಷೆ ಮಾಡುವುದರಿಂದಲೂ ಅದರ ಎಲ್ಲಾ ಸಂಶಯಗಳು ಏಳುತ್ತವೆ.

ಭಗವತ್ಕೃಪೆಯ ಅತ್ಯುತ್ಕೃಷ್ಟ ರೂಪವೇ ಮೌನ. ಅದು ಅತ್ಯುಚ್ಚ ಆಧ್ಯಾತ್ಮಿಕ ಬೋಧನೆ. ಬೋಧನೆಯ ಇತರ ಪ್ರಕಾರಗಳೆಲ್ಲವೂ ಮೌನದಿಂದ ಪಡೆದಂಥವು; ಆದ್ದರಿಂದಲೇ ಗೌಣವಾದವು. ಮೌನವು ಮೂಲಭೂತವಾದ ರೂಪ. ಗುರುವು ಮೌನವಾಗಿದ್ದರೆ, ಸಾಧಕನ, ಶಿಷ್ಯನ ಮನಸ್ಸು ತಂತಾನೇ ಶುದ್ಧವಾಗುತ್ತದೆ.

ಮೌನವೆಂಬುದೇ ಅತ್ಯುತ್ಕೃಷ್ಟ ವಾಗ್ಮಿತೆ. ಶಾಂತಿಯೇ ಅತ್ಯುತ್ಕೃಷ್ಟ ಕ್ರಿಯಾತ್ಮಕತೆ. ಹೇಗೆ? ಏಕೆಂದರೆ, ವ್ಯಕ್ತಿಯು ಆಗ ತನ್ನ ಮೂಲಸ್ವರೂಪದಲ್ಲಿರುತ್ತಾನೆ. ಆದ್ದರಿಂದ



ಅದು ಆತ್ಮದ ವಿವಿಕ್ತ ಸ್ಥಾನಗಳನ್ನೆಲ್ಲ ಆವರಿಸುತ್ತದೆ. ಹೀಗಾಗಿ ಆತನು ಅವಶ್ಯವೆನಿಸಿದಾಗ ಯಾವ ಶಕ್ತಿಯನ್ನಾದರೂ ಆವಾಹನೆ ಮಾಡಿ ಕಾರ್ಯಾಚರಣೆಗೆ ತರಬಹುದು. ಅದೇ ಪರಮ ಸಿದ್ಧಿ.

ಮಾತು ಮತ್ತು ಆಲೋಚನೆಯನ್ನು ಮೀರಿದ ಸ್ಥಿತಿಯೇ ಮೌನ. ಅದು ಮಾನಸಿಕ ವ್ಯಾಪಾರವಿಲ್ಲದ ಧ್ಯಾನ. ಮನೋನಿಗ್ರಹವೇ ಧ್ಯಾನ. ಆಳವಾದ ಧ್ಯಾನವೆನ್ನುವುದು ನಿರಂತರವಾದ ವಾಕ್ಕು. ಅದು 'ಭಾಷೆ'ಯ ನಿರಂತರ ಹರಿವು. ಪ್ರವಚನಗಳು ವ್ಯಕ್ತಿಗಳಿಗೆ, ಅವರನ್ನು ಸುಧಾರಿಸದೆ ಗಂಟೆಗಟ್ಟಲೆ ಮನರಂಜನೆ ನೀಡಬಹುದು; ಮೌನವಾದರೋ ಶಾಶ್ವತವಾದುದು ಮತ್ತು ಇಡೀ ಮಾನವಕುಲಕ್ಕೇ ಅದರಿಂದ ಒಳಿತಾಗುತ್ತದೆ. ಮೌನವೆಂದರೆ ವಾಗ್ಝರಿ. ಗಟ್ಟಿಯಾಗಿ ಮಾಡಿದ ಪ್ರವಚನಗಳು ಮೌನದಷ್ಟು ನಿರರ್ಗಳವಾದವಲ್ಲ. ಮೌನವು ನಿಲ್ಲದ ವಾಗ್ಝರಿ – ಅದೇ ಶ್ರೇಷ್ಠ ಭಾಷೆ.

ಮೌನ ನಾಲ್ಕು ಬಗೆ: ಮಾತಿನ ಮೌನ, ಕಣ್ಣುಗಳ ಮೌನ, ಕಿವಿಯ ಮೌನ ಮತ್ತು ಮನಸ್ಸಿನ ಮೌನ. ಕೊನೆಯದು ಮಾತ್ರವೇ ಪರಿಶುದ್ಧ ಮೌನ; ಮತ್ತು ಇದು ತುಂಬಾ ಮುಖ್ಯವಾದುದು. ಮೌನದ ವ್ಯಾಖ್ಯಾನ, ಭಗವಾನ್ ದಕ್ಷಿಣಾಮೂರ್ತಿ ತೋರಿಸಿಕೊಟ್ಟಂತೆ, ಅತ್ಯುತ್ತಮವಾದ ವ್ಯಾಖ್ಯಾನ. ಮೌನವು ಮಾತ್ರವೇ ನಿತ್ಯವಾದ ಮಾತು, ಏಕೈಕ ಮಾತು, ಹೃದಯ – ಹೃದಯದ ಮಾತು.

ದಕ್ಷಿಣಾಮೂರ್ತಿಯು ತನ್ನ ಬಳಿ ಭಕ್ತರು ಬಂದಾಗ ಮೌನವ್ರತದಲ್ಲಿದ್ದರು. ಅದೇ ಶ್ರೇಷ್ಠವಾದ ದೀಕ್ಷೆ. ಅದರಲ್ಲಿ ಇತರ ಪ್ರಭೇದಗಳೂ ಸೇರಿವೆ. ಇತರ ದೀಕ್ಷೆಗಳಲ್ಲಿ ಜ್ಞಾತೃ ಮತ್ತು ಜ್ಞೇಯ ಸಂಬಂಧ ಸ್ಥಾಪಿತವಾಗಬೇಕು. ಮೊದಲು ಜ್ಞಾತೃ ಹೊಮ್ಮಿ ಆಮೇಲೆ ಜ್ಞೇಯ ಹೊಮ್ಮಬೇಕು. ಇವರಿಬ್ಬರೂ ಇಲ್ಲದೆ, ಒಬ್ಬನು ಇನ್ನೊಬ್ಬನನ್ನು ನೋಡುವುದು ಇಲ್ಲವೆ ಸ್ಪರ್ಶಿಸುವುದು ಹೇಗೆ? ಮೌನದೀಕ್ಷೆ ಅತ್ಯಂತ ಪರಿಪೂರ್ಣವಾದುದು; ಅದರಲ್ಲಿ ದರ್ಶನ, ಸ್ಪರ್ಶ ಮತ್ತು ಬೋಧನಗಳು ಇವೆ. ಅದು ವ್ಯಕ್ತಿಯನ್ನು ಎಲ್ಲಾ ವಿಧದಲ್ಲೂ ಶುದ್ಧೀಕರಿಸಿ, ಅವನನ್ನು ನಿಜಸ್ವರೂಪದಲ್ಲಿ ಸ್ಥಾಪಿಸುತ್ತದೆ.

ಮೌನವು ಏಕಪ್ರಕಾಶದ ವಿದ್ಯುತ್‌ಪ್ರವಾಹದಂತೆ. ಮಾತು ಎನ್ನುವುದು ಹರಿಯುವ ವಿದ್ಯುತ್ತನ್ನು ತಡೆದು ಬೆಳಗಲು ಮತ್ತು ಇತರ ಉದ್ದೇಶಗಳಿಗೆ ಬಳಸಿದಂತೆ. ಜ್ಞಾನಿ ಎಷ್ಟೇ ಮಾತನಾಡಿದರೂ ಅವನು ಮೌನಿಯೇ. ಅವನು ಎಷ್ಟೇ ಕೆಲಸ ಮಾಡಿದರೂ ಅವನು ನಿಷ್ಕ್ರಿಯನೇ. ಅವನ ವಾಣಿ ಅಶರೀರವಾಗಿಯೇ. ಅವನ ನಡಗೆ ಭೂಮಿಯ ಮೇಲಲ್ಲ – ಅದು ಆಕಾಶವನ್ನು ಆಕಾಶದಿಂದ ಅಳೆಯುವಂತೆ.

ಆತ್ಮಸಾಕ್ಷಾತ್ಕಾರವೇ ಮಾನವಕುಲಕ್ಕೆ ಸಲ್ಲಿಸಬಹುದಾದ ಅತಿ ದೊಡ್ಡ ಸಹಾಯ. ಆದ್ದರಿಂದಲೇ ಋಷಿಮುನಿಗಳು ಕಾಡುಗಳಲ್ಲಿದ್ದರೂ ಉಪಕಾರ ಮಾಡುತ್ತಾರೆ. ಆ

ಸಹಾಯ ಕಣ್ಣಿಗೆ ಕಾಣದಿದ್ದರೂ ಅದು ಇದೆ. ಸಂತನು ಮಾನವಕುಲಕ್ಕೆ ಅರಿಯದಂತೆಯೇ, ಅದಕ್ಕೆ ಉಪಕಾರ ಮಾಡುತ್ತಾನೆ.

ಸಾಕ್ಷಾತ್ಕಾರವು ಮಾತಿಗೆ ಮೀರಿದ್ದು. ಮಾತಿನಿಂದ ಅದನ್ನು ಬಣ್ಣಿಸಲು ಆಗದು. ಸಾಕ್ಷಾತ್ಕಾರವನ್ನು ಮಾತಿನಿಂದ ಬಣ್ಣಿಸಲಾಗದಿದ್ದರೂ, ಅದರ ಅಸ್ತಿತ್ವ ಸೂಚಿತವಾಗುತ್ತದೆ.

ಇಡೀ ವೇದಾಂತವನ್ನು ನಾಲ್ಕು ಪದಗಳಲ್ಲಿ ಅಡಕವಾಗಿ ಹೇಳಬಹುದು: **ದೇಹಂ, ನಾಹಂ, ಕೋಹಂ, ಸೋಹಂ. ದೇಹಂ** ಎನ್ನುವುದು **ನಾಹಂ,** ಅಂದರೆ ದೇಹವು ನಾನಲ್ಲ. ಒಬ್ಬನು **'ಕೋಹಂ'** ಎಂದರೆ **'ನಾನು ಯಾರು?'** ಎನ್ನುವುದನ್ನು ತಿಳಿದರೆ, ಈ **'ನಾನು'** ಎಲ್ಲಿಂದ ಬರುತ್ತದೆ ಎಂದು ಪ್ರಶ್ನಿಸಿ ಸಾಕ್ಷಾತ್ಕರಿಸಿಕೊಂಡರೆ, ಆಗ ಅಂಥವನ ಹೃದಯದಲ್ಲಿ ಸರ್ವಾಂತರ್ಯಾಮಿಯಾದ ದೇವರು 'ನಾನು' ಎಂಬುದಾಗಿ ಸ್ಫುರಿಸಿ, **ಸ ಅಹಂ** ಅಥವಾ **ಸೋಹಂ** – ಅಂದರೆ 'ಅವನೇ ನಾನು' ಎಂದು ತಿಳಿಯುತ್ತಾನೆ.

ದೀಪವು ಎಣ್ಣೆ ಮುಗಿದುಹೋದರೆ ಹೇಗೆ ಆರಿಹೋಗುವುದೋ ಹಾಗೆ ಒಬ್ಬನು ನಿರಂತರವಾಗಿ ಧ್ಯಾನ ಮಾಡಿದರೆ, ಅಹಂಕಾರವು ತೊಲಗಿ, ಆತ್ಮನಲ್ಲಿ ಲೀನವಾಗುತ್ತಾನೆ. ಆತ್ಮಸಾಕ್ಷಾತ್ಕಾರಕ್ಕಿಂತ ದೊಡ್ಡ ಲಾಭ ಬೇರೊಂದಿಲ್ಲ.

ಸೂರ್ಯನು ಇದ್ದಾನೆ; ಅವನು ಬೆಳಗಿದರೆ ನಿಮಗೆ ಬೆಳಕು; ಆದರೂ, ನೀವು ಸೂರ್ಯನನ್ನು ತಿಳಿಯಬೇಕಾದರೆ, ನೀವು ಅವನತ್ತ ತಿರುಗಿ ನೋಡಬೇಕು. ಅಂತೆಯೇ, ಭಗವತ್ಕೃಪೆಯನ್ನು ಪ್ರಯತ್ನದಿಂದ ಮಾತ್ರವೇ ಅರಿಯಬೇಕು; ಅದು ಇಲ್ಲೇ, ಈಗಲೇ ಇದ್ದರೂ.

ಗಾಡಿಯಲ್ಲಿ ಮಲಗಿರುವ ಪಯಣಿಗ ನಿದ್ದೆ ಮಾಡಿಬಿಟ್ಟಿದ್ದಾನೆ. ಹಾಗೆ ಪಯಣಿಸುತ್ತಿರುವಾಗ ಎತ್ತುಗಳು ಚಲಿಸುತ್ತಿವೆ, ನಿಲ್ಲುತ್ತಿವೆ, ನೊಗಬಿಚ್ಚಿಕೊಳ್ಳುತ್ತವೆ. ಅವನಿಗೆ ಇವೆಲ್ಲಾ ಗೊತ್ತೇ ಆಗುವುದಿಲ್ಲ; ಆದರೂ ಅವನು ಎಚ್ಚರವಾದ ಮೇಲೆ ತಾನು ಬೇರೆ ಸ್ಥಳಕ್ಕೆ ಬಂದಿರುವುದು ಗೊತ್ತಾಗುತ್ತದೆ. ದಾರಿಯಲ್ಲಿ ನಡೆಯುವ ಘಟನೆಗಳಾವುವೂ ಅವನಿಗೆ ತಿಳಿಯದೆ ದಿವ್ಯ ನಿರ್ಲಕ್ಷ್ಯದಲ್ಲಿರುತ್ತಾನೆ. ಆದರೆ ಅವನ ಪ್ರಯಾಣ ಮುಗಿದಿರುತ್ತದೆ. ಸದಾ ಜಾಗೃತವಾಗಿರುವ ಆತ್ಮವನ್ನು ಗಾಡಿಯಲ್ಲಿ ಮಲಗಿರುವ ಪಯಣಿಗನಿಗೆ ಹೋಲಿಸಲಾಗಿದೆ. ಎಚ್ಚರದ ಸ್ಥಿತಿ ಎತ್ತುಗಳ ಚಲನೆ, **ಸಮಾಧಿ** ಎನ್ನುವುದು ಅವುಗಳು ಸುಮ್ಮನೆ ನಿಂತುಬಿಡುವ ಸ್ಥಿತಿ (ಏಕೆಂದರೆ ಸಮಾಧಿ ಎಂದರೆ ಜಾಗ್ರತ್ ಸುಷುಪ್ತಿ; ಅಂದರೆ ವ್ಯಕ್ತಿಗೆ ಎಚ್ಚರವಿರುತ್ತದೆ, ಆದರೆ ಕ್ರಿಯೆಯಲ್ಲಿ ಆಸಕ್ತಿಯಿರುವುದಿಲ್ಲ. ಎತ್ತುಗಳನ್ನು ನೊಗಕ್ಕೆ ಕಟ್ಟಲಾಗಿದೆ, ಆದರೆ ಅವು ಚಲಿಸುವುದಿಲ್ಲ), ನಿದ್ರೆ ಎನ್ನುವುದು ಎತ್ತುಗಳ ನೊಗಬಿಚ್ಚುವಂತೆ. ಏಕೆಂದರೆ ಎತ್ತುಗಳ ನೊಗ ಬಿಚ್ಚಿದಾಗ ಚಲನಕ್ರಿಯೆ ಸಂಪೂರ್ಣವಾಗಿ ನಿಂತುಹೋಗುವುದು.



ಆತ್ಮವನ್ನು ನೋಡುವವನು, ಪ್ರಪಂಚದಲ್ಲಿ ಆತ್ಮವನ್ನು ಮಾತ್ರವೇ ನೋಡುವನು. ಆ ಜ್ಞಾನಿಗೆ ಜಗತ್ತು ಕಾಣಬಹುದೋ ಇಲ್ಲವೋ ಎನ್ನುವುದು ಮಹತ್ತ್ವದ್ದಲ್ಲ. ಕಾಣಲಿ, ಬಿಡಲಿ ಅವನ ಗಮನ ಆತ್ಮದತ್ತ ತಿರುಗಿರುತ್ತದೆ. ಅದು ಅಕ್ಷರಗಳು ಹಾಗೂ ಅವನ್ನು ಮುದ್ರಿಸಿರುವ ಕಾಗದದಂತೆ. ನೀವು ಅಕ್ಷರಗಳಲ್ಲಿ ಎಷ್ಟರಮಟ್ಟಿಗೆ ಮುಳುಗಿರುತ್ತೀರೆಂದರೆ, ನೀವು ಕಾಗದದ ಬಗ್ಗೆ ಮರೆತೇಬಿಡುತ್ತೀರಿ; ಆದರೆ ಜ್ಞಾನಿಯಾದವನು ಅಕ್ಷರಗಳು ಕಾಣಲಿ ಬಿಡಲಿ ಅದರ ಆಧಾರವಾದ ಕಾಗದವನ್ನು ನೋಡುತ್ತಾನೆ.

ಯಾವನು ಆತ್ಮವನ್ನು ಮರೆತು, ದೇಹಾತ್ಮಭಾವದಿಂದ ಅನೇಕ ಜನ್ಮಗಳನ್ನು ಎತ್ತುವನೋ ಅವನು ಕನಸಿನಲ್ಲಿ ಲೋಕವನ್ನೆಲ್ಲಾ ಅಲೆದಾಡಿದಂತೆ. ಹೀಗೆ ಆತ್ಮಸಾಕ್ಷಾತ್ಕಾರವು ಕನಸಿನ ಅಲೆದಾಟಗಳಿಂದ ಎಚ್ಚತ್ತಂತೆ.

ಯಾವನು ಉದ್ದಕ್ಕೂ ಆತ್ಮನಾಗಿ ಅಸ್ತಿತ್ವದಲ್ಲಿದ್ದಾಗಲೂ ತನ್ನನ್ನು 'ನಾನು ಯಾರು?' ಮತ್ತು 'ನಾನು ಎಲ್ಲಿದ್ದೇನೆ' ಎಂದು ಕೇಳಿಕೊಳ್ಳುತ್ತಾನೋ ಅವನು ಕುಡಿದ ಅಮಲಿನಲ್ಲಿ ತಾನು ಯಾರು, ಎಲ್ಲಿದ್ದೇನೆ ಎಂದು ಕೇಳುವ ಕುಡುಕನಂತೆ.

ವಾಸ್ತವವಾಗಿ ಆತ್ಮವು ದೇಹದಲ್ಲಿದ್ದರೂ, ಯಾರು ಆತ್ಮವು ಅಚೇತನವಾದ ದೇಹದಲ್ಲಿದೆಯೆಂದು ಭಾವಿಸುವರೋ ಅವರು ಸಿನೆಮಾ ಚಿತ್ರಕ್ಕೆ ಆಧಾರವಾಗಿರುವ ಪರದೆಯ ಬಟ್ಟೆ ಚಿತ್ರದೊಳಗೆ ಇದೆಯೆಂದು ಭಾವಿಸುವವರಂತೆ.

ಒಂದು ಒಡವೆ ಅದನ್ನು ತಯಾರಿಸಿದ ಚಿನ್ನಕ್ಕಿಂತ ಬೇರೆಯಾಗಿರಲು ಸಾಧ್ಯವೆ? ಆತ್ಮವಿಲ್ಲದೆ ದೇಹವೆಲ್ಲಿ? ದೇಹವೇ ತಾನು ಎಂದು ಭಾವಿಸುವವನು ಅಜ್ಞ, ಯಾರು ತನ್ನನ್ನು ಆತ್ಮವೆಂದು ಭಾವಿಸುವನೋ ಅವನು ಜ್ಞಾನಿ, ಆತ್ಮಸಾಕ್ಷಾತ್ಕಾರ ಮಾಡಿಕೊಂಡವನು.

ಕೆಸರಿನ ಕೊಳಗಳಲ್ಲಿ ಹುಲುಸಾಗಿ ಬೆಳೆಯುವ ಕಮಲದ ಮೊಗ್ಗು ಸೂರ್ಯೋದಯದ ಸಮಯದಲ್ಲಿ ಅರಳುವಂತೆ, ಮನಸ್ಸಿನ ಹಿಂದಿನ ಹೃದಯವು ಎಲ್ಲಾ ಆತ್ಮಗಳ ಆತ್ಮನಾದ, ಮತ್ತು ಅರುಣಾಚಲದಂತೆ ಹೊರಕ್ಕೆ ಎಲ್ಲರಿಗೂ ಕಾಣುವ ಭಗವತ್ಕೃಪೆಯಿಂದ ಪ್ರಕಾಶಮಾನವಾಗಿ ಬೆಳಗುತ್ತದೆ.

ಸಮಸ್ತ ಜಲರಾಶಿಯ ಆಗರವಾದ ಸಾಗರದ ನೀರು ಆವಿಯಾಗುತ್ತದೆ; ಮೋಡಗಳು ರೂಪುಗೊಂಡು ಮಳೆ ಸುರಿಯುತ್ತದೆ; ಅದರಿಂದ ನದಿಗಳು ಹುಟ್ಟುತ್ತವೆ; ಆ ನದಿಗಳು ನಿಲುಗಡೆಯೇ ಇಲ್ಲವೇನೋ ಎಂಬಂತೆ ತಮ್ಮ ಮೂಲದತ್ತ ಹರಿಯುತ್ತ, ಸಮುದ್ರ ಸೇರಿದ ಮೇಲೆ ಶಾಂತವಾಗುತ್ತವೆ. ಅಂತೆಯೇ ಸಹೃದಯ ವ್ಯಕ್ತಿಯು ಚಡಪಡಿಸುತ್ತ ತನ್ನ ಮೂಲವನ್ನು ಕಾಣಲು ತವಕಿಸುತ್ತಾನೆ. 'ಅಹಂ' ಎನ್ನುವುದು ಹೃದಯದ ಜಾಡನ್ನು ಹಿಡಿದುಹೋಗುವುದೇ ಈ ಮಾರ್ಗ.

ಜ್ಞಾನಿಯಾದವನು ಯಾರನ್ನೂ ಅಜ್ಞಾನಿಯೆಂದು ಭಾವಿಸುವುದಿಲ್ಲ. ಅವನ ದೃಷ್ಟಿಯಲ್ಲಿ ಎಲ್ಲರೂ ಜ್ಞಾನಿಗಳೇ. ಅಜ್ಞಾನದ ಅವಸ್ಥೆಯಲ್ಲಿ ಒಬ್ಬನು ತನ್ನ ಅಜ್ಞಾನವನ್ನು ಜ್ಞಾನಿಯ ಮೇಲೆ ಆರೋಪಿಸಿ, ಅವನನ್ನು ಕರ್ತ ಎಂದು ತಪ್ಪಾಗಿ ತಿಳಿಯುತ್ತಾನೆ. ಜ್ಞಾನದ ಅವಸ್ಥೆಯಲ್ಲಿ ಜ್ಞಾನಿಯು ಆತ್ಮಕ್ಕೆ ಹೊರತಾದುದೇನನ್ನೂ ಕಾಣುವುದಿಲ್ಲ. ಆತ್ಮವು ಜಾಜ್ವಲ್ಯಮಾನ, ಮತ್ತು ಶುದ್ಧ ಜ್ಞಾನ. ಇಬ್ಬರು ಸ್ನೇಹಿತರು ಪಕ್ಕಪಕ್ಕದಲ್ಲಿ ಮಲಗಿ ನಿದ್ದೆಹೋದರು. ಅವರಲ್ಲೊಬ್ಬನು ತಾವಿಬ್ಬರೂ ದೀರ್ಘಪ್ರವಾಸ ಹೋಗಿ ವಿಚಿತ್ರ ಅನುಭವಗಳನ್ನು ಪಡೆದುದಾಗಿ ಕನಸುಕಂಡನು. ಎಚ್ಚರವಾದ ಮೇಲೆ ಅವನು ಅದನ್ನೆಲ್ಲ ತನ್ನ ಮಿತ್ರನಿಗೆ ಹೇಳಿ, ಅದೆಲ್ಲ ನಿಜವೇ ಎಂದು ಕೇಳಿದನು. ಆ ಇನ್ನೊಬ್ಬನು ಅದೆಲ್ಲಾ ಕೇವಲ ಕನಸು ಎಂದೂ, ಅದರಿಂದ ತನಗೇನೂ ಆಗದೆಂದೂ ಅಪಹಾಸ್ಯಮಾಡಿದನು. ಆದ್ದರಿಂದ, ಅಜ್ಞಾನಿಯಾದವನು ತನ್ನ ಭ್ರಾಮಕ ಅಭಿಪ್ರಾಯಗಳನ್ನು ಇತರರ ಮೇಲೆ ಅಧ್ಯಾರೋಪ ಮಾಡುತ್ತಾನೆ.

ಆತ್ಮಕ್ಕೆ ಒಂದು ಆಕಾರವಿದ್ದರೆ ಲೋಕಕ್ಕೂ ಭಗವಂತನಿಗೂ ಆಕಾರಗಳಿವೆ. ಆತ್ಮವು ನಿರಾಕಾರವಾದರೆ, ಆಗ ಹೇಗೆ ಮತ್ತು ಯಾರಿಂದ ಆಕಾರಗಳು ನೋಡಲ್ಪಡಬೇಕು? ಕನ್ನಡಕ ಎಂದಾದರೂ ಅದನ್ನು ನೋಡುವ ಕಣ್ಣುಗಳಿಗಿಂತ ಭಿನ್ನವೇ? ನಿಜವಾದ ಕಣ್ಣೆಂದರೆ ಆತ್ಮ. ಅದು ಅನಂತ ಚೇತನ, ನಿರಾಕಾರ ಮತ್ತು ಲೋಕೋತ್ತರ.

ಆಶ್ರಮದಲ್ಲಿ ಕೆಲವು ವಾರಗಳನ್ನು ಕಳೆದ ಅಮೇರಿಕನ್ನರ ಕಿರುತಂಡವೊಂದು ಶ್ರೀ ಮಹರ್ಷಿಗಳನ್ನು, ಸಾಕಾರ ದೇವರು ಎಂಬುದೊಂದು ಇದೆಯೇ ಎಂದು ಕೇಳಿದರು. ಅದಕ್ಕೆ ಶ್ರೀ ಮಹರ್ಷಿಗಳು ಉತ್ತರಿಸಿದರು: ಹೌದು, ಈಶ್ವರ. ಒಬ್ಬ ಭಕ್ತ (ಅಚ್ಚರಿಯಿಂದ) – ಕಣ್ಣು, ಕಿವಿ, ಮೂಗು ಮೊದಲಾದ ಅಂಗಗಳು ಇರುವ ದೇವರೇ? ಶ್ರೀ ಮಹರ್ಷಿ: ಹೌದು, ನಿಮಗೆ ಅವೆಲ್ಲಾ ಇದ್ದರೆ, ದೇವರಿಗೂ ಅವೆಲ್ಲಾ ಏಕೆ ಇರಬಾರದು? ಒಬ್ಬ ಭಕ್ತ: ಕಬ್ಬಾಲ ಮತ್ತು ಹಿಂದೂ ಕೃತಿಗಳಲ್ಲಿ ದೇವರಿಗೆ ಈ ಅಂಗಗಳಿವೆ ಎಂಬುದನ್ನು ಓದುವಾಗ ನಾನು ನಗುತ್ತೇನೆ. ಶ್ರೀ ಮಹರ್ಷಿ: ಆ ಅಂಗಗಳು ನಿಮಗೇ ಇರುವುದಕ್ಕೆ, ನಿಮ್ಮ ಬಗ್ಗೆ ನೀವೇ ಏಕೆ ನಗುವುದಿಲ್ಲ?

ತಿರುವಣ್ಣಾಮಲೆಗೆ ಹೋಗಲು ಹಲವಾರು ಮಾರ್ಗಗಳಿವೆ. ಆದರೆ ನೀವು ಯಾವುದೇ ಮಾರ್ಗವಾಗಿ ಹೋದರೂ ತಿರುವಣ್ಣಾಮಲೆ ಅದೇ. ಅದೇ ರೀತಿ, ಆತ್ಮಸಾಕ್ಷಾತ್ಕಾರಕ್ಕೆ ವ್ಯಕ್ತಿಗೆ ತಕ್ಕಂತೆ ಬದಲಾಗುತ್ತದೆ. ಆದರೂ ಆತ್ಮ ಅದೇ. ತಿರುವಣ್ಣಾಮಲೆಯಲ್ಲಿದ್ದು ಅಲ್ಲಿಗೇ ಹೋಗುವ ಮಾರ್ಗದ ಬಗ್ಗೆ ಕೇಳುವುದು ಹಾಸ್ಯಾಸ್ಪದ. ಅದೇ ರೀತಿ, ಆತ್ಮವೇ ಆಗಿದ್ದು, ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ಹೇಗೆಂದು ಕೇಳುವುದು ಹಾಸ್ಯಾಸ್ಪದ. ನೀವೇ ಆತ್ಮ. ಆತ್ಮವಾಗೇ ಉಳಿಯಿರಿ, ಅಷ್ಟೆ.



ದೇಹಾತ್ಮಭಾವನೆಯಿಂದ ಪ್ರಶ್ನೆಗಳು ಏಳುತ್ತವೆ. ಅದು ಅಜ್ಞಾನ. ಅದು ಹೋಗಬೇಕು. ಅಜ್ಞಾನ ಹೋದರೆ, ಆತ್ಮದ ಅರಿವಾಗುತ್ತದೆ.

ಜಗತ್ತು ಸತ್ಯದ ನೆರಳು. ಅದನ್ನು ಸರಿಯಾಗಿ ತಿಳಿಯಲು ಅಥವಾ ಗ್ರಹಿಸಲು ಅಸಾಧ್ಯ. ಮಗುವು ತನ್ನ ನೆರಳಿನ ತಲೆಯನ್ನು ಮುಟ್ಟಲು ಪ್ರಯತ್ನಿಸುತ್ತದೆ; ಆದರೆ ಹಾಗೆ ಮಾಡಲು ಸಾಧ್ಯವಿಲ್ಲ, ಏಕೆಂದರೆ, ಮಗು ಚಲಿಸಿದಂತೆ ನೆರಳಿನ ತಲೆಯೂ ಚಲಿಸುತ್ತದೆ. ಆಗ ತಾಯಿಯು ಅದರ ಕೈಯನ್ನು ಅದರ ತಲೆಯ ಮೇಲಿಟ್ಟು, ನೆರಳು ತಲೆಯನ್ನು ಮುಟ್ಟಿದಂತಾಯಿತು ಎಂದು ತೋರಿಸಿಕೊಡುತ್ತಾಳೆ. ಅದೇ ರೀತಿ ಆತ್ಮವನ್ನು ಗ್ರಹಿಸುವ ಮೂಲಕ ಜಗತ್ತನ್ನು ಗ್ರಹಿಸಬೇಕು, ಅಂದರೆ ಸರಿಯಾಗಿ ಅರಿಯಬೇಕು.

ನೀವು 'ನನ್ನದು' ಎನ್ನುವುದರ ಅದು ಇದನ್ನು ಬಿಟ್ಟುಬಿಡಿ. ನೀವು 'ನನ್ನ', 'ನನ್ನದು' ಮತ್ತು 'ನಾನು'ಗಳನ್ನು ಬಿಟ್ಟರೆ, ಒಂದೇ ಏಟಿಗೆ ಎಲ್ಲವೂ ಬಿಟ್ಟುಹೋಗುವುವು. ಆಗ ಸ್ವಂತದ್ದು ಎನ್ನುವುದರ ಬೀಜವೇ ಹೊರಟುಹೋಗುತ್ತದೆ. ಹೀಗೆ ಕೆಟ್ಟದ್ದನ್ನು ಮೊಳಕೆಯಲ್ಲೇ ಚಿವುಟಿದಂತಾಗುತ್ತದೆ. ಇದನ್ನು ಮಾಡಲು ಬಲವಾದ ವಿರಕ್ತಿ ಬೇಕು. ಅದನ್ನು ಮಾಡಲು ಕಾತುರ ಹೇಗಿರಬೇಕೆಂದರೆ, ನೀರಿನಲ್ಲಿ ಮುಳುಗಿಸಿರುವ ವ್ಯಕ್ತಿ ಬದುಕಲು ಮೇಲೇಳಲು ಪ್ರಯತ್ನ ಮಾಡುವಂತೆ.

ಸಿನೆಮಾ ಪ್ರದರ್ಶನದಲ್ಲಿ ಪರದೆಯ ಮೇಲೆ ದೃಶ್ಯಗಳನ್ನು ಪ್ರಕ್ಷೇಪಿಸಲಾಗುವುದು. ಆದರೆ ಚಲಿಸುವ ಚಿತ್ರಗಳು ಪರದೆಯ ಮೇಲೆ ಪ್ರಭಾವವನ್ನೂ ಬೀರುವುದಿಲ್ಲ, ಅದನ್ನು ಬದಲಿಸುವುದೂ ಇಲ್ಲ. ಪ್ರೇಕ್ಷಕನು ಅವುಗಳ ಕಡೆ ಗಮನ ಹರಿಸುತ್ತಾನೆಯೇ ಹೊರತು ಪರದೆಯ ಮೇಲಲ್ಲ. ಪರದೆಯಿಲ್ಲದೆ ಅವು ಇರಲು ಸಾಧ್ಯವಿಲ್ಲ. ಆದರೂ ಪರದೆಯನ್ನು ಕಡೆಗಣಿಸುತ್ತಾನೆ. ಅಂತೆಯೇ ಆತ್ಮವೆನ್ನುವುದು ಚಿತ್ರಗಳು, ಚಟುವಟಿಕೆಗಳು ಮೊದಲಾದವು ನಡೆಯುವ ಪರದೆಯಂತೆ. ಪ್ರೇಕ್ಷಕನಿಗೆ ಚಿತ್ರಗಳ ಬಗ್ಗೆ ಅರಿವಿದೆಯೇ ಹೊರತು ಪರದೆಯ ಬಗ್ಗೆ ಇಲ್ಲ. ಚಿತ್ರಗಳ ಜಗತ್ತು ಆತ್ಮದ್ದಕ್ಕಿಂತ ಬೇರೆ ಅಲ್ಲ. ಪ್ರೇಕ್ಷಕನಿಗೆ ಪರದೆಯ ಬಗ್ಗೆ ಅರಿವಿದೆಯೋ ಇಲ್ಲವೋ ಅಭಿನಯ, ಕ್ರಿಯೆಗಳು ಮುಂದುವರಿಯುತ್ತವೆ.

ನಾವು ಆತ್ಮವನ್ನು 'ಅಹಂ' ಎಂದು ಭಾವಿಸಿದರೆ, ಆಗ ನಾವು ಜ್ಞಾತೃಗಳಾಗುತ್ತೇವೆ; ಅದನ್ನು 'ಮನಸ್ಸು' ಎಂದು ಭಾವಿಸಿದರೆ, ನಾವು ಮನಸ್ಸಾಗುತ್ತೇವೆ. ದೇಹವೆಂದು ಭಾವಿಸಿದರೆ ನಾವು ದೇಹವಾಗುತ್ತೇವೆ. ಆಲೋಚನೆ ಎನ್ನುವುದು ಅನೇಕ ಬಗೆಗಳಲ್ಲಿ ಕೋಶಗಳನ್ನು ನಿರ್ಮಿಸುತ್ತದೆ. ನೀರಿನ ಮೇಲಿನ ನೆರಳು ಅಲುಗಾಡುವಂತೆ ಕಾಣುತ್ತದೆ. ಯಾರಾದರೂ ಅದರ ಅಲುಗಾಟವನ್ನು ನಿಲ್ಲಿಸಲು ಸಾಧ್ಯವೇ? ಅದು ಅಲುಗಾಟ ನಿಲ್ಲಿಸಿದರೆ, ನೀವು ಆಗ ನೀರನ್ನು ನೋಡಲಾರಿರಿ, ಬೆಳಕನ್ನು ಮಾತ್ರ ನೋಡುವಿರಿ. ಅಂತೆಯೇ ಅಹಮ್ಮಿನ ಮತ್ತು ಅದರ ಚಟುವಟಿಕೆಗಳನ್ನು

ಗಮನಿಸದಿರಿ, ಅದರ ಹಿಂದಿನ ಬೆಳಕನ್ನು ನೋಡಿ. 'ಅಹಂ' ಎಂದರೆ 'ನಾನತ್ವ'. ನಿಜವಾದ 'ನಾನು' ಎಂದರೆ ಆತ್ಮ.

ಮೋಡಗಳು ರೂಪುಗೊಳ್ಳುವುದರಿಂದ ಮತ್ತು ಚದುರುವುದರಿಂದ ಆಕಾಶದ ಮೇಲೆ ಯಾವ ರೀತಿಯಲ್ಲೂ ಪ್ರಭಾವ ಬೀರದಿರುವುದರಿಂದ ನಿಜವಾದ ಆತ್ಮವು ದೇಹದ ಹುಟ್ಟು ಸಾವುಗಳಿಂದ ಪ್ರಭಾವಿತವಾಗುವುದಿಲ್ಲ.

ಕಲ್ಲಿನಲ್ಲಿ ಕೆತ್ತನೆ ಮಾಡಿದ ನಾಯಿಯನ್ನು (ನಿಜವಾದ) ನಾಯಿಯೆಂದು ಭಾವಿಸಿದಾಗ ಕಲ್ಲನ್ನು ಮರೆಸುವುದು; ಮತ್ತು ಅದನ್ನು ಕೇವಲ ಕಲ್ಲೆಂದು (ಭಾವಿಸಿ) ನಾಯಿಯಲ್ಲ ಎಂದು ಗೊತ್ತಾಗುವಂತೆ ಈ ಜಗತ್ತೂ ಸತ್ಯವಲ್ಲ, ಮಿಥ್ಯೆ ಎಂದು ತಿಳಿಯುತ್ತದೆ. (ಅಜ್ಞಾನದ ಸ್ಥಿತಿಯಲ್ಲಿ ಜಗತ್ತು ಸತ್ಯವೆಂದೂ, ಜ್ಞಾನದ ಸ್ಥಿತಿಯಲ್ಲಿ ಮಿಥ್ಯೆಯೆಂದೂ ತಿಳಿಯುತ್ತದೆ). ಬಹುವರ್ಣರಂಜಿತ ನವಿಲು ಅಂಡದ ಸತ್ತ್ವವಾಗಿರುವಂತೆ, ಈ ವರ್ಣರಂಜಿತ ಜಗತ್ತಿನ ಸಾರ ಆತ್ಮ, ಬೇರಾವುದೂ ಅಲ್ಲ. ಹೀಗೆ ನೀವು ನಿಮ್ಮ ಸಹಜ ಸ್ಥಿತಿಯಲ್ಲಿರುವಾಗ ಹೀಗೆ ಕಾಣುವಿರಿ.

ಜೀವಾತ್ಮ, ಜಗತ್ತು ಮತ್ತು ದೇವರು ಪರಮಸತ್ಯದ ಭ್ರಾಂತಿಕಾರಕ ಸೃಷ್ಟಿಗಳು; ಸರ್ಪರಜ್ಜು ನ್ಯಾಯದಂತೆ; ಇದನ್ನು ತಿಳಿದು, ಆ ಆನಂದಮಯ ಪರಬ್ರಹ್ಮನಲ್ಲಿ ಈ ಮೂರನ್ನೂ ಲೀನಗೊಳಿಸಿ ಸಂತೋಷವಾಗಿರಿ.

ಎಲ್ಲಾ ಧರ್ಮಗಳೂ ಮೂರು ಮೂಲಭೂತ ವಿಷಯಗಳನ್ನು ಹೇಳುತ್ತವೆ: ಜಗತ್ತು, ಆತ್ಮ ಮತ್ತು ಪರಮಾತ್ಮ. ಒಂದು ಸತ್ಯವು ಈ ಮೂರಾಗಿ ಪ್ರಕಟವಾಗುತ್ತದೆ. 'ಈ ಮೂರು ನಿಜವಾಗಿ ಮೂರು' ಎಂದು ಹೇಳಿದರೆ 'ಅಹಂ' ಎನ್ನುವುದು ಉಳಿದಿದೆ ಎಂದರ್ಥ. ಆದ್ದರಿಂದ ಆತ್ಮನಲ್ಲಿ 'ಅಹಂ' (ನಾನು) ಎಂಬುದು ಅಳಿದಾಗ ನೆಲಸಿರುವುದು ಆದರ್ಶವಾದ ಸ್ಥಿತಿ.

**ಅಹಂವೃತ್ತಿ**ಯ ಸುಳಿವಿನಿಂದ ಆತ್ಮಶೋಧನೆ ಮಾಡುವುದು, ನಾಯಿ ತನ್ನ ಧಣಿಯನ್ನು ವಾಸನೆಯಿಂದ ಹುಡುಕುವಂತೆ. ಧಣಿಯು ಯಾವುದೋ ದೂರದ ಅಜ್ಞಾತಸ್ಥಳದಲ್ಲಿರಬಹುದು; ಆದರೆ ನಾಯಿ ಅವನನ್ನು ಹುಡುಕಲು ಅಡ್ಡಿಯಾಗುವುದಿಲ್ಲ. ಧಣಿಯ ವಾಸನೆ ಆ ಪ್ರಾಣಿಗೆ ತಪ್ಪೇ ಆಗದಂಥ ಸುಳಿವು; ಮತ್ತು ಅವನು ಧರಿಸುವ ಉಡುಪಾಗಲಿ, ಅವನ ಮೈಕಟ್ಟಾಗಲಿ, ಮಾಟವಾಗಲಿ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಅದು ಆ ವಾಸನೆಯನ್ನು ಹಿಡಿದು, ಅತ್ತಿತ್ತ ವಿಚಲಿತವಾಗದೆ ಅವನನ್ನು ಹುಡುಕುತ್ತಾ, ಅಂತಿಮವಾಗಿ ಪತ್ತೆ ಹಚ್ಚುತ್ತದೆ.

'ಅಹಂ' ಎನ್ನುವುದು ಎರಡು ಸ್ಥಿತಿಗಳ ನಡುವೆಯೋ ಎರಡು ಆಲೋಚನೆಗಳ ನಡುವೆಯೋ ಅನುಭವವಾಗುವುದು. ಅಹಂಕಾರ ಹೇಗೆಂದರೆ, ಇನ್ನೊಂದು ಎಲೆಯನ್ನು ಹಿಡಿದ ಮೇಲೆ ಒಂದು ಎಲೆಯನ್ನು ಬಿಡುವ ಕಂಬಳಿಹುಳುವಿನಂತೆ. ಅದರ ನಿಜಸ್ವರೂಪ ಗೊತ್ತಾಗುವುದು ವಸ್ತುಗಳ ಅಥವಾ ಆಲೋಚನೆಗಳ



ಸಂಗವಿಲ್ಲದಾಗ. ಈ ಮಧ್ಯಂತರವೇ ಸ್ಥಿರವಾದ, ಅಪರಿವರ್ತನೀಯವಾದ ಸತ್ಯ, ನಿಮ್ಮ ನೈಜ ಅಸ್ತಿತ್ವ; **ಜಾಗೃತ್, ಸ್ವಪ್ನ** ಮತ್ತು **ಸುಷುಪ್ತಿ** ಎಂಬ ಮೂರು ಅವಸ್ಥೆಗಳ ಅಧ್ಯಯನದಿಂದ ಪ್ರಾಪ್ತವಾದ ನಿಶ್ಚಿತ ಅಭಿಪ್ರಾಯ.

**ಅಹಂ** ಎಂಬ ಪದ ತುಂಬ ಸೂಚ್ಯವಾಗಿದೆ. ಈ ಪದದ ಎರಡು ಅಕ್ಷರಗಳು ಸಮಸ್ತವನ್ನೂ ಸೂಚಿಸುತ್ತವೆ. ಅಹಂತೆ ಅಥವಾ ಅಹಮಿಕೆಯನ್ನು ಸಾಮಾನ್ಯವಾಗಿ **ಅಹಂವೃತ್ತಿ** ಎನ್ನುತ್ತಾರೆ; ಅದು ನಿಜವಾಗಿ ಮನೋವೃತ್ತಿಗಳಂತೆ ಒಂದು ವೃತ್ತಿಯಲ್ಲ. ಏಕೆಂದರೆ ಮೂಲಭೂತವಾದ ಅಂತಸ್ಸಂಬಂಧವಿಲ್ಲದ ಇತರ ವೃತ್ತಿಗಳಂತಲ್ಲದೆ, ಅಹಂವೃತ್ತಿಯು ಮನಸ್ಸಿನ ಪ್ರತಿಯೊಂದು ವೃತ್ತಿಯೊಡನೆ ಸಮಾನವಾಗಿ ಹಾಗೂ ಸಾರಭೂತವಾಗಿ ಸಂಬಂಧಿಸಿದೆ. **ಅಹಂವೃತ್ತಿ** ಇಲ್ಲದೆ ಬೇರಾವ ವೃತ್ತಿಯೂ ಇರಲಾಗದು. ಆದರೆ **ಅಹಂವೃತ್ತಿ** ಮನಸ್ಸಿನ ಬೇರಾವುದೇ ವೃತ್ತಿಯನ್ನವಲಂಬಿಸದೆ ಇರಬಲ್ಲದು. ಆದ್ದರಿಂದ ಅಹಂವೃತ್ತಿಯು ಇತರ **ವೃತ್ತಿ**ಗಳಿಗಿಂತ ಮೂಲಭೂತವಾಗಿ ಬೇರೆಯೇ ಆಗಿದೆ.

'ಅಹಂ' ಎಂಬುದು ಶುದ್ಧ ಚೈತನ್ಯವಾದ ಆತ್ಮ ಹಾಗೂ ಜಡವೂ ಅಚೇತನವೂ ಆದ ಭೌತದೇಹದ ನಡುವೆ ಸಂಬಂಧ ಕಲ್ಪಿಸುವಂಥದು. ಆದ್ದರಿಂದಲೇ ಅಹಮ್ಮನ್ನು **ಚಿತ್–ಜಡ ಗ್ರಂಥಿ** ಎಂದು ಕರೆಯುತ್ತಾರೆ. ನಿಮ್ಮ **ಅಹಂವೃತ್ತಿ**ಯ ಮೂಲದ ಶೋಧನೆಯಲ್ಲಿ, ನೀವು ಅಹಮ್ಮಿನ ಚಿತ್‌ಸ್ವರೂಪವನ್ನು ತೆಗೆದುಕೊಳ್ಳುವಿರಿ; ಈ ಕಾರಣದಿಂದ ಈ ಶೋಧನೆಯು ಆತ್ಮದ ಶುದ್ಧಚೈತನ್ಯದ ಸಾಕ್ಷಾತ್ಕಾರದತ್ತ ಒಯ್ಯಬೇಕು.

ಆ ಅತ್ಯಲ್ಪವಾದ 'ನಾನತ್ವ' (ಅಹಂ) ಹುಟ್ಟದಿರುವ ಸ್ಥಿತಿ 'ಅದಾಗಿರುವುದು' (THAT). 'ನಾನು' ಎಂಬ ಅಹಂಕಾರ ಹುಟ್ಟದೆ ಇರುವುದನ್ನು ಮತ್ತು ಅದನ್ನು ಹೇಗೆ ಸಾಧಿಸುವುದು ಎನ್ನುವುದನ್ನು ಶೋಧಿಸದೆ ಒಬ್ಬನು ಹೇಗೆ ತನ್ನತನವನ್ನು ಅಳಿಸಿಹಾಕುವುದು?; ಅದಾದ ನಂತರ 'ಅಹಂ' ಎಂದೂ ಮರುಕಳಿಸದೆ ಇರುವುದು ಹೇಗೆ? ಅದನ್ನು ಸಾಧಿಸದೆ ತನ್ನ ಸ್ವಂತ ನೆಲೆಯಲ್ಲಿ 'ಅದೇ' ಆಗಿ ಸ್ಥಿರವಾಗಿರುವುದು ಹೇಗೆ?

'ನಾನು' ಎಂಬ ಮಾತನ್ನು ಉಚ್ಚರಿಸದೆ, ಮನಸ್ಸನ್ನು ಅಂತರ್ಮುಖಿಯಾಗಿಸಿ, 'ನಾನು' ಎಂಬ ಅಹಂಕಾರ ಹೇಗೆ ಏಳುತ್ತದೆ ಎಂದು ಶೋಧಿಸುವುದು ಆತ್ಮಸಾಕ್ಷಾತ್ಕಾರಕ್ಕೆ ಒಯ್ಯುತ್ತದೆ. ಇದಲ್ಲದೆ, 'ಇದು ನಾನಲ್ಲ, ಅದು ನಾನು' ಎಂಬ ಧ್ಯಾನವೇ ಶೋಧನೆಯಾಗಬಹುದೆ? ಆದರೆ ಅದಕ್ಕೆ ನೆರವಾಗಬಹುದಾದರೂ.

ಮನಸ್ಸಿನಲ್ಲಿ 'ನಾನು ಯಾರು' ಎಂದು ಶೋಧಿಸುತ್ತಾ, ಹೃದಯವನ್ನು ಪ್ರವೇಶಿಸಿದಾಗ, ಆ ವ್ಯಕ್ತಿಯ 'ಅಹಂ' ಎಂಬುದು ತೇಜೋವಧೆಗೊಂಡು, ಸತ್ಯ ಒಮ್ಮೆಲೇ 'ನಾನು', 'ನಾನು' ಎಂಬುದು ಪ್ರಕಟವಾಗುತ್ತದೆ. ಅದು ಹೀಗೆ ತನ್ನನ್ನು

ಪ್ರಕಟಗೊಳಿಸಿದಾಗಲೂ, ಅದು ಅಹಂಕಾರದ 'ನಾನು' ಎಂಬುದಲ್ಲ; ಆದರೆ ಪರತತ್ತ್ವ, ಪರಮಾತ್ಮ.

'ನಾನು' ಎಂಬುದು ಅಹಂಕಾರದ ಭ್ರಮೆಯನ್ನು ಕಳಚಿಕೊಂಡು 'ನಾನು' ಆಗುತ್ತದೆ. **ಭಕ್ತನ** ಉದಾಹರಣೆಯನ್ನೇ ತೆಗೆದುಕೊಳ್ಳಿ. ಅವನ ಅಹಮ್ಮಿನ 'ನಾನು' ಭಗವಂತನೊಡನೆ ಸೇರಲು, ಶರಣಾಗತಿಯಾಗಲು ಪ್ರಾರ್ಥಿಸುತ್ತದೆ. ಈ ಶರಣಾಗತಿಯಾದ ನಂತರ ಉಳಿಯುವುದು ನಿತ್ಯವಾದ 'ನಾನು'. ಅದೇ ಪರಮಾತ್ಮ. ಹಾಗಾದರೆ, ಮೊದಲು ಭಗವಂತನನ್ನು ಬೇಡಿದ 'ನಾನು' ಎಂಬುದಕ್ಕೆ ಏನಾಯಿತು? ಮಿಥ್ಯೆಯಾದ ಅದು ನಿಜವಾಗಿ ನಾಶವಾಯಿತು.

'ನಾನು' ಎಂಬುದು ಇಂದ್ರಿಯಗ್ರಾಹ್ಯವಲ್ಲವೆಂದು ಹೇಳುವವರು ಯಾರು? 'ನಾನು' ಎಂಬ ಅಜ್ಞ, ಮತ್ತು 'ನಾನು' ಎಂಬ ಅರಿವಿಗೆ ನಿಲುಕದ ಒಂದು ಇದೆಯೇ? ಒಬ್ಬನೇ ವ್ಯಕ್ತಿಯಲ್ಲಿ ಎರಡು 'ನಾನು'ಗಳು ಇವೆಯೇ? 'ನಾನು' ಎನ್ನುವುದು ಇಂದ್ರಿಯಗ್ರಾಹ್ಯವಲ್ಲವೆಂದು ಹೇಳುವುದು ಮನಸ್ಸು. ಆ ಮನಸ್ಸಿನ ಆಕರ ಯಾವುದು? ನೀವು ಮನಸ್ಸನ್ನರಸಿದರೆ, ಅದು ಮಿಥ್ಯೆ ಎಂದು ನಿಮಗರಿವಾಗುತ್ತದೆ.

ಕ್ರಿಯಾರಾಹಿತ್ಯವೆನ್ನುವುದು ನಿರಂತರ ಕ್ರಿಯೆ. ಸಂತನ ಲಕ್ಷಣ ನಿತ್ಯವಾದ ಸಂತತವಾದ ಕ್ರಿಯೆ. ಆತನ ತಾಟಸ್ಥ್ಯ ವೇಗವಾಗಿ ತಿರುಗುತ್ತಿರುವ, ಮೇಲ್ನೋಟಕ್ಕೆ ತಟಸ್ಥವಾಗಿ ಕಾಣುವ ಬುಗುರಿಯಂತೆ. ಕಣ್ಣು ಗುರುತಿಸಲಾಗದಷ್ಟು ವೇಗವಾಗಿ ಚಲಿಸುತ್ತಿರುವುದರಿಂದ ಅದು ತಟಸ್ಥವಾಗಿ ಕಾಣುತ್ತದೆ. ಆದರೆ ಅದು ತಿರುಗುತ್ತಿದೆ. ಹಾಗೆಯೇ ಸಂತನ ಮೇಲ್ನೋಟದ ತಾಟಸ್ಥ್ಯವೂ. ಇದನ್ನು ವಿವರಿಸಿ ಹೇಳಬೇಕು; ಏಕೆಂದರೆ ಜನರು ಅವನ ತಾಟಸ್ಥ್ಯವನ್ನು ನಿಷ್ಕ್ರಿಯತೆಯೆಂದು ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಅದು ಹಾಗಲ್ಲ.

ದಿವ್ಯಜ್ಞಾನ ನಮಗೆ ಆತ್ಮವೆನ್ನುವುದು ಯಾವುದೆಂದು ಏಕೆ ಹೇಳುವುದಿಲ್ಲ? ಇದಕ್ಕೆ ಒಬ್ಬನು ಮಾಡಬೇಕಾದುದಾದರೂ ಇಷ್ಟೆ: ಅನಾತ್ಮಗಳೆಲ್ಲವನ್ನೂ, ಮುಸುಕುಗಳೆಲ್ಲವನ್ನೂ ಬೇರ್ಪಡಿಸಬೇಕು. ಒಬ್ಬನಿಗೆ ತಾನು ಮಾನವನೆ ಅಲ್ಲವೆ ಎಂಬ ಸಂಶಯ ಬಂದರೆ, ಆತ ಯಾರಾದರೊಬ್ಬರ ಬಳಿ ಹೋಗಿ ಕೇಳುತ್ತಾನೆ. ಆಗ ಆ ಬೇರೊಬ್ಬನು ಅವನು ಮರ ಅಲ್ಲ, ಹಸುವೂ ಅಲ್ಲ ಮೊದಲಾದ್ದಾಗಿ ಹೇಳಿ, ಅವನು ಮಾನವನಲ್ಲದೆ ಬೇರೆ ಯಾರೂ ಅಲ್ಲ ಎಂದು ಮನವರಿಕೆ ಮಾಡಿಕೊಡುತ್ತಾನೆ. ಅದಾದನಂತರವೂ ಅವನು ತೃಪ್ತಿಯಾಗದೆ 'ನಾನು ಯಾರೆಂದು ನೀವು ಹೇಳಿಲ್ಲ' ಎಂದು ಹೇಳಿದರೆ, ಉತ್ತರ ಹೀಗಿರುತ್ತದೆ: 'ನೀನೊಬ್ಬ ಮನುಷ್ಯನಲ್ಲ ಎಂದು ಹೇಳಿಲ್ಲವಲ್ಲ.' ತಾನೊಬ್ಬ ಮನುಷ್ಯನೆಂದು ತಿಳಿಯದವನಿಗೆ ಹಾಗೆಂದು ಹೇಳುವುದು ವ್ಯರ್ಥ. ಅಂತೆಯೇ, ನಾವು ಯಾವುದು ಅಲ್ಲವೆಂದು ಹೇಳಿ, ಅವನ್ನೆಲ್ಲ



'ನೇತಿ ನೇತಿ' ಎಂದು ಪ್ರತ್ಯೇಕಿಸಿ, ನಾವು ಉಳಿಕೆಯನ್ನು ನಿಜವಾದ ಆತ್ಮವನ್ನು ಕಾಣಬೇಕು.

'ನಾನು ಯಾರು' ಎಂಬ ಅನ್ವೇಷಣೆಯನ್ನು ಹೇಗೆ ಮಾಡಬಹುದು?" ಈ ವಿಧಾನ ವ್ಯಕ್ತಿನಿಷ್ಠವೇ ಹೊರತು ವಸ್ತುನಿಷ್ಠವಲ್ಲ; ಆದ್ದರಿಂದ ಅದು ಬೇರೊಬ್ಬರಿಂದ ತೋರಿಸಲು ಸಾಧ್ಯವಿಲ್ಲ, ತೋರಿಸುವ ಆವಶ್ಯಕತೆಯೂ ಇಲ್ಲ. ತನ್ನ ಸ್ವಂತ ಮನೆಯೊಳಗಿನ ದಾರಿಯನ್ನು ಯಾರಾದರೂ ತೋರಿಸುವ ಆವಶ್ಯಕತೆ ಇದೆಯೆ? ಸಾಧಕನು ತನ್ನ ಮನಸ್ಸನ್ನು ಸ್ತಿಮಿತವಾಗಿ, ನಿಶ್ಚಲವಾಗಿ ಇಟ್ಟುಕೊಂಡರೆ ಸಾಕು.

ಕಾಯಗಳು ಆಕಾಶದಲ್ಲಿವೆ. ಕಾಯಗಳು ಮತ್ತು ಆಕಾಶ ಎರಡೂ ಕನ್ನಡಿಯಲ್ಲಿ ಪ್ರತಿಬಿಂಬಿತವಾಗುತ್ತವೆ. ಆಕಾಶದಲ್ಲಿ ಕಾಯಗಳಿರುವಂತೆಯೇ ಪ್ರತಿಬಿಂಬದಲ್ಲೂ ಇರುತ್ತವೆ. ದರ್ಪಣವೇ ಸಣ್ಣಗಿರುತ್ತದೆ. ಅದರ ವಿಸ್ತಾರದಲ್ಲಿ ಈ ಕಾಯಗಳು ಹೇಗೆ ಅಡಕವಾಗಿರುತ್ತವೆ? ಘಟದ ಪ್ರತಿಫಲನ **ಆಕಾಶ**ದಲ್ಲಿರುವುದಿಲ್ಲ. ಪ್ರತಿಫಲನವಿರುವುದು ನೀರಿನಲ್ಲಿ ಮಾತ್ರ. ಅನೇಕ ಮಡಿಕೆಗಳಲ್ಲಿ ನೀರು ತುಂಬಿ ಅವನ್ನು ಒಂದು ತೊಟ್ಟಿಯಲ್ಲಿ ಇಡಿ; ಆಕಾಶವು ಆ ಪ್ರತಿಯೊಂದು ಮಡಿಕೆಯಲ್ಲೂ, ತೊಟ್ಟಿಯಲ್ಲೂ ಪ್ರತಿಫಲಿತವಾಗುತ್ತದೆ. ಅಂತೆಯೇ ಇಡೀ ವಿಶ್ವವೇ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪ್ರತಿಫಲಿತವಾಗುತ್ತದೆ. ನಿರ್ಮಲ ಆಕಾಶ (ಈಥರ್) ಪ್ರತಿಫಲನ ಮಾಡದು; ನೀರಿನ ಈಥರ್ ಮಾತ್ರ ಮಾಡಬಲ್ಲದು. ಗಾಜು ವಸ್ತುಗಳನ್ನು ಪ್ರತಿಫಲಿಸಲಾರದು; ಹಿಂಭಾಗದಲ್ಲಿ ಅಪಾರದರ್ಶಕ ಅಸ್ತರಿಯುಳ್ಳ ಗಾಜು ಮಾತ್ರ ತನ್ನೆದುರಿಗಿರುವ ವಸ್ತುಗಳನ್ನು ಪ್ರತಿಫಲಿಸಬಲ್ಲದು. ಅಂತೆಯೇ ಶುದ್ಧ ಜ್ಞಾನವು ವಸ್ತುಗಳನ್ನು ಸ್ವೀಕರಿಸುವುದೂ ಇಲ್ಲ, ಪ್ರತಿಫಲಿಸುವುದೂ ಇಲ್ಲ. ಮನಸ್ಸು ಸೀಮಿತ ಅನುಬಂಧದೊಡನೆ ಪ್ರಪಂಚವನ್ನು ಪ್ರತಿಫಲಿಸುತ್ತದೆ. ಮನಸ್ಸು **ಚಿತ್** (ಬುದ್ಧಿ) ಮತ್ತು **ಸಂಕಲ್ಪ**ಗಳ (ಆಲೋಚನೆಗಳ) ಮಿಶ್ರಣ. ಆದ್ದರಿಂದಲೇ ಅದು ದರ್ಪಣ, ಬೆಳಕು, ಕತ್ತಲು ಮತ್ತು ಪ್ರತಿಫಲಗಳು – ಇವೆಲ್ಲವೂ ಆಗುತ್ತದೆ.

'ನಾನು' – 'ನಾನು' ಎನ್ನುವುದು ಆತ್ಮ. 'ನಾನು ಇದು' ಎನ್ನುವುದು ಅಹಂಕಾರ. 'ನಾನು' ಎನ್ನುವುದನ್ನು 'ನಾನು' ಎಂಬುದಾಗಿಯೇ ಇಟ್ಟುಕೊಂಡರೆ ಆಗ ಅದು ಆತ್ಮ. ಅದು ಎತ್ತೆತ್ತಲೋ ಹೋಗಿ 'ನಾನು ಇದು, ಅದು', 'ನಾನು ಹೀಗೆ, ಹಾಗೆ' ಎಂದು ಹೇಳಿದರೆ, ಆಗ ಅದು ಅಹಂಕಾರ.

'ನಾನು', 'ನಾನು' ಎನ್ನುವುದು ಯಾವಾಗಲೂ ಇರುತ್ತದೆ. ಅದು ಯಾವುದೋ ಹೊಸದಾಗಿ ಸಂಪಾದಿಸಿದ ಜ್ಞಾನವಲ್ಲ. ಯಾವುದು ಹೊಸದೋ, ಇಲ್ಲಿ ಮತ್ತು ಈಗ ಇಲ್ಲವೋ ಅದು ಕ್ಷಣಭಂಗುರವಾದುದು. 'ನಾನು' ಯಾವಾಗಲೂ ಇರುತ್ತದೆ. ಅದರ ಜ್ಞಾನಕ್ಕೆ ಅಡ್ಡಿಯಿದೆ. ಆ ಅಡ್ಡಿಯನ್ನೇ ಅವಿದ್ಯೆ ಎನ್ನುತ್ತಾರೆ. ಆ ಅವಿದ್ಯೆಯನ್ನು ತೆಗೆಯಬೇಕು, ಅಷ್ಟೆ. ಜ್ಞಾನವೂ ಆತ್ಮವಲ್ಲ. ಜ್ಞಾನ ಮತ್ತು ಅವಿದ್ಯೆಗಳು ಕತ್ತರಿಸಿ

ಎಸೆಯಬೇಕಾದ ದುರ್ಮಾಂಸಗಳು. ಆದ್ದರಿಂದಲೇ ಆತ್ಮವು ಜ್ಞಾನಾತೀತವೆಂದೂ ಅವಿದ್ಯಾತೀತವೆಂದೂ ಹೇಳುತ್ತಾರೆ. ಅದು ಸಹಜವಾದುದು, ಅಷ್ಟೆ.

'ನಾನು ಬದ್ಧ' ಎಂಬ ಆಲೋಚನೆ ಬಂದರೆ, ಮುಕ್ತಿಯ ಆಲೋಚನೆಯೂ ಏಳುತ್ತದೆ. 'ನಾನು' ಎಂಬುದರ, 'ಬದ್ಧನಾದ ನಾನು ಯಾರು' ಎಂಬುದರ ಅನ್ವೇಷಣೆಯಿಂದ ನಿತ್ಯಮುಕ್ತವಾದ, ಚಿರನೂತನವಾದ, ಅವಿನಾಶಿಯಾದ ಆತ್ಮವೊಂದೇ ಉಳಿಯುತ್ತದೆ; ಆಗ ಬಂಧನದ ಆಲೋಚನೆ ಹೇಗೆ ಏಳುತ್ತದೆ? ಆ ಆಲೋಚನೆ ಬರದೆ ಇದ್ದರೆ, ಅಂಥವನಿಗೆ ಮೋಕ್ಷದ ಆಲೋಚನೆ ಹೇಗೆ ಏಳುತ್ತದೆ?

ಪ್ರಾಣ ಮತ್ತು ಮನಸ್ಸು ಒಂದೇ ಕಡೆಯಿಂದ ಏಳುತ್ತವೆ; ಅವುಗಳಲ್ಲೊಂದನ್ನು ನಿಯಂತ್ರಿಸಿದಾಗ, ಇನ್ನೊಂದೂ ನಿಯಂತ್ರಿತವಾಗುತ್ತದೆ. ವಾಸ್ತವವಾಗಿ ಶೋಧನಾವಿಧಾನದಲ್ಲಿ ಪರಮಸತ್ಯವನ್ನು ತಲುಪಲು – 'ಎಲ್ಲಿಂದ ಬಂದೆ', ಮತ್ತು 'ನಾನು ಯಾರು' ಎಂದು ಮಾತ್ರವಲ್ಲದೆ – ನಾವು ದೇಹವಲ್ಲ, ಕೇವಲ ಇಂದ್ರಿಯಗಳಲ್ಲ, ಇತ್ಯಾದಿಯಾಗಿ ಒಂದೊಂದಾಗಿ ನೇತಿ, ನೇತಿ ಎಂದು ಹೇಳುತ್ತಿಲ್ಲ; ಆದರೆ 'ನಾನು' ಎಂಬುದು ಅಥವಾ ಅಹಂಕಾರ ನಮ್ಮೊಳಗೆ ಎಲ್ಲಿಂದ ಏಳುತ್ತದೆ ಎನ್ನುವುದನ್ನು ನೋಡಲು ಪ್ರಯತ್ನಿಸುತ್ತಿದ್ದೇವೆ. ಈ ವಿಧಾನದಲ್ಲಿ ಸೂಚ್ಯವಾಗಿ ಅಥವಾ ವಾಚ್ಯವಾಗಿ, ಪ್ರಾಣವನ್ನು ಗಮನಿಸುವುದಿದೆ. ಎಲ್ಲಾ ಆಲೋಚನೆಗಳ ಮೂಲಕಾರಣವಾದ 'ನಾನು' ಎಂಬ ಆಲೋಚನೆ ಎಲ್ಲಿಂದ ಏಳುತ್ತದೆಂಬುದನ್ನು ಗಮನಿಸಿದರೆ, ನಾವು ಪ್ರಾಣದ ಮೂಲವನ್ನೇ ಅವಶ್ಯವಾಗಿ ಗಮನಿಸುತ್ತಿದ್ದೇವೆ.

ಅಹಂಕಾರಕ್ಕೆ ತನ್ನದೇ ಆದ ಸ್ವರೂಪ ಇಲ್ಲ. ಆದರೆ ತಾನು ಒಳಗೊಳ್ಳುವ ಯಾವುದೇ ರೂಪವನ್ನವಲಂಬಿಸುತ್ತದೆ. ಅದನ್ನು ಆಶ್ರಯಿಸಿದರೆ ಅದಕ್ಕೆ ರೆಕ್ಕೆಪುಕ್ಕ ಬಂದುಬಿಡುತ್ತದೆ. ಅಹಂಕಾರ ತಲೆಯೆತ್ತಿದರೆ, ಬೇರೆ ಎಲ್ಲವೂ ತಲೆ ಎತ್ತುತ್ತವೆ; ಮತ್ತು ಅದು ಶಮನವಾದರೆ ಬೇರೆಲ್ಲವೂ ಶಮನವಾಗುವುದರಿಂದ, ಅಹಂಕಾರವನ್ನು ಆತ್ಮಶೋಧನೆಯಿಂದ ನಾಶಗೊಳಿಸಬೇಕು. ಅದೇ ನಿಜವಾದ ವಿರಕ್ತಿ. ನಾನತ್ವವಿಲ್ಲಕೆಯ (I -lessness) ಆತ್ಮಪ್ರಜ್ಞಾಸ್ಥಿತಿಯೇ ಆತ್ಮಶೋಧನೆಯ ಮೂಲಕ ಅಹಂಕಾರ ನಾಶಮಾಡಿದ ನೈಜ ಸಾಕ್ಷಾತ್ಕಾರದ ಸ್ಥಿತಿ.

ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಯಾವುದೇ ಧರ್ಮಗ್ರಂಥಗಳ ಜ್ಞಾನವಾಗಲಿ ಕಲಿಕೆಯಾಗಲಿ ಬೇಕಿಲ್ಲ. ಎಲ್ಲಾ ಜ್ಞಾನಸಂಪಾದನೆಯೂ 'ಅನಾತ್ಮ'ವನ್ನು ತಿಳಿದು ಬಿಟ್ಟು ಬಿಡುವುದಕ್ಕಾಗಿ. ಗೃಹಕೃತ್ಯವಾಗಲಿ, ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವುದಾಗಲಿ ಇದಕ್ಕೆ ಅಡ್ಡಿಬರುವುದಿಲ್ಲ. ನೀವು ಹೆಚ್ಚಿಗೆ ಏನನ್ನೂ ಮಾಡಬೇಕಾಗಿಲ್ಲ; ಕನಿಷ್ಠಪಕ್ಷ ಏನಾದರೂ ಕೆಲಸ ಮಾಡುತ್ತಿರುವಾಗ, ಕುಳಿತಿರುವಾಗ, ನಿಂತಿರುವಾಗ ನಿಮಗೆ ನೀವೇ ಮನಸ್ಸಿನಲ್ಲಿ 'ಅಹಂ', 'ಅಹಂ' ಎಂದು ಹೇಳಿಕೊಳ್ಳಬೇಕು.



'ಅಹಂ' ಎನ್ನುವುದು ಭಗವನ್ನಾಮ. ಅದು ಮಂತ್ರಗಳಲ್ಲೆಲ್ಲಾ ಮೊದಲನೆಯದು ಮತ್ತು ಮಹಾಮಂತ್ರ. ಓಂಕಾರ ಕೂಡ ಅದಾದ ನಂತರ ಬರುತ್ತದೆ.

'ಅಹಂ' ಅತಿಯಾದಾಗ ಅದೇ ಜ್ಞಾತೃವೂ ಜ್ಞೇಯವೂ ಎರಡೂ ಆಗುತ್ತದೆ. 'ಅಹಂ' (ಅಹಂಕಾರವಾಗಿ) ಏಳದಾಗ ಜ್ಞಾತೃವೂ ಇಲ್ಲ, ಜ್ಞೇಯವೂ ಇಲ್ಲ. ಪಕ್ವತೆ ಪ್ರಾಪ್ತವಾದವನಿಗೆ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ಇದನ್ನು ತಿಳಿದು ಅವನು ತನ್ನ ಮನಸ್ಸನ್ನು ಅಂತರ್ಮುಖಿಯಾಗಿಸಿ, ಇವೆಲ್ಲವುಗಳಿಂದ ದೂರವಿರುತ್ತಾನೆ. ಇದನ್ನು ಮಾಡಬೇಕಾದರೆ ಅವನು **ಧೀರ**ನಾಗಿರಬೇಕು. ತನ್ನನ್ನು ತಾನು ಕಂಡುಕೊಳ್ಳಬೇಕಾದರೆ ಯಾವ ಧೀರತನ ಬೇಕು? **ಧೀ** ಎಂದರೆ ಮನಸ್ಸು, **ರ** ಎಂದರೆ ಶಕ್ತಿಗಳನ್ನು ಆಲೋಚನೆಗಳು ಹೊರಹರಿಯುವಂತೆ ಉಳಿಸುವವ. ಯಾರು ಆಲೋಚನೆಗಳ ಪ್ರವಾಹವನ್ನು ತಡೆದು ಮನಸ್ಸನ್ನು ಅಂತರ್ಮುಖಿಯಾಗಿಸುವನೋ ಅವನೇ ಧೀರ.

ಆತ್ಮವನ್ನು ಅರಿಯುವುದು ಎಂದರೆ ಆತ್ಮವೇ ಆಗಿರುವುದು, ಅಸ್ತಿತ್ವವೆಂದರೆ ಒಬ್ಬನ ಬದುಕು. ಅಸ್ತಿತ್ವವನ್ನು ಯಾರೂ ಇಲ್ಲವೆನ್ನಲಾಗದು; ಕಣ್ಣಿನಿಂದ ನೋಡಲಾಗದಿದ್ದರೂ ಕಣ್ಣನ್ನು ಯಾರೂ ಅಲ್ಲಗಳೆಯರು. ತೊಂದರೆ ಇರುವುದು ಆತ್ಮವನ್ನು ಮೂರ್ತೀಕರಿಸುವ ಅಪೇಕ್ಷೆಯಲ್ಲಿ; ಕನ್ನಡಿಯ ಮುಂದೆ ಕಣ್ಣುಗಳಿಂದ ತನ್ನನ್ನು ನೋಡುವಂತೆ. ಇಂದ್ರಿಯಗ್ರಾಹ್ಯವಾದುದನ್ನು ನೋಡಿ ನೋಡಿ ಆತ್ಮದ ಜ್ಞಾನವೇ ಹೊರಟುಹೋಗಿದೆ; ಏಕೆಂದರೆ ಆತ್ಮವನ್ನು ಮೂರ್ತೀಕರಿಸಲು ಸಾಧ್ಯವಿಲ್ಲ. ಯಾರು ಆತ್ಮವನ್ನು ಅರಿಯಬೇಕು? ಅಚೇತನವಾದ ದೇಹ ಅಥವಾ ಮನಸ್ಸು ಅದನ್ನು ಗ್ರಹಿಸಬಲ್ಲುದೆ? ಸದಾಕಾಲವೂ ಒಬ್ಬನು 'ನಾನು', ನಾನು', 'ನಾನು' ಎಂದು ಹೇಳುತ್ತಾನೆ ಮತ್ತು ಆಲೋಚಿಸುತ್ತಾನೆ. ನೀವೇ ಆತ್ಮ; ಆದರೂ ನೀವು ಆತ್ಮವನ್ನು ಅರಿಯುವುದು ಹೇಗೆ ಎಂದು ಕೇಳುವಿರಿ.

ಸಾಕ್ಷಾತ್ಕಾರ ಎಂದರೇನು? ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ ಮೊದಲಾದವುಗಳ ಸಮೇತ ಇರುವ ಭಗವಂತನನ್ನು ನೋಡುವುದೆ? ಆ ರೂಪದಲ್ಲಿ ಭಗವಂತ ಪ್ರತ್ಯಕ್ಷವಾದರೂ, ಭಕ್ತನ ಅಜ್ಞಾನ ಹೋಗುವುದು ಹೇಗೆ? ಅಂಥ ರೂಪ ಲೋಕೋತ್ತರವಾದುದು ಮತ್ತು ಭ್ರಮಾತ್ಮಕವಾದುದು. ಎಲ್ಲಾ ಪ್ರತ್ಯಕ್ಷಾನುಭವಗಳೂ ಪರೋಕ್ಷವಾದ ಅಥವಾ ಪರತಂತ್ರವಾದ ಜ್ಞಾನ. ಪ್ರತ್ಯಕ್ಷ ಜ್ಞಾನ ಸದಾ ಇರುವ ಅನುಭವ. ದ್ರಷ್ಟಾರ ಒಬ್ಬ ಇರಬೇಕು. ದೇಹವನ್ನು ಆತ್ಮವೆಂದು ಭಾವಿಸುವುದು ಎಷ್ಟು ಆಳವಾಗಿ ಬೇರೂರಿದೆಯೆಂದರೆ, ಕಣ್ಣಮುಂದೆ ಇರುವುದೇ, ಕಣ್ಣಿಗೆ ಕಾಣುವುದೇ **ಪ್ರತ್ಯಕ್ಷ**ವೆಂದು ಭಾವಿಸಲಾಗಿದೆ; ಆದರೆ, ದ್ರಷ್ಟಾರ ಅಲ್ಲ. ದ್ರಷ್ಟಾರನೊಬ್ಬನೇ ಸತ್ಯ ಮತ್ತು ನಿತ್ಯ. ಆತ್ಮದಲ್ಲಿ ನೆಲೆಯಾಗಿ ನಿಲ್ಲವುದು ಮತ್ತು ಆತ್ಮವಾಗಿರುವುದು, ಆತ್ಮವನ್ನು ನೋಡದಿರುವುದು – ಇದು ಸಾಕ್ಷಾತ್ಕಾರ.

"ಮೌನವಾಗಿದ್ದು ನಾನೇ ದೇವರು ಎಂದು ತಿಳಿ." ಇಲ್ಲಿ ಮೌನವೆಂದರೆ ಲೇಶಮಾತ್ರವೂ ಅಹಂಕಾರವಿಲ್ಲದ ಸಂಪೂರ್ಣ ಶರಣಾಗತಿ. ಮೌನ ಅಥವಾ ಪ್ರಶಾಂತತೆ ಇದ್ದು ಮನಸ್ಸಿನ ತಳಮಳವಿರುವುದಿಲ್ಲ. ಚಿತ್ತಕ್ಷೋಭೆಯೇ ಆಸೆಯ, ಕರ್ತೃತ್ವಭಾವನೆಯ, ವ್ಯಕ್ತಿತ್ವದ ಮೂಲಕಾರಣ. ಅದನ್ನು ತಡೆದರೆ ಪ್ರಶಾಂತತೆ ಮೂಡುತ್ತದೆ. ಇಲ್ಲಿ ತಿಳಿಯುವುದು ಎಂದರೆ 'ಇರುವುದು'. ಇದು ಮುಕ್ಕೂಟದ (ಮೂರರ ಗುಂಪಿನ) ಸಾಪೇಕ್ಷಜ್ಞಾನವಲ್ಲ. "ನಾನು – ಇಂಥವನು", 'ನಾನು' ಎನ್ನುವುದು ದೇವರು, "ನಾನೇ ದೇವರು" ಎಂದು ಭಾವಿಸದಿರುವುದು. "ನಾನು" ಎನ್ನುವುದನ್ನು ಸಾಕ್ಷಾತ್ಕರಿಸಿ, 'ನಾನು' ಎನ್ನುವುದನ್ನು ಚಿಂತಿಸಬೇಡಿ. "ಅಹಂ ಬ್ರಹ್ಮಾಸ್ಮಿ" ಎನ್ನುವುದನ್ನು ತಿಳಿಯಿರಿ. "ನಾನೇ ದೇವರು ಎಂದು ಭಾವಿಸಬೇಡಿ. ನಿಮ್ಮ ಕರ್ತವ್ಯ 'ಇರು'ವುದು. ಇದೋ ಅದೋ ಆಗಿರುವುದಲ್ಲ. ನಾನು ಆ ನಾನಾಗಿದ್ದೇನೆ (I am that I am) ಎನ್ನುವುದು ಇಡೀ ಸತ್ಯವನ್ನ ಸೂತ್ರೀಕರಿಸುತ್ತದೆ. ಇದರ ವಿಧಾನವನ್ನು "ಮೌನವಾಗಿರಿ" ಎಂಬ ಮಾತಿನಿಂದ ಸಂಗ್ರಹಿಸಲಾಗಿದೆ. ಮೌನ ಎಂದರೆ ಏನು? ಅಂದರೆ, 'ನಿನ್ನನ್ನು ನಾಶಗೊಳಿಸಿಕೊ'; ಏಕೆಂದರೆ ಪ್ರತಿಯೊಂದು ನಾಮ ಮತ್ತು ರೂಪವೂ ಕ್ಲೇಶಕಾರಣವಾಗಬಹುದು.

"ನಿನ್ನನ್ನು ತಿಳಿದುಕೊ" ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಇದೂ ಸರಿಯಲ್ಲ. ನಾವು ಆತ್ಮದ ಬಗ್ಗೆ ಅರಿಯುವುದರ ಬಗ್ಗೆ ಮಾತಾಡಿದರೆ ಆಗ ಎರಡು ಆತ್ಮಗಳಿರಬೇಕಾಗುತ್ತದೆ; ಒಂದು ಅಜ್ಞಾತ ಆತ್ಮ; ಇನ್ನೊಂದು ಜ್ಞಾತ ಆತ್ಮ. ನಾವು ಸಾಕ್ಷಾತ್ಕಾರವೆಂದು ಕರೆಯುವ ಸ್ಥಿತಿ ಆತ್ಮವಾಗಿರುವುದು, ಯಾವುದನ್ನೇ ಅರಿಯುವುದಾಗಲಿ, ಯಾವುದೇ ಆಗುವುದಾಗಲಿ ಅಲ್ಲ. ಒಬ್ಬನಿಗೆ ಸಾಕ್ಷಾತ್ಕಾರವಾಗಿದ್ದರೆ, ಅವನು ಏಕಮೇವ ಆಗಿರುವ, ಮತ್ತು ನಿತ್ಯವಾಗಿರುವ ಆತ್ಮನಾಗಿರುವವನು.

"ನಾನು ಅಸ್ತಿತ್ವದಲ್ಲಿರುವೆ" ಎಂಬುದೊಂದೇ ನಿತ್ಯ, ಮತ್ತು ಪ್ರತಿಯೊಬ್ಬರ ಪ್ರತ್ಯಕ್ಷಾನುಭವ. 'ನಾನಾಗಿರುವೆ' ಎಂಬಷ್ಟು ಬೇರೆ ಯಾವುದೂ ಪ್ರತ್ಯಕ್ಷಾನುಭವವಲ್ಲ. ಜನರು 'ಪ್ರತ್ಯಕ್ಷಾನುಭವ' ಎಂದು ಕರೆಯುವುದು – ಅಂದರೆ ಇಂದ್ರಿಯಗಳ ಮೂಲಕ ಪಡೆಯುವ ಅನುಭವ – ಪ್ರತ್ಯಾಕ್ಷಾನುಭವವೇ ಅಲ್ಲ. ಆತ್ಮವೇ **ಅದು**. **ಪ್ರತ್ಯಕ್ಷ** ಎನ್ನುವುದು ಆತ್ಮಕ್ಕೆ ಇನ್ನೊಂದು ಹೆಸರು.

'ಅಹಂ ಬ್ರಹ್ಮಾಸ್ಮಿ' ('ನಾನು ಬ್ರಹ್ಮ') ಎಂಬ ಉಪನಿಷದ್ವಾಕ್ಯದ ಅರ್ಥ ಬ್ರಹ್ಮನು 'ನಾನು' ಎಂಬುದಾಗಿ ಅಸ್ತಿತ್ವದಲ್ಲಿದ್ದಾನೆ ಎಂದೇ ಹೊರತು 'ನಾನು ಬ್ರಹ್ಮ' ಎಂದಲ್ಲ. ಒಬ್ಬನು 'ನಾನು ಬ್ರಹ್ಮ', 'ನಾನು ಬ್ರಹ್ಮ' ಎಂದು ಧ್ಯಾನಿಸಬೇಕೆಂದು ಇದರರ್ಥವಲ್ಲ. ಒಬ್ಬನು 'ನಾನೊಬ್ಬ ಮನುಷ್ಯ', 'ನಾನೊಬ್ಬ ಮನುಷ್ಯ' ಎಂದು ಸದಾ ಚಿಂತಿಸುತ್ತಿರುವನೆ? ಅವನು ಅದೇ ಆಗಿರುವನು; ಅವನು ಮೃಗವೋ ಮರವೋ ಎಂಬ ಸಂಶಯ ಬಂದಾಗ ಹೊರತು, ಅವನು 'ನಾನೊಬ್ಬ ಮನುಷ್ಯ'



ಎಂದು ಸಮರ್ಥಿಸಿಕೊಳ್ಳಬೇಕಾಗಿಲ್ಲ. ಅಂತೆಯೇ ಆತ್ಮವು ಆತ್ಮವೇ. ಬ್ರಹ್ಮನು 'ನಾನು ಆಗಿದ್ದೇನೆ' ಎಂದು ಪ್ರತಿಯೊಂದರಲ್ಲೂ ಇದ್ದಾನೆ.

**ಆತ್ಮಸಾಕ್ಷಾತ್ಕಾರ**ವೆಂದರೇನು? ನೀವೇ ಆತ್ಮ ಮತ್ತು **ಸಾಕ್ಷಾತ್** (ಇಲ್ಲಿ ಮತ್ತು ಈಗ) ಸಹ. ಇನ್ನು **ಕಾರ** (ಮಾಡಿಕೊಳ್ಳುವುದು) ಎಲ್ಲಿ ಬಂತು? ಈ ಪ್ರಶ್ನೆಯಿಂದ ನೀವು ಅನಾತ್ಮವೆಂದು ಭಾವಿಸಿದಂತಾಯಿತು. ಅಥವಾ ನೀವು ಎರಡು ಆತ್ಮಗಳಿವೆಯೆಂದು ಭಾವಿಸುವಿರಿ, ಒಂದು ಇನ್ನೊಂದನ್ನು ಸಾಕ್ಷಾತ್ಕರಿಸಲು. ಇದು ಅಬದ್ಧ, ಅರ್ಥಶೂನ್ಯ.

ನಾನು ಆತ್ಮಜ್ಞಾನದ ಬಗ್ಗೆ ಒತ್ತುಕೊಡುತ್ತೇನೆ. ಏಕೆಂದರೆ, ನೀವು ಲೋಕದ ಬಗ್ಗೆ ಮತ್ತು ಅದರ ಈಶ್ವರನ ಬಗ್ಗೆ ತಲೆಕೆಡಿಸಿಕೊಳ್ಳುವ ಮುಂಚೆ ನಿಮ್ಮ ಆತ್ಮದ ಬಗ್ಗೆ ತಲೆಕೆಡಿಸಿಕೊಳ್ಳುವಿರಿ. **ಸೋಹಂ** ಅಥವಾ 'ನಾನು ಬ್ರಹ್ಮ' ಎಂಬ ಧ್ಯಾನ ಹೆಚ್ಚುಕಡಮೆ ಒಂದು ಮಾನಸಿಕ ಪ್ರಕ್ರಿಯೆ. ನಾನು ಹೇಳುವ ಆತ್ಮಶೋಧ ನೇರವಾದ ವಿಧಾನ, ಬೇರೆ ಧ್ಯಾನಕ್ಕಿಂತ ಉತ್ತಮವಾದುದು; ಏಕೆಂದರೆ, ನೀವು ಆತ್ಮಶೋಧನೆಗೆ ತೊಡಗಿದ ಕ್ಷಣ, ಮತ್ತು ಹೆಚ್ಚು ಆಳಕ್ಕೆ ಇಳಿಯುತ್ತ ಇಳಿಯುತ್ತ, ನಿಜವಾದ ಆತ್ಮವು ನಿಮ್ಮನ್ನು ಒಳಕ್ಕೆ ತೆಗೆದುಕೊಳ್ಳಲು ಕಾಯುತ್ತಿದೆ, ಮತ್ತು ಏನನ್ನು ಮಾಡಲಾಗಿದೆಯೋ ಅದು ಬೇರೆಯದರಿಂದ; ಅದರಲ್ಲಿ ನಿಮ್ಮ ಕೈವಾಡವೇನೂ ಇರುವುದಿಲ್ಲ. ಈ ಪ್ರಕ್ರಿಯೆಯಲ್ಲಿ ಎಲ್ಲಾ ಸಂಶಯಗಳೂ ಚರ್ಚೆಗಳೂ ತಂತಾನೆ ಬಿಡಲ್ಪಡುತ್ತವೆ. ಒಬ್ಬನು ನಿದ್ರಿಸಿದಾಗ, ತಾತ್ಕಾಲಿಕವಾಗಿ ತನ್ನ ಚಿಂತೆಗಳೆಲ್ಲವನ್ನೂ ಮರೆಯುವಂತೆ.

ಆತ್ಮ ಎನ್ನುವುದು ಏಕಾಕಿ ಅಸ್ತಿತ್ವ. ಹೀಗಾಗಲಿ ಹಾಗಾಗಲಿ ಇರುವಂಥದಲ್ಲ. ಅದು ಸರಳ ಅಸ್ತಿತ್ವ. ಹಾಗಿದ್ದರೆ, ಅಜ್ಞಾನ ಕೊನೆಗೊಳ್ಳುತ್ತದೆ. ನೀವು ನಿದ್ದೆಯಿಂದ ಎದ್ದಾಗ ಅಹಂ ಎನ್ನುವುದು ಜಾಗ್ರತವಾಗುತ್ತದೆ. ನಿದ್ದೆ ಮಾಡುತ್ತಿದ್ದೇನೆಂದು, ಏಳುತ್ತೇನೆಂದು ಅಥವಾ ಇಷ್ಟುಹೊತ್ತೂ ನಿದ್ದೆ ಮಾಡುತ್ತಿದ್ದುದಾಗಿ ನೀವು ಹೇಳುವುದಿಲ್ಲ. ಆದರೂ ನೀವು ಇದ್ದೀರಿ. ನೀವು ಮಲಗಿದ್ದೇನೆಂದು ಎಚ್ಚರವಾಗಿದ್ದಾಗ ಹೇಳುತ್ತೀರಿ; ಮತ್ತು ನಿಮ್ಮ ಜಾಗ್ರದಾವಸ್ಥೆಯೊಳಗೆ ನಿದ್ದೆಯೂ ಇದೆ. ನಿಮ್ಮ ಶುದ್ಧ ಸತ್ತ್ವವನ್ನು ಸಾಕ್ಷಾತ್ಕರಿಸಿ ಆತ್ಮದ ಬಗ್ಗೆ ಗೊಂದಲ ಬೇಡ. ಚಿಂತನೆಗಳ ಫಲಿತಾಂಶವೇ ದೇಹ. ಎಂದಿನಂತೆ ಚಿಂತನೆಗಳು ವಿಲಾಸವಾಡುತ್ತಲೇ ಇರುತ್ತವೆ. ಆದರೆ ಅವುಗಳ ಆಟ ನಿಮ್ಮ ಮೇಲೆ ಪ್ರಭಾವಬೀರದು. ನಿದ್ದೆ ಮಾಡಿರುವಾಗ ನಿಮ್ಮ ದೇಹದ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗೆಯೇ ನೀವು ಯಾವಾಗಲೂ ಇರಬಹುದು.

ಬ್ರಹ್ಮನು **ವಿದ್ಯೆ** ಮತ್ತು **ಅವಿದ್ಯೆ**ಗಳಿಂದ ಅತೀತನು. ಅದು ಮಾಯಾತೀತ. ಬ್ರಹ್ಮನ್ ಎಂದರೆ ಏನು ಎಂಬುದನ್ನು ಬಣ್ಣಿಸಲಾಗದು. ಪ್ರಪಂಚದ ವಸ್ತುಗಳೆಲ್ಲವನ್ನೂ – ವೇದಗಳು, ಪುರಾಣಗಳು, ತಂತ್ರಗಳು, ಷಡ್ದರ್ಶನಗಳು ಎಲ್ಲವನ್ನೂ –

ವಿಶದೀಕರಿಸಲಾಗಿದೆ ಮತ್ತು ಅಪವಿತ್ರಗೊಳಿಸಲಾಗಿದೆ; ನಾಲಗೆಯಿಂದ ಸ್ಪರ್ಶಿಸಲ್ಪಟ್ಟ ಆಹಾರದಂತೆ; ಏಕೆಂದರೆ ಅವೆಲ್ಲವನ್ನೂ ಓದಲಾಗಿದೆ ಇಲ್ಲವೆ ಉಚ್ಚರಿಸಲಾಗಿದೆ. ಈ ರೀತಿಯಲ್ಲಿ ಒಂದೇ ಒಂದನ್ನು ಮಾತ್ರ ವಿವರಿಸಿಲ್ಲ. ಅದೆಂದರೆ ಬ್ರಹ್ಮನ್. ಒಬ್ಬನು ಸಾಗರವನ್ನು ನೋಡಿದ್ದು, ಯಾರಾದರೂ ಅವನನ್ನು 'ಸಾಗರ ಹೇಗಿದೆ' ಎಂದು ಕೇಳಿದರೆ, ಅವನು ತನ್ನ ಬಾಯನ್ನು ಎಷ್ಟು ಸಾಧ್ಯವೋ ಅಷ್ಟು ಅಗಲಿಸಿ, 'ಎಂಥ ದೃಶ್ಯ!' 'ಭಯಂಕರ ಅಲೆಗಳು ಮತ್ತು ಧ್ವನಿಗಳು!' ಎಂದು ಹೇಳುವನು. ಶಾಸ್ತ್ರಗಳಲ್ಲಿರುವ ಬ್ರಹ್ಮದ ವಿವರಣೆ ಈ ರೀತಿಯದು. ವೇದಗಳಲ್ಲಿ ಬ್ರಹ್ಮನು ಆನಂದಸ್ವರೂಪಿ – ಅದು **ಸಚ್ಚಿದಾನಂದ** ಎಂದು ಹೇಳಿದೆ.

ಆ ಪರಿಪೂರ್ಣ ಬ್ರಹ್ಮಸ್ಥಿತಿಯನ್ನು ಸಾಕ್ಷಾತ್ಕರಿಸಿಕೊಂಡವನಿಗೆ – ಇದು ಅನಿರ್ವಚನೀಯ ಬ್ರಹ್ಮಾನಂದ – ಇನ್ನು ಯಾವುದನ್ನೂ ಸಾಧಿಸಬೇಕಾದ ಆವಶ್ಯಕತೆಯಿಲ್ಲ, ಆತ್ಮ ಒಂದೇ. ಆತ್ಮಜ್ಞಾನ ಅನನ್ಯ; ಅದು ಎಂದೂ ಜ್ಞಾತವಾದ ಅಥವಾ ಅಜ್ಞಾತವಾದ ವಿಷಯವಾಗಲಾರದು.

ನಿರಾಕಾರ ಆತ್ಮನೊಂದಿಗೆ ಒಂದಾಗಿರುವವನಿಗೆ ಎಲ್ಲವೂ ನಿರಾಕಾರ. ಜಗತ್ತಿನ ಅಸ್ತಿತ್ವ ಕೇವಲ ಸಾಪೇಕ್ಷವಾದುದು. ಜಗತ್ತು ಮತ್ತು ಮನಸ್ಸು ನಿಜವಾಗಿ ಸಮಾನಾರ್ಥಕ ಪದಗಳು. ಜ್ಞಾನವು ಜಗತ್ತನ್ನು ಪ್ರಕಾಶಗೊಳಿಸುವುದರಿಂದ, ಮೊದಲನೆಯದು ಕೊನೆಯದಕ್ಕಿಂತ ಮೇಲಿನದು. ಜ್ಞಾನವೊಂದೇ ಸತ್ಯ, ಅದು ಬದಲಾಗದಂಥದ್ದು. ನಾಮಸಂಕೀರ್ತನೆ ಮತ್ತು ಸಾಕಾರ (ಅರ್ಚಾವಿಗ್ರಹ) ಪೂಜೆ ಎಲ್ಲವೂ ನಾಮರಹಿತ ಮತ್ತು ನಿರಾಕಾರನ ಸಾಕ್ಷಾತ್ಕಾರದ ಸಾಧನಗಳೆಯೇ.

ಸಾಪೇಕ್ಷ ಜ್ಞಾನ ಮತ್ತು ಪ್ರತ್ಯಕ್ಷ ಜ್ಞಾನಗಳು ಆತ್ಮಜ್ಞಾನದ ಮುಂದೆ ಏನೂ ಇಲ್ಲ; ಅದೊಂದೇ ನಿಜವಾದ ಜ್ಞಾನ. ಏಕೆಂದರೆ, ಆತ್ಮವೇ ಎಲ್ಲದಕ್ಕೂ ಮೂಲ. ಜ್ಞಾತೃವನ್ನು ಹೊರತುಪಡಿಸಿ ಬೇರೆ ಎಲ್ಲವನ್ನೂ ತಿಳಿಯುವುದು ಶುದ್ಧ ಅಜ್ಞಾನ. ಆತ್ಮವು ಪರಮಜ್ಞಾನ; ಅದು ತಿಳಿಯುವುದೂ ಇಲ್ಲ, ತಿಳಿಯದಂಥದೂ ಅಲ್ಲ. ಅದು ಎಂದೂ ಅಜ್ಞಾನವಾಗದು. ಆತ್ಮವು ಏಕವೂ ಸರ್ವವ್ಯಾಪಿಯೂ ಆಗುವುದರಿಂದ, ವೈವಿಧ್ಯದ ಜ್ಞಾನವು ಅಜ್ಞಾನ, ಮತ್ತು ಇದೂ ಆತ್ಮದಿಂದ ಬೇರೆ ಅಲ್ಲ.

**ಸತ್, ಚಿತ್, ಆನಂದ. ಸತ್** ಅಂಶವನ್ನು ಜ್ಞಾನಿಗಳು ಒತ್ತಿ ಹೇಳಿದರು. ಅವರು ಬದುಕಿನ ಸಾರದ ಸಂತರ ಶೋಧನೆಯಿಂದ, ವ್ಯಕ್ತಿತ್ವವನ್ನು ಪರಬ್ರಹ್ಮನಲ್ಲಿ ಲೀನಗೊಳಿಸಿದರು. ಚಿತ್ ಅಂಶವು ಪ್ರಾಣಾಯಾಮದಿಂದ ಮನಸ್ಸನ್ನು ಸ್ತಿಮಿತಗೊಳಿಸಿ ಶಾಂತಗೊಳಿಸುವ ಯೋಗಿಗಳಿಗೆ; ಇದರಿಂದ ಅವರು ಭಗವಂತನಿಂದ ಎಲ್ಲಾ ದಿಕ್ಕುಗಳಲ್ಲಾ ಪಸರಿಸುವ ಏಕೈಕ ಜ್ಯೋತಿಯನ್ನು ನೋಡುವರು. **ಆನಂದ** ಅಂಶವು ಭಗವಂತನ ಮೇಲಿನ ಪ್ರೇಮಾತಿಶಯದಿಂದ ಆನಂದಪರವಶರಾಗುವ ಭಕ್ತರಿಗೆ.



ಇದನ್ನು ಬಿಡಲಾರದೆ, ಅವರು ಸದಾ ಭಗವಂತನಲ್ಲಿ ಲೀನವಾಗಿರುತ್ತಾರೆ.

**ಜ್ಞಾನದ** ಪ್ರಕಾರ **ಪ್ರಾಣಾಯಾಮ** ಎಂದರೆ, –

**'ನ ಅಹಂ'** – ನಾನು ಇದಲ್ಲ = ನಿಶ್ವಾಸ

**'ಕೋಹಂ'** – ನಾನು ಯಾರು? = ಉಚ್ಛ್ವಾಸ

**'ಸೋಹಂ'** – ನಾನೇ ಅವನು = ಕುಂಭಕ (ಉಸಿರನ್ನು ಹಿಡಿದಿಡುವುದು).

ಇದು **ವಿಚಾರ**. ಈ **ವಿಚಾರ**ದಿಂದ ವಾಂಛಿತ ಫಲಪ್ರಾಪ್ತಿಯಾಗುವುದು.

**ಸಹಸ್ರಾರ** ಅಥವಾ ಮಿದುಳು ಆತ್ಮದ ನೆಲೆಯೆಂದು ಶಾಸ್ತ್ರಗಳು ಹೇಳುತ್ತವೆ. **ಪುರುಷ**ಸೂಕ್ತವು ಹೃದಯವೇ ಅದರ ನೆಲೆಯೆಂದು ಹೇಳುತ್ತದೆ. ಸಾಧಕನಿಗೆ ಸಂದೇಹವೇನಾದರೂ ಇದ್ದರೆ, ಅದನ್ನು ದೂರೀಕರಿಸಲು, ನಾನು ಅವನಿಗೆ 'ನಾನತ್ವ'ದ ಸೂತ್ರವನ್ನು ಅಥವಾ ಸುಳಿವನ್ನು ಹಿಡಿದು ಅದರ ಮೂಲಕ್ಕೆ ಹೋಗಬೇಕೆಂದು ಹೇಳುತ್ತೇನೆ. ಏಕೆಂದರೆ, ಮೊದಲನೆಯದಾಗಿ, ಯಾರೇ ಆದರೂ 'ನಾನು' ಎಂಬ ಭಾವನೆಯ ಬಗ್ಗೆ ಸಂಶಯಪಡಲು ಸಾಧ್ಯವಿಲ್ಲ. ಎರಡನೆಯದಾಗಿ, ಯಾವುದೇ ಸಾಧನವನ್ನು ಅನುಸರಿಸಿದರೂ, 'ನಾನಾಗಿದ್ದೇನೆ' (I-am-ness) ಎಂಬುದರ ಆಕರವನ್ನು ಸಾಕ್ಷಾತ್ಕರಿಸಿಕೊಳ್ಳುವುದು. ಇದೇ ನೀವು ನಿಮ್ಮ ಅನುಭವದಿಂದ ಆರಂಭಿಸುವುದು. ಆದ್ದರಿಂದ, ನೀವು ಆತ್ಮಶೋಧನೆಯನ್ನು ಅನುಸರಿಸಿದರೆ, ನೀವು ಆತ್ಮವೇ ಆಗಿರುವ ಹೃದಯವನ್ನು ತಲುಪುವಿರಿ.

**ಆತ್ಮವಿದ್ಯೆ** ಹೇಗೆ ಅತ್ಯಂತ ಸುಲಭವಾದದ್ದು? ಬೇರೆ ಯಾವುದೇ ವಿದ್ಯೆಗೆ ಜ್ಞಾತೃವೂ, ಜ್ಞಾನವೂ, ಜ್ಞೇಯವೂ ಬೇಕು; ಆತ್ಮವಿದ್ಯೆಗಾದರೋ ಇವು ಯಾವುವೂ ಬೇಕಿಲ್ಲ. ಅದು ಆತ್ಮ. ಅದರಷ್ಟು ವಿಸ್ಪಷ್ಟವಾದುದು ಬೇರೆ ಯಾವುದಾದರೂ ಇರಲು ಸಾಧ್ಯವೇ? ಆದ್ದರಿಂದಲೇ ಅದು ಸುಲಭಗಮ್ಯ. ನೀವು ಮಾಡಬೇಕಾದುದಿಷ್ಟೆ. "ನಾನು ಯಾರು" ಎಂದು ಶೋಧನೆ ಮಾಡಬೇಕು. ಒಬ್ಬನ ನಿಜವಾದ ಹೆಸರು **ಮುಕ್ತಿ**.

ಅಹಂಕಾರ ನಿಮ್ಮ ನಿಜಸ್ವರೂಪವಲ್ಲವೆಂದು ನಿಮಗೆ ಹೇಳಿಯಾಗಿದೆ. ನೀವು ಇದನ್ನು ಒಪ್ಪಿದರೆ, ಆಗ ನೀವೇ ನೈಜ ಆತ್ಮವನ್ನು ಅನ್ವೇಷಿಸಬೇಕು; ಅದರ ಮಿಥ್ಯಾರೂಪವೇ 'ಅಹಂಕಾರ', ಹಾಗಾದರೆ ನೀವೇಕೆ 'ನಾನು ಅದಾಗಿದ್ದೇನೆ' ಎಂದು ಧ್ಯಾನ ಮಾಡುವಿರಿ? ಅದು ಅಹಮ್ಮಿಗೆ ಹೊಸ ಚೈತನ್ಯ ನೀಡುತ್ತದೆ. ಅದು ಒಬ್ಬ ವ್ಯಕ್ತಿ ಔಷಧಿಯನ್ನು ತೆಗೆದುಕೊಳ್ಳುವಾಗ ಕೋತಿಯನ್ನು ನೆನೆಯುವುದನ್ನು ತಡೆಯುವಂತೆ. ಹೀಗೆ ಮಾಡಲೆತ್ನಿಸುವುದರಿಂದಲೇ ಅವನು ಆ ಆಲೋಚನೆಗೆ ಅವಕಾಶಕೊಟ್ಟಂತಾಗುತ್ತದೆ. ಅಹಮ್ಮಿನ ಸತ್ಯದ ಆಕರವನ್ನು ಅನ್ವೇಷಿಸಬೇಕು. 'ನಾನು ಅದು ಆಗಿದ್ದೇನೆ' ಎಂದು ಧ್ಯಾನಿಸುವುದರಿಂದ ಪ್ರಯೋಜನವಿಲ್ಲ; ಏಕೆಂದರೆ, ಧ್ಯಾನ ಮಾಡುವುದು ಮನಸ್ಸು; ಆತ್ಮವು ಮನಸ್ಸಿಗೆ ಅತೀತವಾದುದು. ತನ್ನ

ಸತ್ಯಾನ್ವೇಷಣೆಯಲ್ಲಿ ಅಹಂ ತಂತಾನೆ ನಾಶವಾಗುತ್ತದೆ. ಆದ್ದರಿಂದ, ಇದು ನೇರವಾದ ವಿಧಾನ. ಉಳಿದೆಲ್ಲ ವಿಧಾನಗಳಲ್ಲಿ ಅಹಂಕಾರ ಉಳಿದುಬಿಡುತ್ತದೆ; ತತ್ಪರಿಣಾಮವಾಗಿ ಅನೇಕ ಸಂಶಯಗಳು ಹುಟ್ಟಿ, ಶಾಶ್ವತವಾದ ಪ್ರಶ್ನೆಯನ್ನು ಎದುರಿಸಬೇಕಾಗುತ್ತದೆ. ಆ ಪ್ರಶ್ನೆಯನ್ನು ಎದುರಿಸದೆ ಅಹಂಕಾರ ಹೋಗುವುದಿಲ್ಲ. ಆದ್ದರಿಂದ ಆ ಇತರ ವಿಧಾನಗಳಿಗೆ ಶರಣಾಗದೆ, ಕೂಡಲೇ ಆ ಪ್ರಶ್ನೆಯನ್ನೆದುರಿಸಬಾರದು?

ಧ್ಯಾನವೆನ್ನುವುದು ಒಂದು ಕಲ್ಪನೆಯ ಮಾನಸಿಕ ಪುರಶ್ಚರಣೆಯಲ್ಲವೆ? ಅದು ಮಾನಸ **ಜಪ**. ಪದಗಳಿಂದ ಆರಂಭವಾಗಿ ಆತ್ಮದ ಮೌನದಲ್ಲಿ ಸಮಾಪ್ತಿಯಾಗುತ್ತದೆ. ಧ್ಯಾನ ಮತ್ತು ಮನೋನಿಗ್ರಹ ಪರಸ್ಪರಾವಲಂಬಿಗಳು. ವಾಸ್ತವವಾಗಿ ಧ್ಯಾನದಲ್ಲಿ ಮನೋನಿಗ್ರಹ ಹಾಗೂ ಆಲೋಚನೆಗಳು ಪ್ರವೇಶಿಸುವುದರ ಸೂಕ್ಷ್ಮ ನಿಗಾ ಇದೆ. ಆರಂಭದಲ್ಲಿ ವಾಸ್ತವವಾದ ಧ್ಯಾನಕ್ಕಿಂತ ನಿಗ್ರಹದ ಪ್ರಯತ್ನಗಳು ಹೆಚ್ಚು; ಆದರೆ ಕಾಲಕ್ರಮೇಣ ಧ್ಯಾನ ಸಫಲಗೊಂಡು ಸಲೀಸಾಗುತ್ತದೆ.

ಧ್ಯಾನಕ್ಕೆ ಧ್ಯಾನವಿಷಯವೊಂದು ಬೇಕು. ಆದರೆ **ವಿಚಾರ**ದಲ್ಲಿ ಜ್ಞೇಯವಿಲ್ಲದೆ ಜ್ಞಾತೃ ಮಾತ್ರ ಇದೆ. ಹೀಗೆ ಧ್ಯಾನಕ್ಕೂ ವಿಚಾರಕ್ಕೂ ವ್ಯತ್ಯಾಸವಿದೆ. **ವಿಚಾರ**ವು ಪ್ರಕ್ರಿಯೆಯೂ ಹೌದು, ಗುರಿಯೂ ಹೌದು. 'ನಾನಾಗಿದ್ದೇನೆ' (I am) ಎನ್ನುವುದು ಗುರಿ; ಅದು ಅಂತಿಮ ಸತ್ಯ. ಈ ಶುದ್ಧ ಸತ್ತ್ವಕ್ಕೆ ಪ್ರಯತ್ನಪೂರ್ವಕವಾಗಿ ಅಂಟಿಕೊಂಡಿರುವುದು **ವಿಚಾರ**. ಅದು ಸ್ವಪ್ರೇರಿತವೂ ಸಹಜವೂ ಆದಾಗ, ಅದು ಸಾಕ್ಷಾತ್ಕಾರ.

ಧ್ಯಾನವೆಂದರೇನು? ಅದು ಆಲೋಚನೆಗಳನ್ನು ಹೊರಕ್ಕೆ ಹಾಕುವುದು. ಈಗಿನ ತೊಂದರೆಗಳೆಲ್ಲವೂ ಆಲೋಚನೆಗಳಿಂದಲೇ ಆದವು ಮತ್ತು ಅವೇ ಆಲೋಚನೆಗಳು. ಆಲೋಚನೆಗಳನ್ನು ತೊರೆಯಿರಿ. ಅದೇ ಆನಂದ; ಮತ್ತು ಧ್ಯಾನ. ಆಲೋಚನೆಗಳು ಏಳುವುದು ಚಿಂತಕನಿಗೆ. ಚಿಂತಕನ ಆತ್ಮವಾಗಿ ಉಳಿದರೆ, ಆಲೋಚನೆಗಳು ಕೊನೆಗೊಳ್ಳುತ್ತವೆ.

ಈ ಜಗತ್ತನ್ನಾಗಲಿ ವಸ್ತುಗಳನ್ನಾಗಲಿ ತೊರೆದು ನೀವು ಎಲ್ಲಿಗೆ ಓಡಿಹೋಗಲು ಸಾಧ್ಯ? ಅವು ಮನುಷ್ಯನ ನೆರಳಿನಂತೆ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತನ್ನ ನೆರಳನ್ನು ಹೂತುಹಾಕಲು ಯತ್ನಿಸಿದ ಒಬ್ಬ ವ್ಯಕ್ತಿಯ ಕಥೆಯೊಂದಿದೆ. ಅವನು ಆಳವಾದ ಕುಳಿಯೊಂದನ್ನು ತೋಡಿದ; ಅದರ ತಳದಲ್ಲಿ ತನ್ನ ನೆರಳನ್ನು ನೋಡಿ, ಆಳದಲ್ಲಿ ಅದನ್ನು ಹೂತುಹಾಕಿಬಿಡಬಹುದುದೆಂದು ಸಂತಸಪಟ್ಟ. ಆಮೇಲೆ ಹಳ್ಳವನ್ನು ಮುಚ್ಚಿಹಾಕುವುದರೊಳಗೆ ಅದರ ಮೇಲೆ ತನ್ನ ನೆರಳು ಇರುವುದನ್ನು ನೋಡಿ ಸೋಜಿಗಪಟ್ಟು ನಿರಾಶನಾದ. ಅದೇ ರೀತಿ, ವಸ್ತುಗಳಾಗಲಿ ಆಲೋಚನೆಗಳಾಗಲಿ ನೀವು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವವರೆಗೆ ನಿಮ್ಮೊಂದಿಗೆ ಸದಾ ಇರುತ್ತವೆ.



ಪ್ರಜ್ಞೆಯೇ ಶುದ್ಧ ಜ್ಞಾನ. ಅದರಿಂದ ಮನಸ್ಸು ಉದ್ಭವಿಸಿದೆ; ಅದರ ತುಂಬ ಆಲೋಚನೆಗಳೇ. ಮನಸ್ಸಿನ ಜೀವಾಳವೆಂದರೆ ಜಾಗೃತಿ ಅಥವಾ ಪ್ರಜ್ಞೆ. ಆದರೆ ಅಹಂಕಾರ ಅದನ್ನು ಮರೆಮಾಚಿದರೆ, ಆಗ ಅದು ತರ್ಕ, ಆಲೋಚನೆ ಅಥವಾ ಗ್ರಹಿಕೆಯಾಗಿ ಕೆಲಸ ಮಾಡುತ್ತದೆ. ಅಹಂಕಾರದಿಂದ ಸೀಮಿತಗೊಳಿಸಿದ ಸರ್ವವ್ಯಾಪಿ ಮನಸ್ಸಿಗೆ ಬಾಹ್ಯವಾದುದು ಯಾವುದೂ ಇಲ್ಲ. ಆದ ಕಾರಣ ಜಾಗ್ರತವಾಗಿದೆ. ಬೈಬಲ್ಲಿನ 'ನಾನು ಆ ನಾನಾಗಿದ್ದೇನೆ' ಎಂಬುದು ಇದೆಯೇ. ಅಹಂಕಾರಪೀಡಿತ ಮನಸ್ಸಿನ ಶಕ್ತಿ ದುರ್ಬಲಗೊಳಿಸಲ್ಪಟ್ಟು, ಆಲೋಚನೆಯನ್ನು – ದುಃಖದ ಅಥವಾ ಸಂತೋಷದ ಆಲೋಚನೆಯನ್ನು ತಡೆದುಕೊಳ್ಳದಷ್ಟು ದುರ್ಬಲವಾಗಿದೆ.

ಮನಸ್ಸು ಎನ್ನುವುದು ಅರಿವು ಅಥವಾ ಪ್ರಜ್ಞೆಯನ್ನು ಅಲಕ್ಷಿಸುವ ಆಲೊಚನಾಲಹರಿ. ಈ ಆಲೋಚನೆಗಳಲ್ಲೆಲ್ಲಾ ಮೊದಲನೆಯದೆಂದರೆ 'ನಾನು ಈ ದೇಹ'ವೆಂಬುದು. ಇದು ಮಿಥ್ಯಾಲೋಚನೆ; ಆದರೆ ಅದನ್ನು ನಿಜವೆಂದು ಸ್ವೀಕರಿಸುವುದರಿಂದ ಬೇರೆ ಆಲೋಚನೆಗಳು ಏಳುವ ಸಂಭವ ಇದೆ. ಆದ್ದರಿಂದ ಮನಸ್ಸೆನ್ನುವುದು ಮೂಲಭೂತ ಅಜ್ಞಾನದ ಸಹಜ ಫಲ; ಆದ್ದರಿಂದಲೇ ಮಿಥ್ಯೆ.

ಆಲೋಚನಾರಾಹಿತ್ಯವೆಂದರೆ ಶೂನ್ಯವಲ್ಲ. ಜ್ಞಾನ ಮತ್ತು ಅಜ್ಞಾನಗಳು ಮನಸ್ಸಿಗೆ ಸಂಬಂಧಿಸಿದವು, ಮತ್ತು ಇಬ್ಬಂದಿಯಾದವು; ಆದರೆ ಆತ್ಮ ಅವೆರಡಕ್ಕೂ ಅತೀತವಾದುದು. ಒಮದು ಆತ್ಮ ಇನ್ನೊಂದನ್ನು ನೋಡುವ ಅವಶ್ಯಕತೆಯಿಲ್ಲ. ಎರಡು ಆತ್ಮಗಳಿಲ್ಲ. ಅನಾತ್ಮವಾದದ್ದು ಆತ್ಮವನ್ನು ನೋಡಲಾರದ ಆತ್ಮ, ಅಷ್ಟೆ. ಆತ್ಮಕ್ಕೆ ದೃಷ್ಟಿಶಕ್ತಿಯಾಗಲಿ, ಶ್ರವಣಶಕ್ತಿಯಾಗಲಿ ಇಲ್ಲ. ಅದು ಅವುಗಳಿಗೆ ಅತೀತ; ಅದು ಏಕಾಕಿಯಾಗಿ, ಶುದ್ಧ ಚೇತನವಾಗಿ, ಶುದ್ಧ ಜ್ಯೋತಿಯಾಗಿ ಇದೆ.

“ಚಿತ್ತೈಕಾಗ್ರತೆಯನ್ನು (pointedness) ಸಾಧಿಸುವ ಅತ್ಯಂತ ಸುಲಭವಾದ ಮಾರ್ಗ ಯಾವುದು? ಅತ್ಯುತ್ತಮ ವಿಧಾನವೆಂದರೆ ಮನಸ್ಸಿನ ಆಕರವನ್ನು ನೋಡುವುದು. ಮನಸ್ಸೆಂಬುದು ಇದೆಯೆ ಎಂಬುದನ್ನು ನೋಡಿ. ಏಕಾಗ್ರತೆಯನ್ನು ಸಾಧಿಸಬಹುದೆ ಎಂಬ ಪ್ರಶ್ನೆ ಮನಸ್ಸಿನಲ್ಲಿ ಎದ್ದರೆ ಮಾತ್ರ ಸಾಧ್ಯ. ನೀವು ಅಂತರ್ಮುಖಿಯಾಗಿ ಶೋಧಿಸಿದರೆ, ಅಂಥದೊಂದು ಇಲ್ಲವೆನ್ನುವುದು ತಿಳಿಯುತ್ತದೆ.

ಒಳ್ಳೆಯ ಮತ್ತು ಕೆಟ್ಟ ಮನಸ್ಸು ಎಂಬ ಎರಡು ಮನಸ್ಸುಗಳಿಲ್ಲ. ಮನಸ್ಸಿನ **ವಾಸನ**ಗಳು ಅಥವಾ ಪ್ರವೃತ್ತಿಗಳು ಎರಡು ವಿಧ: ಒಳ್ಳೆಯದು ಮತ್ತು ಅನುಕೂಲಕರ, ಕೆಟ್ಟದು ಮತ್ತು ಅನನುಕೂಲಕರವಾದುದು. ಮನಸ್ಸು ಮೊದಲನೆಯದರ ಜೊತೆ ಇದ್ದರೆ ಅದನ್ನು ಒಳ್ಳೆಯದು ಎನ್ನುತ್ತಾರೆ; ಮತ್ತು ಎರಡನೆಯದರ ಜೊತೆ ಇದ್ದರೆ, ಅದನ್ನು ಕೆಟ್ಟದು ಎನ್ನುತ್ತಾರೆ. ಜನರು ಎಷ್ಟೇ ದುಷ್ಟರಾಗಿ ನಿಮಗೆ ಕಂಡರೂ ಅವರನ್ನು ದ್ವೇಷಿಸುವುದು ಅಥವಾ ತುಚ್ಛವಾಗಿ ಕಾಣುವುದು ಸರಿಯಲ್ಲ. ಇಷ್ಟ ಅನಿಷ್ಟಗಳು, ಪ್ರೀತಿ ದ್ವೇಷಗಳು ಎರಡನ್ನೂ ಸಮಾನವಾಗಿ ತ್ಯಜಿಸಬೇಕು. ಮನಸ್ಸನ್ನು

ಐಹಿಕ ಬದುಕಿನ ವಸ್ತುಗಳಲ್ಲಿ ಅಥವಾ ವಿಷಯಗಳಲ್ಲಿ ಮುಳುಗಿರಲು ಬಿಡುವುದೂ ಸೂಕ್ತವಲ್ಲ. ಆದಷ್ಟೂ ಇತರರ ವಿಷಯಗಳಲ್ಲಿ ತಲೆಹಾಕಬಾರದು.

ಮನಸ್ಸಿನ **ಸರೂಪ** ಮತ್ತು **ಅರೂಪ** ಎಂದರೆ ಏನು? ನೀವು ನಿದ್ದೆಯಿಂದ ಎದ್ದಾಗ ಬೆಳಕು ಕಾಣಿಸುತ್ತದೆ; ಅದು ಮಹತ್ತತ್ತ್ವದ ಮೂಲಕ ಹಾದುಹೋಗುವ ಆತ್ಮದ ಪ್ರಕಾಶ. ಅದನ್ನು ವಿಶ್ವಪ್ರಜ್ಞೆಯೆನ್ನುತ್ತಾರೆ. ಅದು **ಅರೂಪ**. ಬೆಳಕು ಅಹಮ್ಮಿನ ಮೇಲೆ ಬಿದ್ದು, ಅಲ್ಲಿಂದ ಪ್ರತಿಫಲಿತವಾಗುತ್ತದೆ. ಆಗ ದೇಹ ಮತ್ತು ಜಗತ್ತು ಕಾಣಿಸುತ್ತವೆ. ಈ ಮನಸ್ಸು **ಸರೂಪ**. ಪ್ರತಿಫಲಿತ ಪ್ರಜ್ಞೆಯ ಬೆಳಕಿನಲ್ಲಿ ವಸ್ತುಗಳು ಕಾಣುತ್ತವೆ. ಈ ಬೆಳಕನ್ನು **ಜ್ಯೋತಿ** ಎಂದು ಕರೆಯುತ್ತಾರೆ.

ಮನಸ್ಸು, ಅಹಂಕಾರ, ಬುದ್ಧಿ ಇವೆಲ್ಲ ಒಂದು ಅಂತರಿಂದ್ರಿಯದ (**ಅಂತಃಕರಣದ**) ಬೇರೆ ಬೇರೆ ಹೆಸರುಗಳು. ಮನಸ್ಸು ಎನ್ನುವುದು ಆಲೋಚನೆಗಳ ಮೊತ್ತಮಾತ್ರ. 'ಅಹಂ' ಇಲ್ಲದಿದ್ದರೆ ಆಲೋಚನೆಗಳು ಇರಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲಾ ಆಲೋಚನೆಗಳೂ ಅಹಂಕಾರದಿಂದ ಆವರಿಸಿವೆ. 'ನಾನು' ಎನ್ನುವುದು ಎಲ್ಲಿಂದ ಏಳುತ್ತದೆ ಎನ್ನುವುದನ್ನು ಹುಡುಕಿ, ಆಗ ಇತರ ಆಲೋಚನೆಗಳು ಮಾಯವಾಗುತ್ತವೆ, ಮನಸ್ಸು ಎನ್ನುವುದು ಇತಿಮಿತಿಗಳನ್ನು ಹೊಂದಿರುವ ಪ್ರಜ್ಞೆ, ಮೂಲಭೂತವಾಗಿ ನೀವು ಅನಂತರು ಮತ್ತು ಪರಿಪೂರ್ಣರು. ಆಮೇಲೆ ನೀವು ಇತಿಮಿತಿಗಳನ್ನು ಪಡೆದು ಮನಸ್ಸಾಗುವಿರಿ.

ಮನಸ್ಸನ್ನು ಕೊಲ್ಲಬೇಕೆಂದು ಮನಸ್ಸನ್ನು ಕೇಳುವುದು ಕಳ್ಳನನ್ನೇ ಪೊಲೀಸನನ್ನಾಗಿ ಮಾಡುವಂತೆ. ಅವನು ನಿಮ್ಮ ಜತೆ ಇದ್ದು ಕಳ್ಳನನ್ನು ಹಿಡಿಯುವ ನಟನೆ ಮಾಡುವನು; ಅದರಿಂದ ಏನೂ ಆಗದು. ಆದ್ದರಿಂದ ನೀವು ಅಂತರ್ಮುಖಿಯಾಗಿ, ಮನಸ್ಸು ಎಲ್ಲಿಂದ ಏಳುತ್ತದೆಂಬುದನ್ನು ನೋಡಿ, ಅನಂತರ ಅದು ಇರುವುದಿಲ್ಲ. ನಾವು ಮನಸ್ಸನ್ನು ಬಳಸಬೇಕು ಎಂಬುದು ನಿಸ್ಸಂಶಯ. ಮನಸ್ಸಿನ ನೆರವಿನಿಂದಲೇ ಮನಸ್ಸನ್ನು ನಾಶಮಾಡುವುದು ಸಾಧ್ಯ.

ಜ್ಞಾನಿಯ ವಿಷಯದಲ್ಲಿ ಅಹಂಕಾರ ತಲೆಯೆತ್ತುವುದು ಇಲ್ಲವೆ ಅಸ್ತಿತ್ವದಲ್ಲಿರುವುದು ಮೇಲ್ನೋಟಕ್ಕೆ ಮಾತ್ರ. ಜ್ಞಾನಿಯು ತನ್ನ ಗಮನವನ್ನು ಸದಾ ಆಕರದಲ್ಲಿ ಕೇಂದ್ರೀಕರಿಸಿ, ಅಹಂಕಾರ ತಲೆಯೆತ್ತಿದರೂ ಅಥವಾ ಅಸ್ತಿತ್ವದಲ್ಲಿದ್ದರೂ ತನ್ನ ಅಖಂಡ ಲೋಕಾತೀತ ಅನುಭವವನ್ನು ಆನಂದಿಸುವನು. ಈ ಅಹಂಕಾರ ನಿರಪಾಯಕಾರಿ. ಅದು ಸುಟ್ಟ ಹಗ್ಗದ ಅವಶೇಷದಂತೆ – ಅದಕ್ಕೆ ಹಗ್ಗದ ರೂಪವಿದ್ದರೂ ಅದರಿಂದ ಯಾವುದನ್ನೂ ಕಟ್ಟಲಾಗುವುದಿಲ್ಲ.

ಒಮ್ಮೆ ನನ್ನನ್ನು ಆದಿಪಾತಕ (original sin) ತತ್ತ್ವದ – ಪ್ರತಿಯೊಬ್ಬನೂ ಪಾತಕದಲ್ಲಿ ಹುಟ್ಟಿದ್ದಾನೆ; ಮತ್ತು ಏಸುಕ್ರಿಸ್ತನನ್ನು ನಂಬಿದರೆ ಮಾತ್ರ ಅದರಿಂದ ಮುಕ್ತಿ ಎಂಬ ತತ್ತ್ವದ – ಬಗ್ಗೆ ಕೇಳಲಾಯಿತು. ನಾನು ಹೇಳಿದೆ: "ಆ ಪಾಪ ಮಾನವನಲ್ಲಿದೆ; ಆದರೆ ನಿದ್ದೆಯಲ್ಲಿ ಪೌರುಷವಿಲ್ಲ; ಎದ್ದಮೇಲೆ ಬರುತ್ತದೆ, 'ನಾನು ಈ ದೇಹ' ಎಂಬ ಆಲೋಚನೆಯೊಂದಿಗೆ. ಈ ಆಲೋಚನೆಯೇ ನಿಜವಾದ ಆದಿಪಾತಕ; ಅದನ್ನು ಅಹಂಕಾರದ ನಾಶದಿಂದ ತೊಲಗಿಸಬೇಕು; ಇದಾದನಂತರ ಈ ಆಲೋಚನೆಗೆ ತಲೆಯೆತ್ತುವುದಿಲ್ಲ."



ಅಹಂಕಾರರಹಿತ ಸ್ಥಿತಿಯಲ್ಲಿ ಆತ್ಮಜ್ಞಾನವಿದೆಯೆ? ಅಹಂರಹಿತ ಸ್ಥಿತಿಯ ಸತ್ಯತೆ ನಿರಾಕರಣೆಯಿಂದ (ನೇತಿ ನೇತಿ ಎಂಬ ಭಾವನೆಯಿಂದ) ಬರಬೇಕು. ಆತ್ಮಜ್ಞಾನವೆಂಬ ಸ್ಥಿತಿ ಜ್ಞಾನವಾಗಲಿ ಅಜ್ಞಾನವಾಗಲಿ ಇಲ್ಲದ ಸ್ಥಿತಿ; ಏಕೆಂದರೆ ಸಾಮಾನ್ಯವಾಗಿ ಯಾವುದನ್ನು ಜ್ಞಾನವೆಂದು ಭಾವಿಸುವರೋ ಅದು ನಿಜವಾದ ಜ್ಞಾನವಲ್ಲ. ಆತ್ಮವೇ ಸ್ವತಃ ನಿಜವಾದ ಜ್ಞಾನ; ಏಕೆಂದರೆ ಅದೊಂದೇ ದೇದೀಪ್ಯಮಾನವಾಗಿದೆ; ಬೇರೊಂದೂ ಅದರ ಜ್ಞಾನದ ವಿಷಯವಾಗಲಿ ಜ್ಞಾತೃವಾಗಲಿ ಆಗದು. ಆತ್ಮವು ಶೂನ್ಯವಲ್ಲವೆಂದು ತಿಳಿಯಿರಿ.

ಆತ್ಮಸಾಕ್ಷಾತ್ಕಾರದ ಪರಿಣಾಮ ಎಷ್ಟು ಪರಿಣಾಮಕಾರಿ ಎಂದರೆ, ದುರ್ಬಲವಾದ ಭೌತದೇಹವು ಹೆಚ್ಚೆಂದರೆ ಅದನ್ನು ಇಪ್ಪತ್ತೊಂದು ದಿವಸಗಳಿಗಿಂತ ಹೆಚ್ಚು ಕಾಲ ತಡೆಯಲಾಗದು ಎಂಬ ಅಭಿಪ್ರಾಯಕ್ಕೆ ಭಗವಾನ್ ಉತ್ತರಿಸಿದರು: 'ಜ್ಞಾನಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅವನು ದೇಹವೆ ಅಥವಾ ಬೇರೇನಾದರೂ ಆಗಿದ್ದಾನೆಯೆ? ಅವನು ದೇಹಕ್ಕಿಂತ ಬೇರೆ ಏನಾದರೂ ಆಗಿದ್ದರೆ, ಅವನು ದೇಹದಿಂದ ಹೇಗೆ ಬಾಧಿತನಾಗಬಲ್ಲ? ಶಾಸ್ತ್ರಗ್ರಂಥಗಳು ನಾನಾ ಬಗೆಯ ಮೋಕ್ಷದ ಬಗೆಗೆ ಹೇಳುವುವು. ಮೋಕ್ಷಮಾರ್ಗದಲ್ಲಿ ನಾನಾ ಹಂತಗಳಿರಬಹುದು; ಆದರೆ ಮೋಕ್ಷದಲ್ಲಿ ದರ್ಜೆಗಳಿಲ್ಲ.

ದೇಹವು ಅಚೇತನ; ಆದ್ದರಿಂದ ಅದನ್ನು 'ನಾನು' ಎಂದು ಹೇಳಲಾಗದು. ಆತ್ಮವು ಶುದ್ಧ ಚೇತನ ಮತ್ತು ಅದ್ವೈತ. ಅದು 'ನಾನು' ಎಂದು ಹೇಳಲಾರದು. ನಿದ್ದೆಯಲ್ಲಿ ಯಾರೂ 'ನಾನು' ಎಂದು ಹೇಳುವುದಿಲ್ಲ. ಹಾಗಾದರೆ 'ಅಹಂ' ಎಂದರೆ ಏನು? ಅದು ಜಡ ದೇಹ ಮತ್ತು ಆತ್ಮ – ಇವುಗಳ ನಡುವಣದ್ದು. ಅದಕ್ಕೆ ಅಂಗೀಕೃತ ಸ್ಥಾನವಿಲ್ಲ. ಅದನ್ನು ಅರಸಿದರೆ ಅದು ಪ್ರೇತದಂತೆ ಮಾಯವಾಗುತ್ತದೆ. ಕತ್ತಲಲ್ಲಿ ಒಬ್ಬ ತನ್ನ ಪಕ್ಕದಲ್ಲಿ ಏನೋ ಇದೆ ಎಂದು ಭಾವಿಸುತ್ತಾನೆ ಎಂದು ನಿಮಗೆ ಗೊತ್ತು. ಅದು ಒಂದು ಕರಿವಸ್ತುವಾಗಬಹುದು. ಅವನು ಸನಿಯದಲ್ಲಿ ನೋಡಿದಾಗ ಪ್ರೇತ ಕಣ್ಣಿಗೆ ಕಾಣದು; ಆದರೆ ಯಾವುದೋ ಕರಿ ವಸ್ತು; ಅದನ್ನು ಮರವೋ ಕಂಬವೋ ಇನ್ನಾವುದೋ ಎಂದು ಅವನು ಗುರುತಿಸಬಹುದು. ಅವನು ಸನಿಯದಿಂದ ನೋಡದೆ ಇದ್ದರೆ, ಪ್ರೇತವು ಅವನಲ್ಲಿ ದಿಗಿಲು ಹುಟ್ಟಿಸುತ್ತದೆ. ಅವನು ಮಾಡಬೇಕಾದುದಿಷ್ಟೆ: ಅವನು ಹತ್ತಿರದಿಂದ ನೋಡಬೇಕು, ಆಗ ಪ್ರೇತ ಮಂಗಮಾಯವಾಗುತ್ತದೆ. ಪ್ರೇತವು ದೇಹ ಮತ್ತು ಶುದ್ಧ ಚೈತನ್ಯದ ನಡುವಣ

ಕೊಂಡಿ. ಅದು ಸತ್ಯವಲ್ಲ. ಒಬ್ಬನು ಹತ್ತಿರದಿಂದ ನೋಡುವವರೆಗೆ ಅದು ತೊಂದರೆ ಕೊಡುತ್ತಲೇ ಇರುತ್ತದೆ. ಆದರೆ ಒಬ್ಬನು ಅದನ್ನು ನಿಜವಾಗಿ ಹುಡುಕಿದರೆ, ಅದು ಅಸ್ತಿತ್ವದಲ್ಲಿ ಇಲ್ಲದ್ದು ಎಂದು ಗೊತ್ತಾಗುತ್ತದೆ.

ಶರಣಾಗತಿಯ ಮಾತೆಲ್ಲವೂ, ಬೆಲ್ಲದಿಂದ ಮಾಡಿದ ಗಣೇಶನ ವಿಗ್ರಹದಿಂದ ಬೆಲ್ಲವನ್ನು ಕದ್ದು ಅದನ್ನೇ ಅದೇ ಗಣೇಶನಿಗೆ ನೈವೇದ್ಯವಾಗಿ ಅರ್ಪಿಸುವಂತಿದೆ. ನೀವು ನಿಮ್ಮ ದೇಹ, ಆತ್ಮ ಮತ್ತು ಸಕಲ ಸಂಪತ್ತನ್ನೂ ಅರ್ಪಿಸುವುದಾಗಿ ಹೇಳುವಿರಿ. ಹಾಗೆ ಅರ್ಪಿಸಲು ಅವೆಲ್ಲಾ ನಿಮ್ಮವೇ? ಹೆಚ್ಚು ಎಂದರೆ ನೀವು ಹೀಗೆ ಹೇಳಬಹುದು: 'ನಾನು ನಿನಗೆ (ದೇವರಿಗೆ) ಸೇರಿದ ಇವುಗಳೆಲ್ಲವನ್ನೂ ಇಲ್ಲಿಯವರೆಗೆ ನನ್ನದು ಎಂದು ತಪ್ಪಾಗಿ ಭಾವಿಸಿದ್ದೆ. ಈಗ ಅವೆಲ್ಲಾ ನಿನ್ನವು ಎಂದು ನನಗೆ ಅರಿವಾಗಿದೆ. ಅವು ನನ್ನವೆಂಬಂತೆ ಇನ್ನು ಮುಂದೆ ಹಾಗೆ ವರ್ತಿಸುವುದಿಲ್ಲ.' ದೇವರು ಅಥವಾ ಆತ್ಮವನ್ನು ಬಿಟ್ಟರೆ ಬೇರೇನೂ ಇಲ್ಲ; ನಾನು, ನನ್ನದು ಎಂಬವು ಯಾವುವೂ ಇಲ್ಲ, ಆತ್ಮವೊಂದೇ ಇರುವುದು – ಎನ್ನುವುದೇ **ಜ್ಞಾನ**.

ಭಗವದ್ಗೀತೆ ಹೀಗೆ ಹೇಳುತ್ತದೆ: "ಬುದ್ಧಿವಂತನು ಇಂದ್ರಿಯಗಳು ವಿಷಯಸುಖಗಳನ್ನು ಬೆನ್ನಟ್ಟುತ್ತವೆಂದು ಭಾವಿಸಿ, ಇಂದ್ರಿಯಗಳ ಚಟುವಟಿಕೆಗಳ ಬಗ್ಗೆ ಅಂಟಿರುವುದಿಲ್ಲ.' ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಜ್ಞಾನಿಯಾದವನು ಅದನ್ನೂ ಚಿಂತಿಸುವುದಿಲ್ಲವೆಂದು ಹೇಳುತ್ತೇನೆ. ಅವನೇ ಆತ್ಮ ಮತ್ತು ತನ್ನನ್ನು ಒಟ್ಟು ಬೇರೇನನ್ನೂ ನೋಡುವುದಿಲ್ಲ. ಮೇಲಿನ ಶ್ಲೋಕದಲ್ಲಿ ಗೀತೆ ಹೇಳುವುದು **ಅಭ್ಯಾಸಿ**ಗೆ.

**ಜೀವನ್ಮುಕ್ತಿ**ಗೂ **ವಿದೇಹಮುಕ್ತಿ**ಗೂ ಯಾವ ಭೇದವೂ ಇಲ್ಲ. ಏನಾದರೂ ಭೇದವಿದೆಯೆ ಎಂದು ಕೇಳುವವರಿಗೆ ಹೀಗೆ ಹೇಳುತ್ತಾರೆ: 'ದೇಹವಿರುವ **ಜ್ಞಾನಿ**ಯು ಜೀವನ್ಮುಕ್ತಿಯನ್ನೂ, ಅವನು ದೇಹವನ್ನು ತೊರೆದಾಗ **ವಿದೇಹಮುಕ್ತಿ**ಯನ್ನೂ ಪಡೆಯುತ್ತಾನೆ.' ಆದರೆ ಈ ವ್ಯತ್ಯಾಸ ನೋಡುಗನಿಗೆ ಮಾತ್ರವೇ ಹೊರತು **ಜ್ಞಾನಿ**ಗಲ್ಲ. ಅವನ ಸ್ಥಿತಿ ದೇಹತ್ಯಾಗ ಮಾಡುವುದಕ್ಕೆ ಮುಂಚೆ ಮತ್ತು ಆಮೇಲೆ ಒಂದೇ. ಆದರೆ ಜ್ಞಾನಿಯು ತಾನು ಆತ್ಮವೆಂದು ಬಲ್ಲ, ಅದೊಂದೇ ಸತ್ಯ. ಅದು ಒಳಗೂ ಹೊರಗೂ ಇದೆ; ಅದಕ್ಕೆ ಆಕಾರವಾಗಲಿ ರೂಪವಾಗಲಿ ಇಲ್ಲ ಎಂದು ಬಲ್ಲ.

ಆತ್ಮಸಾಕ್ಷಾತ್ಕಾರದಲ್ಲಿ ಅಥವಾ **ಮುಕ್ತಿ**ಯಲ್ಲಿ ಹಂತಗಳಿಲ್ಲ. **ಜ್ಞಾನ**ದ ದರ್ಜೆಗಳೂ ಇಲ್ಲ. ಆದ್ದರಿಂದ ದೇಹವಿರುವಾಗ ಒಂದು ಹಂತದ ಜ್ಞಾನವೂ, ದೇಹಾವಸಾನವಾದಾಗ ಇನ್ನೊಂದು ಹಂತವೂ ಇರಲು ಸಾಧ್ಯವಿಲ್ಲ. ಆತ್ಮವನ್ನು ಬಿಟ್ಟು ಬೇರಾವುದೂ ಇಲ್ಲವೆಂದು ಜ್ಞಾನಿಯು ಬಲ್ಲನು. ಅಂಥವನಿಗೆ ದೇಹದ ಅಸ್ತಿತ್ವವಾಗಲಿ ದೇಹದರಾಹಿತ್ಯವಾಗಲಿ ಯಾವ ಭೇದವಿದೆ?



ಸ್ವಯಂಪ್ರೇರಿತವಾಗಿ ಎಲ್ಲಾ ಸದ್ಗುಣಗಳೂ ಕೂಡಿಕೊಂಡು ಜ್ಞಾನಿಯು ಅವುಗಳ ಸಾಕಾರಮೂರ್ತಿಯಾಗಿದ್ದಾನೆ. ಜ್ಞಾನಿಯು ಮೇಲ್ನೋಟಕ್ಕೆ ಕ್ರಿಯಾಶೀಲನಾಗಿದ್ದರೂ, ಅವನು ಯಾವುದೇ ಕ್ರಿಯೆಯಲ್ಲಿ ತೊಡಗಿರುವುದಿಲ್ಲ. ಮೇಲ್ನೋಟಕ್ಕೆ ನಿಷ್ಕ್ರಿಯವಾಗಿದ್ದರೂ, ಜ್ಞಾನಿಯು ವಾಸ್ತವವಾಗಿ ಕ್ರಿಯಾಶೀಲನಾಗಿರುತ್ತಾನೆ. ಮೂರು ಸ್ಥಿತಿಗಳನ್ನೂ ಮೀರಿರುವುದರಿಂದ ಜ್ಞಾನಿಯು ಶುದ್ಧ ಚೈತನ್ಯದಲ್ಲಿ ದೇಹಾತ್ಮಗಳ ಮನೋವೃತ್ತಿಗಳಿಂದ ಅಬಾಧಿತನಾಗಿ ನೆಲೆಯಾಗಿ ನಿಂತಿರುತ್ತಾನೆ. ಅವನಿಗೆ **ತುರೀಯಾತೀತ**ವೂ **ತುರೀಯ**ವೂ ಒಂದೇ; ಮತ್ತು ಇತರ ಮೂರು ಅವಸ್ಥೆಗಳು ಅವನಿಗೆ ಇಲ್ಲ. ಜ್ಞಾನಿಯಾದವನು ಕರ್ತನಲ್ಲವಾದ್ದರಿಂದ, ಅವನಿಗೆ ಪ್ರಾರಬ್ಧಕರ್ಮವನ್ನು ಆರೋಪಿಸುವುದು ಹಾಸ್ಯಾಸ್ಪದ.

ಯಾವುದಾದರೂ ವಸ್ತುವನ್ನು ನೋಡಬೇಕಾದರೆ ಒಬ್ಬ ನೋಡುಗ ಬೇಕು. ಮೊದಲು ನೋಡುಗನನ್ನು ಹುಡುಕಿ. ಪರಲೋಕದಲ್ಲೇನಿದೆ ಎಂದು ಏಕೆ ತಲೆ ಕೆಡಿಸಿಕೊಳ್ಳುವಿರಿ? ಲೋಕವನ್ನು ಗ್ರಹಿಸಿದರೆಷ್ಟು, ಬಿಟ್ಟರೆಷ್ಟು? ಗ್ರಹಿಕೆ ಇಲ್ಲದಿರುವ ನಿಮ್ಮ ನಿದ್ರಾವಸ್ಥೆಯಲ್ಲಿ ನೀವು ಏನನ್ನಾದರೂ ಕಳೆದುಕೊಂಡಿದ್ದೀರಾ? ಲೋಕ ಕಾಣುವುದು ಅಥವಾ ಕಾಣದಿರುವುದು ಅಪ್ರಸ್ತುತ. ಅಜ್ಞಾನಿಯಾದವನಿಗೆ ಜ್ಞಾನಿಯಾದವನು ಕ್ರಿಯಾಶೀಲನಾಗಿ ಕಂಡು ಗೊಂದಲಕ್ಕೀಡಾಗುತ್ತಾನೆ. ಇಬ್ಬರೂ ಲೋಕವನ್ನು ಗ್ರಹಿಸುತ್ತಾರೆ; ಆದರೆ ಅವರ ದೃಷ್ಟಿಕೋನ ಬೇರೆಬೇರೆ. ಸಿನಿಮಾದ ಉದಾಹರಣೆಯನ್ನು ತೆಗೆದುಕೊಳ್ಳಿ. ಇಲ್ಲಿ ಚಿತ್ರಗಳು ಚಲಿಸುತ್ತಿರುತ್ತವೆ. ಅವನ್ನು ಹಿಡಿಯಲು ಪ್ರಯತ್ನಿಸಿ. ಆಗ ನೀವು ಏನನ್ನು ಹಿಡಿಯುತ್ತೀರಿ? ಪರದೆಯನ್ನು ಮಾತ್ರ. ಚಿತ್ರ ಮಾಯವಾಗಲಿ; ಆಗ ಏನು ಉಳಿಯುತ್ತದೆ? ಮತ್ತೆ ಅದೇ ಪರದೆ. ಅಂತೆಯೇ ಇಲ್ಲೂ. ಲೋಕವು ಕಾಣುವಾಗಲೂ, ಯಾರಿಗೆ ಅದು ಕಾಣುತ್ತದೆ ಎಂಬುದನ್ನು ನೋಡಿ. ಆಧಾರವನ್ನು ಹಿಡಿಯಿರಿ. ಆಧಾರವಾದುದನ್ನು ಹಿಡಿದಾಗ, ಲೋಕವು ಕಂಡರೆ ಏನು, ಕಾಣದಿದ್ದರೆ ಏನು? ಅಜ್ಞಾನಿಯಾದವನು ಜಗತ್ತು ಸತ್ಯವೆಂದು ಭಾವಿಸುವನು; ಜ್ಞಾನಿಯಾದರೋ ಅದು ಕೇವಲ ಆತ್ಮದ ಅಭಿವ್ಯಕ್ತಿ ಎಂದು ಭಾವಿಸುವನು. ಆತ್ಮ ಪ್ರಕಟವಾಗುವುದೋ ಇಲ್ಲವೋ ಎನ್ನುವುದು ಅಮುಖ್ಯ.

ಬೇರೆಯವರಲ್ಲಿ ತಪ್ಪು ಕಂಡುಹಿಡಿಯುವುದು ನಮ್ಮ ತಪ್ಪನ್ನು ಅಭಿವ್ಯಕ್ತಿಗೊಳಿಸಿದಂತೆ. ಸರಿ ಮತ್ತು ತಪ್ಪುಗಳ ಭೇದಗ್ರಹಣವೇ ಪಾಪದ ಮೂಲ. ತನ್ನ ಪಾಪವೇ ಹೊರಗೆ ಕಾಣುತ್ತದೆ; ಅಜ್ಞಾನಿಯಾದವನು ಅದನ್ನು ಬೇರೆಯವರ ಮೇಲೆ ಆರೋಪಿಸುತ್ತಾನೆ. ಅತ್ಯುತ್ತಮ ಮಾರ್ಗವೆಂದರೆ ಅಂಥ ಭೇದವೇ ಏಳದಂಥ ಸ್ಥಿತಿಯನ್ನು ತಲಪುವುದು. ನೀವು ನಿಮ್ಮ ನಿದ್ರಾವಸ್ಥೆಯಲ್ಲಿ ಸರಿ ತಪ್ಪುಗಳನ್ನು ಅರಿಯುವಿರಾ? ಜಾಗ್ರದವಸ್ಥಿತಿಯಲ್ಲೂ ನಿದ್ರಾವಸ್ಥೆಯಲ್ಲಿರುವಂತೆ ಜಡವಾಗಿರಿ. ಆತ್ಮದಂತೆ ನೆಲೆಯಾಗಿರಿ, ಮತ್ತು ಸುತ್ತಮುತ್ತಲ ಆಗುಹೋಗುಗಳಿಂದ

ಕಲುಷಿತವಾಗದಿರಿ. ನಿಮ್ಮ ಮೌನವು ನಿಮ್ಮ ಮಾತುಗಳು ಹಾಗೂ ಕೃತಿಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುವುದು. ಮನೋಬಲ ಅಥವಾ ಸಂಕಲ್ಪಶಕ್ತಿಯನ್ನು ಬೆಳೆಸಿಕೊಳ್ಳುವ ವಿಧಾನವಿದು. ಆಗ ಈ ಜಗತ್ತು ಸ್ವರ್ಗಲೋಕವಾಗುತ್ತದೆ; ಅದು ನಿಮ್ಮೊಳಗೇ ಇದೆ.

ಎಲ್ಲ ಕಡೆ ಏಕಾಂತತೆ. ವ್ಯಕ್ತಿಯು ಯಾವಾಗಲೂ ಏಕಾಕಿ. ಅವನ ಕೆಲಸ ಒಳಗಿನದನ್ನು ಕಾಣುವುದೇ ಹೊರತು ಹೊರಗಿನದನ್ನಲ್ಲ. ನಿಮ್ಮ ಚಿತ್ತವಿಕ್ಷೇಪಕ್ಕೆ ಅವಕಾಶ ಕೊಡಬೇಡಿ. ಯಾರಿಗೆ ಚಿತ್ತವಿಕ್ಷೇಪವಾಗುತ್ತದೆಂಬುದನ್ನು ಶೋಧಿಸಿ. ಒಳಗೆ ಶೋಧನೆ ಮಾಡುವುದರಿಂದ ಉತ್ತರ ಬರುವುದಿಲ್ಲವೆಂದು ನೀವು ಹೇಳುವಿರಿ. ಅನ್ವೇಷಕನೇ ಉತ್ತರ; ಇದಲ್ಲದೆ ಬೇರಾವುದೇ ಉತ್ತರ ಬರಲಾರದು. ಬರುವುದು ಸತ್ಯವಾಗಲಾರದು, ಇರುವುದು ಸತ್ಯ.

ಈ ಜಗತ್ತು – ಇದನ್ನು ಮಿಥ್ಯೆಯಲ್ಲ, ಸತ್ಯವೆಂದು ಸಾಬೀತು ಮಾಡಲು ನೀವು ಪ್ರಯತ್ನಿಸುವಂಥದು, ಮೊದಲು ನಿಮ್ಮನ್ನು ನೀವು ಅರಿತುಕೊಳ್ಳದೆ, ಸದಾ ಕಾಲವೂ ತನ್ನನ್ನು ಅರಿಯಬೇಕೆಂದು ಪ್ರಯತ್ನಿಸುವ ನಿಮ್ಮನ್ನು ಅಣಕಿಸುತ್ತಿದೆ. ತನ್ನ–ಜ್ಞಾತೃವಿನ – ಬಗೆಗಿನ ಸತ್ಯವನ್ನರಿಯದವನು ಸೋಪಾಧಿಕ ಅಸ್ತಿತ್ವದ ವಸ್ತುಗಳ ಅವನ ಜ್ಞಾನ ಹೇಗೆ ನಿಜವಾದ ಜ್ಞಾನವಾದೀತು? ಒಬ್ಬನು 'ನಾನು' ಎಂಬುದರ ತನ್ನ ಸತ್ಯವನ್ನು ಸರಿಯಾಗಿ ತಿಳಿದುಕೊಂಡರೆ – ಅವನಲ್ಲಿ ಜ್ಞಾನವೂ, ಅದರ ವಿರುದ್ಧವಾದ ಅಜ್ಞಾನವೂ ಇವೆ – ಆಗ ಅಜ್ಞಾನದೊಂದಿಗೆ ಸಾಪೇಕ್ಷ ಜ್ಞಾನವೂ ಮಾಯವಾಗುತ್ತದೆ.

ಜಗತ್ತು ಮತ್ತು ಮನಸ್ಸು ಒಟ್ಟಿಗೆ ಉದಯವಾಗಿ ಒಟ್ಟಿಗೆ ಅಸ್ತವಾಗುತ್ತವೆ. ಜಗತ್ತಿನ ಅಸ್ತಿತ್ವಕ್ಕೆ ಮನಸ್ಸೇ ಕಾರಣ. ಯಾವುದರಲ್ಲಿ ಈ ಬೇರ್ಪಡಿಸಲಾಗದ ಜೋಡಿ – ಜಗತ್ತು ಮತ್ತು ಮನಸ್ಸು – ತನ್ನ ಉದಯಾಸ್ತಗಳು ಇವೆಯೋ ಅದೊಂದೇ ಸತ್ಯ. ಆ ಸತ್ಯವೇ ಅನಂತ ಪ್ರಜ್ಞೆ; ಅದಕ್ಕೆ ಉದಯವೂ ಇಲ್ಲ, ಅಸ್ತವೂ ಇಲ್ಲ.

'ನಾನು' ಎಂಬುದರ ಹೊರಗಡೆ ಕಾಲದೇಶಗಳು ಎಲ್ಲಿವೆ? ನಾವೂ, ದೇಹಗಳೂ ಒಂದೇ ಆಗಿದ್ದರೆ, ಆಗ ನಾವು ಕಾಲದೇಶಗಳಲ್ಲಿದ್ದೇವೆ ಎಂದು ಹೇಳಬಹುದು. ಆದರೆ ನಾವು ಶರೀರಗಳೇ? ನಾವು ಎಲ್ಲಾ ಕಾಲದೇಶಗಳಲ್ಲೂ ಒಂದೇ; ಆದ್ದರಿಂದ, ನಾವು ಕಾಲದೇಶಗಳಿಗೆ ಅತೀತವಾದ ಆ ಸತ್ಯವೇ.

ಮಾಯೆಯೆಂಬುದೇ ಭ್ರಾಂತಿಕಾರಕ. ಒಬ್ಬನು ಮಾಯೆಯನ್ನು ಅದರ ಆಚೆ ನೋಡಬೇಕು. ಅಂಥ ಸಾಧಕನು ಭ್ರಮಾಧೀನನಾಗುವನೆ? ಅವನು ಭ್ರಮೆಯ ಮಜಲುಗಳ ಬಗ್ಗೆ ಮಾತನಾಡಬಲ್ಲನೆ? ಸಿನಿಮಾ ಪ್ರದರ್ಶನದಲ್ಲಿ ದೃಶ್ಯಗಳು ಪರದೆಯ



ಮೇಲೆ ತೇಲಿಕೊಂಡು ಹೋಗುತ್ತವೆ. ಅಲ್ಲಿ ಬೆಂಕಿಯು ಕಟ್ಟಡಗಳನ್ನು ಸುಟ್ಟು ಬೂದಿ ಮಾಡುವಂತೆ ಕಾಣುತ್ತದೆ. ನೀರು ಹಡಗುಗಳನ್ನು ಭಗ್ನಗೊಳಿಸುವಂತೆ ಕಾಣಿಸುತ್ತದೆ. ಆದರೆ ಈ ಚಿತ್ರಗಳನ್ನು ಯಾವ ಪರದೆಯ ಮೇಲೆ ಪ್ರಕ್ಷೇಪಿಸಲಾಯಿತೋ ಅದು ಸುಟ್ಟು ಬೂದಿಯಾಗದೆ, ನೀರಿನಿಂದ ಒದ್ದೆಯಾಗದೆ ಉಳಿದಿದೆ. ಏಕೆ? ಏಕೆಂದರೆ, ಚಿತ್ರಗಳು ಅವಾಸ್ತವಿಕ, ಅಸತ್ಯ ಮತ್ತು ಪರದೆ ಸತ್ಯ. ಮತ್ತೆ ಪ್ರತಿಫಲನಗಳು ಕನ್ನಡಿಯಿಂದ ಹೊರಬರುತ್ತವೆ; ಆದರೆ ಕನ್ನಡಿಯು ಈ ಪ್ರತಿಫಲನಗಳ ಪ್ರಭಾವಕ್ಕೊಳಗಾಗುವುದಿಲ್ಲ. ಆದ್ದರಿಂದ ಯಾವುದೇ ಪ್ರಭಾವಕ್ಕೆ ಒಳಗಾಗದ ಏಕೈಕ ಸತ್ಯದ ವಿದ್ಯಮಾನ ಈ ಜಗತ್ತು. ಸತ್ಯ ಒಂದೇ.

ಸತ್ಯವೆಂಬುದು ದೇವರು ಮತ್ತು ಪ್ರಜ್ಞೆ. ಅದನ್ನು ಅರಿಯಬೇಕಾದರೆ, ಅದು ಹೃದಯದಲ್ಲಿದೆ. ಆಲೋಚನೆಗೆ ಅತೀತವಾದುದು ಎಂದು ತಿಳಿಯಬೇಕು. ಆ ಅಮೃತತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಪರಮಪ್ರಭುವಿಗೆ ಸಂಪೂರ್ಣವಾಗಿ ಶರಣಾಗುವುದು ಏಕೈಕಮಾರ್ಗ. ಈ ಶರಣಾಗತಿಯಿಂದ 'ಅಹಂ'ಕಾರ ಮತ್ತು 'ಮಮಕಾರ'ಗಳು ನಾಶವಾಗುತ್ತವೆ. ವಿಶ್ವದ ಸೃಷ್ಟಿಕರ್ತನಾದ ಆ ಪರಮಪುರುಷನು ಅನೇಕ ರೀತಿಯಲ್ಲಿ ಪ್ರಕಟವಾಗುತ್ತಾನೆ. ಇವು ಅವನಿಂದ ಪ್ರತ್ಯೇಕವಾಗಿ ಇರಲಾರವು. ಅಹಂಕಾರವನ್ನು ನಾಶ ಮಾಡಿ ಆತ್ಮವಾಗಿರುವುದು ಅತ್ಯುತ್ತಮ ಸಾಧನ ಮಾರ್ಗ. 'ನಾನು ಯಾರು' ಎಂಬ ಪ್ರಶ್ನೆಗೆ ಉತ್ತರಿಸಿ! ಮನಸ್ಸಿನಲ್ಲಿ ಮತ್ತು ಮನಸ್ಸಿನಿಂದ ಹೊರಬರುವ ಉತ್ತರ ಉತ್ತರವೇ ಅಲ್ಲ. ಉತ್ತರ ಅಹಮಿಕೆ ಇಲ್ಲದ ಸ್ಥಿತಿಯಲ್ಲಿದೆ.

ಸುಷುಪ್ತಿಯಲ್ಲಿ ಅರಿವಿಲ್ಲದೆಯೇ ಅನುಭವಿಸುವ ಆನಂದ **ತುರೀಯ** ಸ್ಥಿತಿಯಲ್ಲಿ ಅನುಭವಕ್ಕೆ ಬರುತ್ತದೆ. ಅದೇ ವ್ಯತ್ಯಾಸ. ಜಾಗ್ರದವಸ್ಥೆಯಲ್ಲಿ ಅನುಭವಿಸುವ ಆನಂದ **ಉಪಾಧಿ ಆನಂದ**. ಆದರೆ ನಾನಾ ಬಗೆಯ **ಆನಂದ**ಗಳಿಲ್ಲ. ಜಾಗ್ರದವಸ್ಥೆಯಲ್ಲಿ ಅನುಭವಿಸುವ ಆನಂದವೂ ಸೇರಿದಂತೆ ಇರುವುದು ಏಕೈಕ ಆನಂದ. ಅದು ಕ್ಷುದ್ರ ಜಂತುವಿನಿಂದ ಹಿಡಿದು ಬ್ರಹ್ಮನವರೆಗೆ ಆತ್ಮದ ಆನಂದ.

ಸುಷುಪ್ತಿಯಲ್ಲಿ (ಗಾಢನಿದ್ರೆಯಲ್ಲಿ) ನೀವು ಸಂಪೂರ್ಣವಾಗಿ ಆಲೋಚನೆಗಳಿಂದ ಮುಕ್ತರಾಗಿರುತ್ತೀರಿ. ಏಕೆಂದರೆ 'ನಾನು' ಎಂಬ ಆಲೋಚನೆ ಇರುವುದಿಲ್ಲ. ಎಚ್ಚರವಾದ ಮೇಲೆ 'ನಾನು' ಎಂಬ ಆಲೋಚನೆ ಬಂದೊಡನೆ, ಇತರ ಎಲ್ಲಾ ಆಲೋಚನೆಗಳೂ ತಂತಾನೆ ಓಡಿಹೋಗುತ್ತವೆ. ಆದ್ದರಿಂದ ಅತ್ಯಂತ ವಿವೇಕವಾದ ಕ್ರಮವೆಂದರೆ, ಈ ಮುಖ್ಯವಾದ 'ನಾನು' ಎಂಬ ಆಲೋಚನೆಯನ್ನು ಹಿಡಿದುಕೊಂಡು ಕತ್ತರಿಸಿ ಹಾಕಬೇಕು; ಆಗ ಚಿತ್ತಚಾಂಚಲ್ಯಕ್ಕೆ ಅವಕಾಶವೇ ಇಲ್ಲ. ವಿಚಾರದ ನಿಜವಾದ ಬೆಲೆ, ಫಲಕಾರಿತ್ವ ಇಲ್ಲಿದೆ.

ನಿದ್ರೆಯಲ್ಲಿ 'ನಿಮ್ಮ ಕುಟುಂಬ'ದ ಬಗ್ಗೆ ನಿಮಗೆ ಅರಿವಿರಲಿಲ್ಲ, ಮತ್ತು (ನಿದ್ರಾನಂತರ) ಈಗ ನೀವು ಅದೇ ವ್ಯಕ್ತಿ. ಆದರೆ ಈಗ ನಿಮಗೆ ನಿಮ್ಮ ಕುಟುಂಬದ

ಅರಿವಿದ್ದು, ಅದು ನಿಮ್ಮನ್ನು ಬಂಧಿಸುತ್ತದೆ ಎಂದು ಭಾವಿಸಿ, ಅದನ್ನು ತೊರೆಯುವ ಆಲೋಚನೆ ಮಾಡುವಿರಿ. 'ನಿಮ್ಮ' ಕುಟುಂಬದ ಸದಸ್ಯರು ನಿಮ್ಮನ್ನು ತಮ್ಮೊಡನೆ ಬಂಧಿಸಿಕೊಳ್ಳುವರಾ, ಅಥವಾ ನೀವೇ ನಿಮ್ಮನ್ನು ಅವರೊಂದಿಗೆ ಬಂಧಿಸಿಕೊಳ್ಳುವಿರಾ? ನೀವು 'ಇದು ನನ್ನ ಕುಟುಂಬ' ಎಂಬ ಆಲೋಚನೆಯನ್ನು ತೊರೆದರೆ ಸಾಕು. ಆಲೋಚನೆಗಳು ಬದಲಾಗುತ್ತವೆ; ಆದರೆ ನೀವು ಬದಲಾಗುವುದಿಲ್ಲ. ಬದಲಾಗದ ನಿಮ್ಮನ್ನು ಹಿಡಿದುಕೊಳ್ಳಿ. ಹಾಗೆ ಮಾಡಬೇಕಾದರೆ, ನೀವು ಮನಸ್ಸಿನ ಚಿಂತನೆಯನ್ನು ನಿಲ್ಲಿಸಬೇಕಾಗಿಲ್ಲ. ಆಲೋಚನೆಗಳ ಆಕರವನ್ನು ನೆನೆಯಿರಿ, ಮತ್ತು ಅದನ್ನು ಅರಿಯಲು ಶ್ರದ್ಧೆಯಿರಲಿ.

ನಿದ್ದೆ ಅಜ್ಞಾನವಲ್ಲ; ಅದು ಒಬ್ಬನ ಶುದ್ಧಸ್ಥಿತಿ, ಜಾಗ್ರತಸ್ಥಿತಿ ಜ್ಞಾನವಲ್ಲ, ಅಜ್ಞಾನ. ನಿದ್ದೆಯಲ್ಲಿ ಪೂರ್ಣ ಜಾಗೃತಿಯೂ, ಎಚ್ಚರದ ಸ್ಥಿತಿಯಲ್ಲಿ ಪೂರ್ಣ ಅಜ್ಞಾನವೂ ಇರುತ್ತವೆ. ನಿಮ್ಮ ನೈಜಸ್ವರೂಪ ಎರಡನ್ನೂ ವ್ಯಾಪಿಸಿ ಅದನ್ನೂ ಮೀರುತ್ತದೆ. ಆತ್ಮವು ಜ್ಞಾನಾಜ್ಞಾನಗಳ ಆಚೆಯದು. ನಿದ್ದೆ, ಸ್ವಪ್ನ ಮತ್ತು ಜಾಗ್ರದವಸ್ಥೆಗಳು ಆತ್ಮದ ಮುಂದೆ ಹಾದುಹೋಗುವ ಪರಿಗಳು. ಅವು ನಿಮಗೆ ಗೊತ್ತಿರಲಿ, ಬಿಡಲಿ ಅವು ಮುಂದುವರಿಯುತ್ತವೆ. ಅದು **ಜ್ಞಾನಿಯ** ಸ್ಥಿತಿ; ಅವನಲ್ಲಿ **ಸಮಾಧಿ**, ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಯ ಅವಸ್ಥೆಗಳು ಹಾದು ಹೋಗುತ್ತವೆ. ಎತ್ತಿನಗಾಡಿಯ ಪ್ರಯಾಣಿಕ ನಿದ್ದೆ ಮಾಡಿರುವಾಗ, ಎತ್ತು ಚಲಿಸುತ್ತಲೋ, ನಿಂತುಕೊಂಡೋ, ಅಥವಾ ನೊಗ ಬಿಚ್ಚಿಕೊಂಡೋ ಇರುವಂತೆ. ಅಜ್ಞಾನಿಯ ಅಭಿಪ್ರಾಯದಲ್ಲಿ ಈ ಉತ್ತರಗಳು; ಇಲ್ಲದಿದ್ದರೆ ಅಂಥ ಪ್ರಶ್ನೆಗಳೇ ಏಳುವುದಿಲ್ಲ.

ನೀವು ಮಾತ್ರ ನಿದ್ರೆಯಿಂದ ಎದ್ದ ಮೇಲೆ ಸ್ವಪ್ನರಹಿತ ನಿದ್ರೆಯು ಪ್ರಜ್ಞಾರಹಿತ ಸ್ಥಿತಿ ಎಂದು ಹೇಳುವಿರಿ. ನೀವು ವಾಸ್ತವವಾಗಿ ನಿದ್ರೆ ಮಾಡಿರುವಾಗ ಹಾಗೆ ಹೇಳುವುದಿಲ್ಲ. ಈಗ, ನಿದ್ರೆಯು ನಿಮ್ಮ ಮನಸ್ಸಿನ ಪ್ರಜ್ಞಾರಹಿತ ಸ್ಥಿತಿ ಎಂದು ಹೇಳುವುದು 'ನೀವು'. ಆದರೆ ಅದು ನಿಮ್ಮ ನಿದ್ರೆಯಲ್ಲಿರಲಿಲ್ಲ. ನಿದ್ರೆಯಲ್ಲಿರುವ ಪ್ರಜ್ಞೆಯು ಮನಸ್ಸಿಗೆ ಅರಿವಾಗದಿರುವುದು ಸಹಜ. ನಿದ್ರೆಯನ್ನು ಅನುಭವಿಸದೆ, ಅದು ಹೇಗಿತ್ತು ಎಂಬುದನ್ನು ನೆನೆಸಿಕೊಳ್ಳಲು ಅದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದರ ಬಗ್ಗೆ ತಪ್ಪುಗಳನ್ನು ಮಾಡುತ್ತದೆ. ಸುಷುಪ್ತಿಯ ಸ್ಥಿತಿ ಮನಸ್ಸಿಗೆ ಅತೀತವಾದುದು.

ನೀವು ನಿದ್ದೆಯಲ್ಲಿ ಕನಸು ಕಾಣುವಿರಿ. ನೀವು ತಿರುವಣ್ಣಾಮಲೆಯಲ್ಲಿ ಹಾಸಿಗೆಯ ಮೇಲೆ ಮಲಗಿರುವಾಗ, ನೀವು ಬೇರಾವುದೋ ಪಟ್ಟಣದಲ್ಲಿರುವಂತೆ ಕನಸು ಕಾಣುವಿರಿ. ಇದು ನಿಮಗೆ ಸತ್ಯ; ನಿಮ್ಮ ದೇಹ ಇಲ್ಲೇ ಇದ್ದು, ನಿಮ್ಮ ಕೋಣೆಯಲ್ಲಿ ಹಾಸಿಗೆಯ ಮೇಲೆ ಮಲಗಿದ್ದರೂ ಕೂಡ. ಒಂದು ಪಟ್ಟಣ ನಿಮ್ಮ ಕೋಣೆಯನ್ನು ಪ್ರವೇಶಿಸಬಲ್ಲುದೆ? ಅಥವಾ ನಿಮ್ಮ ಶರೀರವನ್ನು ಇಲ್ಲೇ ಬಿಟ್ಟು ಬೇರೆ ಸ್ಥಳಕ್ಕೆ ಹೋಗಿರಲು ಸಾಧ್ಯವೇ? ಎರಡೂ ಅಸಾಧ್ಯ. ಆದ್ದರಿಂದ ನೀವು ಇಲ್ಲಿರುವುದು



ಮತ್ತು ಇನ್ನೊಂದು ಪಟ್ಟಣವನ್ನು ನೋಡುವುದು – ಇವೆರಡೂ ಮಿಥ್ಯೆಯೇ. ಅವು ಮನಸ್ಸಿಗೆ ಸತ್ಯವಾಗಿ ಕಾಣುವುವು. ಸ್ವಪ್ನಾವಸ್ಥೆಯ 'ನಾನು' ಮಾಯವಾಗಿದೆ. ಇನ್ನೊಂದು 'ನಾನು' ಸ್ವಪ್ನದ ಬಗ್ಗೆ ಹೇಳುತ್ತದೆ. ಈ 'ನಾನು' ಸ್ವಪ್ನಾವಸ್ಥೆಯಲ್ಲಿರಲಿಲ್ಲ. ಇವೆರಡೂ 'ನಾನು'ಗಳು ಮಿಥ್ಯೆ. ಉದ್ದಕ್ಕೂ, ಅನೇಕ ದೃಶ್ಯಗಳಿಗೆ ಎಡೆಗೊಡುವ ಮನಸ್ಸಿನ ತಳಪದರವೊಂದಿದೆ. ಪ್ರತಿಯೊಂದು ಆಲೋಚನೆಯೊಂದಿಗೆ 'ನಾನು' ಎನ್ನುವುದು ಏಳುತ್ತದೆ; ಮತ್ತು ಅದು ಅಳಿದುಹೋದೊಡನೆ ಆ 'ನಾನು' ಎಂಬುದೂ ಅಳಿಯುತ್ತದೆ. ಆದ್ದರಿಂದ ಆ 'ನಾನು'ಗಳು ಪ್ರತಿ ಕ್ಷಣವೂ ಹುಟ್ಟುತ್ತವೆ, ಮತ್ತು ಪ್ರತಿ ಕ್ಷಣವೂ ಸಾಯುತ್ತವೆ. ಉಳಿದುಕೊಂಡಿರುವ ಮನಸ್ಸೇ ನಿಜವಾಗಿ ತೊಂದರೆ ಕೊಡುವಂಥದು. ಜನಕನ ಪ್ರಕಾರ ಅದೇ ಕಳ್ಳ.

ಕನಸಿನಲ್ಲಿ ನಿಮಗೆ ಅದು ಕನಸು ಎಂಬ ಅರಿವೇ ಇರುವುದಿಲ್ಲ. ಆದ್ದರಿಂದ ನೀವು ಪ್ರಯತ್ನಪೂರ್ವಕವಾಗಿ ಅದರಿಂದ ದೂರ ಸರಿಯುವ ಅಗತ್ಯ ನಿಮಗಿಲ್ಲ. ಆದರೆ, ಈ ಬದುಕಿನಲ್ಲಿ ನಿಮಗೆ ಕಿಂಚಿತ್ ಅಂತರ್ಬೋಧೆ ಇದೆ; ನಿಮ್ಮ ನಿದ್ರೆಯ ಅನುಭವದಿಂದ, ಓದುವುದು ಮತ್ತು ಕೇಳುವುದರಿಂದ, ಅದು ನಿಮಗೆ ಸ್ವಲ್ಪ ಕನಸಿನಂತೆಯೇ ಇದೆ. ಆದ್ದರಿಂದ ಪ್ರಯತ್ನಪಟ್ಟು ಅದರಿಂದ ಹೊರಬರಬೇಕು ಎಂಬುದು ನಿಮಗಿದೆ. ಆದರೆ ಆತ್ಮಸಕ್ಷಾತ್ಕಾರ ಮಾಡಿಕೊಳ್ಳಬೇಕು ಎಂಬ ಜ್ಞಾನ ನಿಮಗೇ ಇಲ್ಲದಿದ್ದರೆ, ಬೇರೆ ಯಾರು ನಿಮ್ಮಿಂದ ಆತ್ಮಸಾಕ್ಷಾತ್ಕಾರ ಅಪೇಕ್ಷಿಸುತ್ತಾರೆ? ನೀವು ಕನಸಿನಲ್ಲೇ ಬದುಕಲು ಇಷ್ಟಪಟ್ಟರೆ, ಹಾಗೇ ಮಾಡಿ.

ನೀವು ಜಾಗ್ರದವಸ್ಥೆಯಲ್ಲಿರುವವರನ್ನು ನಿಮ್ಮ ಜಾಗ್ರದವಸ್ಥೆಯಲ್ಲಿರುವವರಿಂದ ನಿಮ್ಮ ಜಾಗ್ರದವಸ್ಥೆಯ ಅನುಭವಗಳ ಸಮರ್ಥನೆ ಕೋರುವಂತೆ, ನೀವು ಭೇಟಿ ಮಾಡುವ ಸ್ವಪ್ನಾವಸ್ಥೆಯಲ್ಲಿರುವವರಿಂದ ಸ್ವಪ್ನಾನುಭವಗಳ ಬಗ್ಗೆ ಸಮರ್ಥನೆ ಕೋರಬೇಕು. ಇಲ್ಲಿ ಮುಖ್ಯವಾದ ಅಂಶವೇನೆಂದರೆ, ಎಚ್ಚರವಾಗಿರುವಾಗ ನೀವು ನಿಮ್ಮ ಸ್ವಪ್ನಾನುಭವಗಳ ಸತ್ಯತೆಯನ್ನು ದೃಢಪಡಿಸಲು ನೀವು ಸಿದ್ಧವಾಗಿದ್ದೀರಾ ಎನ್ನುವುದು. ಅಂತೆಯೇ ಜ್ಞಾನೋದಯವಾದವನು ಜಾಗ್ರದವಸ್ಥೆಯ ಸತ್ಯತೆಯನ್ನು ಖಚಿತಪಡಿಸಲಾರ.

ಒಂದೇ ಒಂದು ಸತ್ಯವಾದ ಸ್ಥಿತಿ ಇದೆ; ಅದು ಪ್ರಜ್ಞೆ ಅಥವಾ ಜಾಗೃತಿ ಅಥವಾ ಅಸ್ತಿತ್ವ. ಜಾಗ್ರದವಸ್ಥೆ, ಸ್ವಪ್ನಾವಸ್ಥೆ ಮತ್ತು ನಿದ್ರಾವಸ್ಥೆ ಎಂಬ ಮೂರು ಅವಸ್ಥೆಗಳು ಸತ್ಯವಾಗಿರಲು ಸಾಧ್ಯವಿಲ್ಲ. ಅವು ಖಂಡಿತವಾಗಿ ಬರುತ್ತವೆ, ಹೋಗುತ್ತವೆ. ಸತ್ಯವಾದುದು ಎಂದೆಂದಿಗೂ ಅಸ್ತಿತ್ವದಲ್ಲಿರಬೇಕು. ಈ ಮೂರೂ ಅವಸ್ಥೆಗಳಲ್ಲಿ ಉಳಿದಿರುವ 'ನಾನು' ಅಥವಾ ಅಸ್ತಿತ್ವ ಮಾತ್ರ ಸತ್ಯ. ಉಳಿದ ಮೂರು ನಿಜವಲ್ಲ; ಆದ್ದರಿಂದ ಅವಕ್ಕೆ ಇಂತಿಂಥ ಮಟ್ಟದ ಸತ್ಯತೆ (ನಿಜಸ್ಥಿತಿ) ಇದೆ ಎಂದು ಹೇಳಲು ಸಾಧ್ಯವಿಲ್ಲ. ನಾವು ಅದನ್ನು ಸ್ಥೂಲವಾಗಿ ಹೀಗೆ ಹೇಳಬಹುದು. ಅಸ್ತಿತ್ವ ಅಥವಾ

ಪ್ರಜ್ಞೆಯೇ ಏಕೈಕ ಸತ್ಯ. ಪ್ರಜ್ಞೆ ಮತ್ತು ಎಚ್ಚರಗಳನ್ನು ಒಟ್ಟಿಗೆ ನಾವು ಜಾಗ್ರದವಸ್ಥೆ ಎಂದು ಕರೆಯುತ್ತೇವೆ. ಪ್ರಜ್ಞೆ ಮತ್ತು ಕನಸುಗಳನ್ನು ಒಟ್ಟಿಗೆ ನಾವು ಸ್ವಪ್ನಾವಸ್ಥೆಯೆಂದು ಕರೆಯುತ್ತೇವೆ. ಪರದೆಯು ಸತ್ಯ; ಅದರಲ್ಲಿನ ಚಿತ್ರಗಳು ಕೇವಲ ಛಾಯೆಗಳು. ದೀರ್ಘವಾದ ಅಭ್ಯಾಸಬಲದಿಂದ ನಾವು ಈ ಮೂರೂ ಅವಸ್ಥೆಗಳನ್ನು ಸತ್ಯವೆಂದು ಪರಿಗಣಿಸುತ್ತ ಬಂದಿದ್ದೇವೆ. ನಾವು ಕೇವಲ ಜಾಗ್ರತ್ ಅಥವಾ ಪ್ರಜ್ಞಾವಸ್ಥೆಯನ್ನು ನಾಲ್ಕನೆಯದೆಂದು ಕರೆಯುತ್ತೇವೆ. ಆದರೆ ನಾಲ್ಕನೇ ಅವಸ್ಥೆ ಇಲ್ಲ; ಇರುವುದು ಒಂದೇ ಒಂದು ಅವಸ್ಥೆ.

ಆತ್ಮವು ಈ ಅವಸ್ಥೆಗಳು ಬರುತ್ತವೆ, ಹೋಗುತ್ತವೆ ಎಂದು ಹೇಳುತ್ತದೆಯೆ? ನೋಡುಗನು ಈ ಸ್ಥಿತಿಗಳು ಬರುತ್ತವೆ, ಹೋಗುತ್ತವೆ ಎಂದು ಹೇಳುತ್ತಾನೆ. ನೋಡುಗ ಮತ್ತು ನೋಡಲ್ಪಟ್ಟದ್ದು ಎರಡೂ ಸೇರಿ ಮನಸ್ಸಾಗುತ್ತದೆ. ಮನಸ್ಸು ಎಂಬುದೊಂದು ಇದೆಯೆ ಎಂದು ನೋಡಿ. ಆಗ ಮನಸ್ಸು ಆತ್ಮದಲ್ಲಿ ಲೀನವಾಗುತ್ತದೆ; ಆಗ ನೋಡುಗನಾಗಲಿ ನೋಡಲ್ಪಟ್ಟದ್ದಾಗಲಿ ಇರುವುದಿಲ್ಲ. ಆದ್ದರಿಂದ ಆ ಪ್ರಶ್ನೆಗೆ ನಿಜವಾದ ಉತ್ತರವೆಂದರೆ **"ಈ ಅವಸ್ಥೆಗಳು ಬರುತ್ತವೆ, ಹೋಗುತ್ತವೆಯೆ?"** ಅವು ಬರುವುದೂ ಇಲ್ಲ, ಹೋಗುವುದೂ ಇಲ್ಲ. ಆತ್ಮವೊಂದೇ ಉಳಿದಿರುತ್ತದೆ, ಮತ್ತು ನಿತ್ಯವಾದುದು. ಈ ಮೂರು ಅವಸ್ಥೆಗಳು ಇರುವುದಕ್ಕೆ ಕಾರಣ ಸತ್ಯಾನ್ವೇಷಣೆಯ ರಾಹಿತ್ಯ. ಸತ್ಯಾನ್ವೇಷಣೆಯು ಅವುಗಳಿಗೆ ಇತಿಶ್ರೀ ಹಾಡುತ್ತದೆ. ಒಬ್ಬನು ಎಷ್ಟೇ ಸಮಜಾಯಿಷಿ ನೀಡಿದರೂ, ಆತ್ಮಸಾಕ್ಷಾತ್ಕಾರವಾಗುವವರೆಗೆ, ಮತ್ತು ಸ್ವತಸ್ಸಿದ್ಧವಾದ ಹಾಗೂ ಏಕೈಕ ಅಸ್ತಿತ್ವವಾದದ್ದರ ಬಗ್ಗೆ ಹೇಗೆ ಕುರುಡಾಗಿದ್ದೆ ಎಂದು ಅಚ್ಚರಿಪಡುವವರೆಗೆ ಸ್ಪಷ್ಟವಾಗುವುದಿಲ್ಲ.

ಜಾಗ್ರದವಸ್ಥೆ, ಸ್ವಪ್ನಾವಸ್ಥೆ ಮತ್ತು ಸುಪ್ತಾವಸ್ಥೆಗಳಲ್ಲಿ ಒಂದೇ ಒಂದು ಪ್ರಜ್ಞೆ ಇದೆ. ನಿದ್ರಾವಸ್ಥೆಯಲ್ಲಿ 'ನಾನು' ಎಂಬುದಿಲ್ಲ; ಎಚ್ಚರವಾದ ಮೇಲೆ ಆಲೋಚನೆ ಏಳುತ್ತದೆ; ಮತ್ತು ಲೋಕ ಕಾಣುತ್ತದೆ. ಈ 'ನಾನು' ಎನ್ನುವುದು ನಿದ್ರಾವಸ್ಥೆಯಲ್ಲಿ ಎಲ್ಲಿ ಹೋಗಿತ್ತು? ಅದು ಇತ್ತೆ ಅಥವಾ ಇಲ್ಲವೆ? ಅದು ಆಗಲೂ ಇರಬೇಕಾಗಿತ್ತು. ಆದರೆ ನಿದ್ರೆಯ 'ನಾನು' ನಿಜವಾದ 'ನಾನು' ಎಂದು ನೀವು ಭಾವಿಸುವಂತೆ ಅಲ್ಲ. ಅದು ಉದ್ದಕ್ಕೂ ಇರುತ್ತದೆ. ಅದು ಅರಿವು. ಅದನ್ನು ಅರಿತರೆ, ಅದು ಆಲೋಚನೆಗಳಿಗೆ ಅತೀತವಾದುದೆಂದು ನೀವು ತಿಳಿಯುವಿರಿ.

ಜನರು ದಿವ್ಯದರ್ಶನಗಳ ಬಗ್ಗೆ ಹೇಳುತ್ತಾರೆ; ಆದರೂ ಅವರು ಬೇರೆ ಬೇರೆ ರೀತಿಯಲ್ಲಿ ಬಣ್ಣಿಸುತ್ತಾರೆ, ನೋಡುಗನೇ ರಂಗದಲ್ಲಿರುತ್ತಾನೆ. ನೀವು ಚಮತ್ಕಾರಗಳೆಂದೂ ಜಾದು ಎಂದೂ ಕರೆಯುವ ಚಿತ್ರ ವಿಚಿತ್ರವಾದ ದೃಶ್ಯಗಳನ್ನೂ ವಿದ್ಯಮಾನಗಳನ್ನೂ ವಶ್ಯಸುಪ್ತಿಕಾರರು ನಿಮಗೆ ತೋರಿಸುತ್ತಾರೆ. ಆದರೆ ಸ್ವಪ್ನದಲ್ಲಿ ಕಂಡ ವ್ಯಕ್ತಿ ಯಾ ವಸ್ತುಗಳನ್ನು ನೀವು ದಿವ್ಯವಾದುದೆಂದು ಪ್ರಶಂಸಿಸುವಿರಿ. ಏಕೆ



ಈ ವ್ಯತ್ಯಾಸ? ಎಲ್ಲಾ ವೀಕ್ಷಣಗಳೂ ಮಿಥ್ಯೆಯೇ. ಅವು ಇಂದ್ರಿಯಗಳಿಂದಲೇ ಬರಲಿ, ಮನಸ್ಸಿನಿಂದ ಉದ್ಭವಿಸಿದ ಶುದ್ಧ ಕಲ್ಪನೆಗಳೇ ಆಗಲಿ ಮಿಥ್ಯೆಯೇ.

ನೀವು ಶಿವನ ದರ್ಶನದ ಬಗ್ಗೆ ಹೇಳುವಿರಿ. ದರ್ಶನ ಯಾವಾಗಲೂ ಒಂದು ವಸ್ತುವಿನದು. ಒಬ್ಬ ಜ್ಞಾತೃವಿದ್ದಾನೆಂದು ಇದು ಸೂಚಿಸುತ್ತದೆ. ಅಂದರೆ, ದರ್ಶನದ ಸ್ವರೂಪ ನೋಡುಗನ ಸ್ತರದಲ್ಲೇ ಎಂದರ್ಥ. ದೃಶ್ಯದಲ್ಲಿ ಅದೃಶ್ಯವೂ ಅಡಗಿದೆ. ಯಾವುದು ಕಾಣುವುದೋ ಅದು ಅದೃಶ್ಯವೂ ಆಗಬೇಕು. ಒಂದು ವೀಕ್ಷಣ ಎಂದೂ ನಿತ್ಯವಾಗಿರಲು ಸಾಧ್ಯವಿಲ್ಲ. ಆದರೆ ಶಿವ ನಿತ್ಯ.

ವೀಕ್ಷಣವೆಂದರೆ ಅದರಲ್ಲಿ ನೋಡುಗನು ಇರಲೇಬೇಕು. ನೋಡುಗ ಅಥವಾ ಸಾಧಕ ಆತ್ಮದ ಅಸ್ತಿತ್ವವನ್ನು ಅಲ್ಲಗಳೆಯಲಾರ. ಆತ್ಮವು ಪ್ರಜ್ಞೆಯಾಗಿ ಅಸ್ತಿತ್ವದಲ್ಲಿಲ್ಲದಿರುವ ಒಂದೇ ಒಂದು ಕ್ಷಣವೂ ಇಲ್ಲ. ಪ್ರಜ್ಞೆಯು ನಿತ್ಯನಾದ ಭಗವಂತ, ಮತ್ತು ಏಕೈಕ ದೇವರು. ನೋಡುಗನು ತನ್ನನ್ನೇ ನೋಡಿಕೊಳ್ಳಲಾರ. **ಪ್ರತ್ಯಕ್ಷ**ದಲ್ಲಿನಂತೆ, ಕಣ್ಣುಗಳಿಂದ ತನ್ನನ್ನು ತಾನು ನೋಡಲಾಗದುದರಿಂದ, ಅವನು ತನ್ನ ಅಸ್ತಿತ್ವನ್ನು ಅಲ್ಲಗಳೆಯುವನೆ? ಇಲ್ಲ! ಆದ್ದರಿಂದ **ಪ್ರತ್ಯಕ್ಷ**ವೆಂದರೆ ನೋಡುವುದಲ್ಲ, ಆದರೆ ಅಸ್ತಿತ್ವದಲ್ಲಿರುವುದು (BE-ing).

ವೀಕ್ಷಣಗಳು ನಿತ್ಯವಲ್ಲ. ಅವು ಅಂತರ್ಮುಖವಾಗಿ ಅಥವಾ ಆಧ್ಯಾತ್ಮಿಕವಾಗಿ ಮಾತ್ರ ಕಾಣುವುವು. ಬಾಹ್ಯವಾದರೆ, ಅವು ನೋಡುಗನಲ್ಲದೆ ತಮ್ಮನ್ನು ತಾವು ದೃಢಪಡಿಸಬೇಕು. ಹಾಗಾದರೆ, ಅವುಗಳ ಅಸ್ತಿತ್ವಕ್ಕೆ ಪ್ರಮಾಣವೇನು? ನೋಡುಗ ಮಾತ್ರ.

ಅರ್ಜುನ ನೋಡಿದ ವಿಶ್ವರೂಪದರ್ಶನದಲ್ಲಿ, ಶ್ರೀಕೃಷ್ಣ ಅರ್ಜುನನಿಗೆ ಹೇಳಿದನು: 'ನಾನು ನಿರಾಕಾರ, ಲೋಕಗಳಿಗೆಲ್ಲಾ ಅತೀತ.' ಅರ್ಜುನನು ತನ್ನನ್ನೂ, ದೇವರುಗಳನ್ನೂ ಸಕಲ ಲೋಕಗಳನ್ನೂ ಯಾವುದರಲ್ಲಿ ನೋಡಿದ? ಕೃಷ್ಣ ಮತ್ತೂ ಹೇಳಿದ: 'ದೇವರುಗಳಾಗಲಿ ಜನರಾಗಲಿ ನನ್ನನ್ನು ನೋಡಲಾರರು'. ಆದರೂ ಅರ್ಜುನನು ಅವನ (ಕೃಷ್ಣನ) ರೂಪವನ್ನು ನೋಡಿದ. ಕೃಷ್ಣನು ಹೇಳಿದ: 'ನಾನೇ ಕಾಲ'. ಕಾಲಕ್ಕೆ ಆಕಾರವಿದೆಯೆ? ಮತ್ತೆ, ವಿಶ್ವವು ನಿಜವಾಗಿ ಅವನ (ಕೃಷ್ಣನ) ಆಕಾರವೇ ಆದರೆ, ಅದು ಒಂದೇ ಆಗಿರಬೇಕು ಮತ್ತು ಪರಿವರ್ತನೆಯಾಗಬಾರದು. ಅವನು (ಕೃಷ್ಣ) ಅರ್ಜುನನಿಗೆ ಹೀಗೆ ಏಕೆ ಹೇಳಿದ: 'ನೀನು ಏನೇನನ್ನು ನೋಡಬೇಕೆಂದು ಬಯಸುವೆಯೋ ಅದೆಲ್ಲವನ್ನೂ ನನ್ನಲ್ಲಿ ನೋಡು.' ಮೇಲಿನ ಪ್ರಶ್ನೆಗೆ ಉತ್ತರವೆಂದರೆ, ಆ ದರ್ಶನ ಮಾನಸಿಕ – ನೋಡುಗನ ಇಚ್ಛೆಗೆ ಅನುಸಾರವಾದುದು. ಆದ್ದರಿಂದ ಅದನ್ನು ಅಕ್ಷರಶಃ ಅರ್ಥೈಸಬಾರದು. ಅದು ಭಗವಂತನ ಸತ್ಯಕ್ಕೆ ಅನುಸಾರವಾದ ದರ್ಶನವಾಗಿರಲಿಲ್ಲ. ಅವರು ಅದನ್ನು 'ದಿವ್ಯದರ್ಶನ'ವೆಂದು ಕರೆಯುತ್ತಾರೆ. ಒಬ್ಬ ವಶೀಕರಣಕಾರನು ನಿಮಗೆ ಏನನ್ನಾದರೂ

ಒಂದನ್ನು ತೋರಿಸಿದರೆ ಅದನ್ನು ನೀವು ಚಮತ್ಕಾರವೆಂದು ಕರೆಯುತ್ತೀರಿ; ಆದರೆ ಇದನ್ನು ದಿವ್ಯದರ್ಶನವೆಂದು ಕರೆಯುವಿರಿ! ಈ ಭೇದ ಏತಕ್ಕೆ? ಕೃಷ್ಣನು ಅರ್ಜುನನಿಗೆ **ದಿವ್ಯ ಚಕ್ಷುಸ್**' ಅನ್ನು – ಜ್ಞಾನ ಚಕ್ಷುಸ್ ಅಲ್ಲ – ಕೊಟ್ಟ. ಇದು ಶುದ್ಧ ಪ್ರಜ್ಞೆಯ ಕಣ್ಣು; ಇಲ್ಲಿ ಕಲ್ಪನಾದೃಶ್ಯಗಳಿಲ್ಲ. ನೋಡಿದ್ದು ಯಾವುದೂ ಸತ್ಯವಲ್ಲ.

ದಿವ್ಯದೃಷ್ಟಿ ಎಂದರೆ ಆತ್ಮಪ್ರಕಾಶ. **ದಿವ್ಯ** ಎಂಬ ಪದ ಅದನ್ನು ತೋರಿಸುತ್ತದೆ. ಈ ಸಮಸ್ತಪದದ ಅರ್ಥ ಆತ್ಮ. ದಿವ್ಯದೃಷ್ಟಿಯನ್ನು ಯಾರು ಕೊಡಬೇಕು? ಯಾರು ನೋಡಬೇಕು? ಮತ್ತೆ, ಜನರು ಪುಸ್ತಕಗಳಲ್ಲಿ ಓದುತ್ತಾರೆ: "ಶ್ರವಣ, ಮನನ ಮತ್ತು ಏಕಾಗ್ರತೆಗಳು ಬೇಕು." ಸಾಕ್ಷಾತ್ಕಾರಕ್ಕೆ ಮುಂಚೆ ಅವರು **ಸವಿಕಲ್ಪಸಮಾಧಿ** ಮತ್ತು **ನಿರ್ವಿಕಲ್ಪ ಸಮಾಧಿ**ಗಳ ಮೂಲಕ ಹಾದುಹೋಗಬೇಕು ಎಂದು ಅವರು ಭಾವಿಸುತ್ತಾರೆ. ಆದ್ದರಿಂದಲೇ ಈ ಎಲ್ಲಾ ಪ್ರಶ್ನೆಗಳು. ಅವರು ಏಕೆ ಈ ಚಕ್ರಭೀಮನ ಕೋಟೆಯಲ್ಲಿ ಅಲೆದಾಡಬೇಕು? ಕೊನೆಗೆ ಅವರಿಗೇನು ಲಾಭ? ಅನ್ವೇಷಣೆ ಮಾಡುವ ತೊಂದರೆಯ ನಿಲುಗಡೆ. ಆತ್ಮವು ನಿತ್ಯ ಮತ್ತು ಸ್ವಯಂ ವ್ಯಕ್ತ ಎಂದು ಅವರು ಕಂಡುಕೊಳ್ಳುತ್ತಾರೆ. ಈ ಕ್ಷಣದಲ್ಲೂ ಅವರಿಗೆ ಶಾಂತಿ ಏಕೆ ದೊರಕಬಾರದು?

"ನೀವು ದೇವರನ್ನು ನೋಡಿದ್ದೀರಾ?" ಎಂಬ ಪ್ರಶ್ನೆಗೆ ಮಹರ್ಷಿಗಳು ನಗುತ್ತಾ ಉತ್ತರಿಸಿದರು: "ಯಾರಾದರೂ ನನ್ನೆದುರು ಬಂದು 'ನಾನು ಶಿವ' ಎಂದೋ, 'ನಾನು ರಾಮ' ಎಂದೋ, 'ನಾನು ಕೃಷ್ಣ' ಎಂದೋ ಹೇಳಿದ್ದರೆ, ಅಂಥ ಒಬ್ಬನನ್ನು ನೋಡಿರುವುದಾಗಿ ನನಗೆ ಗೊತ್ತಿರುತ್ತಿತ್ತು. ಆದರೆ ಯಾರೂ ನನ್ನೆದುರು ಬಂದು ಹಾಗೆ ಹೇಳಿಲ್ಲ." ಈ ಉತ್ತರ ಪೃಚ್ಛಕನ ಅಜ್ಞಾನಕ್ಕೆ ತಕ್ಕಂತಿದೆ. ನಿಜವಾದ ಆತ್ಮನಾದ ದೇವರು ನಿರಾಕಾರನಾದ್ದರಿಂದ, ವಸ್ತುವಿನಂತೆ ಅವನನ್ನು ನೋಡಲಾಗದು.

ವಸ್ತುಗಳನ್ನು ನೋಡಿ ಅವುಗಳಲ್ಲಿ ದೇವರನ್ನು ಕಾಣುವುದು ಮಾನಸಿಕ ಕ್ರಿಯೆಗಳು. ಆದರೆ ಅದು ಭಗವದ್ದರ್ಶನವಲ್ಲ; ಏಕೆಂದರೆ ಅವನು ನಮ್ಮೊಳಗೆ ಇದ್ದಾನೆ. 'ಎಲ್ಲಾ ವಸ್ತುಗಳಲ್ಲೂ ದೇವರನ್ನು ಕಾಣುವುದು' ಎಂಬ ಮಾತಿನ ಅರ್ಥ ಲೋಕದ ರೂಪವನ್ನು ಆರೋಪಿಸಲಾದ ದೇವರು ಸತ್ಯ ಎಂದು. ಇದನ್ನು **ಪ್ರವಿಲಾಪ ದೃಷ್ಟಿ** – ವೈವಿಧ್ಯದಲ್ಲಿ ಅಡಗಿರುವ ಸತ್ಯವನ್ನು ನೆನೆಯುವುದು – ಎಂದು ಕರೆಯುತ್ತಾರೆ. ಆದ್ದರಿಂದ ಮನಸ್ಸನ್ನು ಶುದ್ಧೀಕರಿಸುವ ಮತ್ತು ಬಲಗೊಳಿಸುವ ಸಾಧನವೆಂದು ಹೇಳಲಾಗಿದೆ.

ಕತ್ತಲಲ್ಲಿರುವ ವಸ್ತುವೊಂದನ್ನು ನೋಡಬೇಕಾದರೆ, ಕಣ್ಣು ಮತ್ತು ದೀಪದ ಬೆಳಕು ಎರಡೂ ಬೇಕು. ಬೆಳಕನ್ನು ಮಾತ್ರ ನೋಡಬೇಕಾದರೆ, ಕಣ್ಣೊಂದೇ ಸಾಕು. ಆದರೆ ಸೂರ್ಯನನ್ನು ನೋಡಬೇಕಾದರೆ, ಬೇರಾವುದೇ ಬೆಳಕಿನ ಆವಶ್ಯಕತೆ ಇಲ್ಲ. ನೀವು ನಿಮ್ಮ ಜೊತೆ ಒಂದು ದೀಪ ತೆಗೆದುಕೊಂಡು ಹೋದರೂ, ಅದರ ಬೆಳಕು ಸೂರ್ಯನ ಬೆಳಕಿನಲ್ಲಿ ಅಡಗಿಹೋಗುತ್ತದೆ. ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ನಮ್ಮ



ಬುದ್ಧಿ ಯಾವ ಉಪಯೋಗಕ್ಕೂ ಬರುವುದಿಲ್ಲ. ಲೋಕವನ್ನು ಅಥವಾ ಬಾಹ್ಯ ವಸ್ತುಗಳನ್ನು ನೋಡಲು ಮನಸ್ಸು ಮತ್ತು ಪ್ರತಿಫಲಿತ ಬೆಳಕು (ಅಥವಾ **ಚಿದಾಭಾಸ**) – ಇದು ಯಾವಾಗಲೂ ಅದರೊಂದಿಗೆ ಏಳುತ್ತದೆ – ಬೇಕು. ಆತ್ಮವನ್ನು ನೋಡಲು, ಮನಸ್ಸನ್ನು ಕೇವಲ ಅಂತರ್ಮುಖಿಯಾಗಿಸಬೇಕು, ಅಷ್ಟೆ; ಮತ್ತು ಪ್ರತಿಫಲಿತ ಬೆಳಕಿನ ಆವಶ್ಯಕತೆಯಿಲ್ಲ.

ಒಂದು ವಸ್ತುವನ್ನು ಅರಿಯಲು, ಒಂದು ಸಾಮಾನ್ಯ ಬೆಳಕು – ಕತ್ತಲೆಯ ಶತ್ರು – ಬೇಕು. ಈ ಬೆಳಕು ಬೆಳಕೂ ಅಲ್ಲ, ಕತ್ತಲೂ ಅಲ್ಲ. ಆದರೆ ಅದನ್ನು ಬೆಳಕು ಎಂದು ಕರೆಯುತ್ತಾರೆ, ಏಕೆಂದರೆ, ಅದರಿಂದ ಅವು ತಿಳಿಯುತ್ತವೆ. ಈ ಬೆಳಕು ಯಾವುದೆಂದರೆ ಆತ್ಮ; ಇದು ಯಾರಿಗೂ ತಿಳಿಯದ ಅನಂತ ಪ್ರಜ್ಞೆ. ಯಾರೂ **ಅಜ್ಞಾನಿ**ಯಲ್ಲ, ಆತ್ಮವನ್ನರಿಯದವರಲ್ಲ. ಇದನ್ನು ಅರಿಯದೆ ಜನ ಜ್ಞಾನಿಗಳಾಗಬಯಸುವರು!

ಈ ಪ್ರಜ್ಞೆಯ ಮೂಲವನ್ನು ಅರಸಲು ನಿಮಗೆ ಆಸಕ್ತಿಯಿರುವುದರಿಂದ ನಮ್ಮಲ್ಲಿ ಹೃದಯದ ಪ್ರಶ್ನೆ ಏಳುತ್ತದೆ. ಗಾಢವಾಗಿ ಆಲೋಚಿಸುವ ಮನಸ್ಸಿನವರಿಗೆಲ್ಲ 'ನಾನು' ಮತ್ತು ಅದರ ಸ್ವರೂಪವನ್ನು ಶೋಧಿಸುವುದರಲ್ಲಿ ಪ್ರಬಲವಾದ ಆಸಕ್ತಿಯಿದೆ. ಅದನ್ನು ಯಾವ ಹೆಸರಿನಿಂದಾದರೂ ಕರೆಯಿರಿ: ದೇವರು, ಆತ್ಮ, ಹೃದಯ ಅಥವಾ ಪ್ರಜ್ಞೆಯ ನೆಲೆ. ಅವೆಲ್ಲ ಒಂದೇ. ಅರ್ಥ ಮಾಡಿಕೊಳ್ಳಬೇಕಾದ ಒಂದು ಅಂಶವೆಂದರೆ, ಹೃದಯವೆನ್ನುವುದು ಒಬ್ಬನ ಅಸ್ತಿತ್ವದ ತಿರುಳು, ಕೇಂದ್ರ; ಅದಿಲ್ಲದೆ ಬೇರೆ ಯಾವುದೂ ಇಲ್ಲ.

ಈ ಅಬಾಧಿತವಾದ ದೃಷ್ಟಿಕೋನದಿಂದ ಹೃದಯ, ಆತ್ಮ ಅಥವಾ ಪ್ರಜ್ಞೆಗೆ ಭೌತದೇಹದಲ್ಲಿ ಒಂದು ನಿರ್ದಿಷ್ಟವಾದ ಸ್ಥಾನ ಯಾವುದೂ ಇಲ್ಲ. ಕಾರಣ ಏನು? ದೇಹವೇ ಮನಸ್ಸಿನ ಕಲ್ಪನೆ; ಮತ್ತು ಮನಸ್ಸು ಪ್ರಕಾಶಮಾನವಾದ ಹೃದಯದ ಮಸಕಾದ ಪ್ರತಿಫಲನ, ಅಷ್ಟೆ. ಸಕಲವನ್ನೂ ಒಳಗೊಂಡಿರುವ ಅಂಥದನ್ನು ಭೌತದೇಹದೊಳಗಿನ ಪುಟಾಣಿ ಭಾಗವೆಂದು ಹೇಳಲು ಹೇಗೆ ಸಾಧ್ಯ? ಅದು ಆ ಏಕೈಕ ಸತ್ಯದ, ಅನಂತ ಸೂಕ್ಷ್ಮದ ಲೋಕೋತ್ತರವಾದ ಅಭಿವ್ಯಕ್ತಿ.

ಹೃದಯದಲ್ಲಿ ಆತ್ಮವಾಗಿ ಇರುವುದು ಪರಮ ವಿವೇಕ. ಆತ್ಮದ ಸ್ವರೂಪ ಮತ್ತು ಅಸ್ತಿತ್ವಗಳ ಬಗೆಗಿನ ವಾಗ್ವಾದಗಳೆಲ್ಲ ಮಾಯೆಯ ಆಟ, ಅಷ್ಟೆ. ನಿತ್ಯ ಸ್ವಯಂಭುವಾಗಿ ಇರುವುದು ಪರಮ ಸಿದ್ಧಿ. ಇತರ ಎಲ್ಲಾ ಸಿದ್ಧಿಗಳೂ ಕನಸಿನಂತೆ ಅಸತ್ಯ. ಆತ್ಮದ ಅರಿವು ಪಡೆದವನು ಅವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಅದ್ವೈತಿಗಳು ಅಥವಾ ಶಂಕರರ ಪಂಥದವರು ಜಗತ್ತಿನ ಅಸ್ತಿತ್ವವನ್ನು ಅಲ್ಲಗಳೆಯುವರು ಅಥವಾ ಮಿಥ್ಯೆ ಎಂದು ಹೇಳುವರು ಎನ್ನುವುದು ಖಂಡಿತ ಸರಿಯಲ್ಲ. ಬದಲಿಗೆ, ಇತರರಿಗಿಂತ ಅವರಿಗೆ ಅದು ಹೆಚ್ಚು ಸತ್ಯ. ಅವರ ಜಗತ್ತು

ಯಾವಾಗಲೂ ಇರುತ್ತದೆ. ಆದರೆ ಇತರ ಪಂಥಗಳವರ ಜಗತ್ತಿಗೆ ಹುಟ್ಟು, ಬೆಳೆವಣಿಗೆ ಮತ್ತು ಸಾವುಗಳು ಇರುತ್ತವೆ; ಆದ್ದರಿಂದ ಸತ್ಯವಾಗಿರಲು ಸಾಧ್ಯವಿಲ್ಲ. **ಅದ್ವೈತಿ**ಗಳು ಜಗತ್ತು ಜಗತ್ತಾಗಿ ಸತ್ಯವಲ್ಲ, ಜಗತ್ತು ಬ್ರಹ್ಮವಾಗಿ ಸತ್ಯವೆಂದು ಹೇಳುತ್ತಾರೆ. ಸರ್ವವೂ ಬ್ರಹ್ಮವೇ, ಬ್ರಹ್ಮನಿಲ್ಲದೆ ಬೇರೆ ಯಾವುದೂ ಇಲ್ಲ, ಬ್ರಹ್ಮನಾಗಿ ಜಗತ್ತು ಸತ್ಯ. ಮಾಯೆ ಇಲ್ಲವೆಂದು ಶಂಕರರು ಹೇಳುತ್ತಾರೆ. **ಮಾಯೆ**ಯ ಅಸ್ತಿತ್ವವನ್ನು ಅಲ್ಲಗಳೆದು ಅದನ್ನು ಮಿಥ್ಯೆ ಎಂದು ಕರೆಯುವವನನ್ನು **ಮಾಯಾವಾದಿನ್** ಎಂದು ಕರೆಯಲಾಗದು, ಅವನನ್ನು **ಮಾಯಾವಿವಾದಿನ್** ಎಂದು ಕರೆಯಬೇಕು.

'ನಾನು' 'ನಾನು' ಎಂದು ಗೊಣಗುಟ್ಟಬೇಡಿ. ಆದರೆ ಹೃದಯಾಂತರಾಳದಲ್ಲಿ ನಾನಾಗಿ ಪ್ರಕಾಶಿಸುವುದು ಯಾವುದೆಂದು ತೀವ್ರವಾಗಿ ಅನ್ವೇಷಿಸಿ. ಬಿಟ್ಟುಬಿಟ್ಟು ಬರುವ ಬಗೆಬಗೆಯ ಆಲೋಚನೆಗಳ ಹರಿವಿನ ಆಲೋಚನೆಯಲ್ಲಿ ಸತತವಾದ, ಅಖಂಡವಾದ ಅರಿವು, ಮೌನವೂ ಅನೈಚ್ಛಿಕವೂ ಆದ 'ನಾನು–ನಾನು" ಎಂಬುದು ಏಳುತ್ತದೆ. ಮಾನವನು ಅದನ್ನು ಹಿಡಿದು ಶಾಂತವಾಗಿದ್ದರೆ, ಅದು ದೇಹದಲ್ಲಿ "ನಾನು" ಎಂಬ ಭಾವನೆಯನ್ನು ಬುಡಸಮೇತ ಕಿತ್ತುಹಾಕುತ್ತದೆ; ಮತ್ತು ಉರಿಯುವ ಕರ್ಪೂರದ ಬೆಂಕಿಯಂತೆ ತಂತಾನೆ ಮಾಯವಾಗುತ್ತದೆ. ಋಷಿಮುನಿಗಳು ಮತ್ತು ಪವಿತ್ರ ಗ್ರಂಥಗಳು ಇದನ್ನು ಮುಕ್ತಿ ಎಂದು ಸಾರುತ್ತವೆ.

"ಜಗತ್ತಿನ ಎಲ್ಲ ಜೀವಿಗಳ ಹೃದಯವೆಂದು ವರ್ಣಿತವಾದ, ಯಾವುದರಲ್ಲಿ ದೊಡ್ಡ ಕನ್ನಡಿಯೊಂದರಲ್ಲಿನಂತೆ ಈ ಜಗತ್ತೆಲ್ಲವೂ ಪ್ರತಿಫಲಿತವಾಗಿ ಗ್ರಹಿಸಲಾಗಿದೆಯೋ ಅದನ್ನು ಹೇಳಿ" ಎಂದು ಪ್ರಶ್ನಿಸಿದ ರಾಮನಿಗೆ ವಸಿಷ್ಠರು ಹೇಳಿದರು: "ಶೋಧನೆಯಿಂದ ಎಲ್ಲಾ ಜೀವಿಗಳ ಹೃದಯವೂ ಎರಡು ಬಗೆ ಎಂದು ಹೇಳಲಾಗಿದೆ. ನಾನು ಹೇಳುವುದನ್ನು ಕೇಳು: ಎರಡು ಬಗೆಯ ಹೃದಯಗಳ ಲಕ್ಷಣಗಳನ್ನು – ಸ್ವೀಕಾರಾರ್ಹ ಮತ್ತು ತಿರಸ್ಕಾರಾರ್ಹ – ಚೆನ್ನಾಗಿ ತಿಳಿ. ಹೃದಯವೆಂದು ಕರೆಯಲ್ಪಟ್ಟ ಆ ಅಂಗವನ್ನು – ಅಳೆಯಬಹುದಾದ ದೇಹದ ಎದೆಯ ಒಂದು ನಿರ್ದಿಷ್ಟ ಸ್ಥಳದಲ್ಲಿರುವಂಥದನ್ನು – ತಿರಸ್ಕರಿಸಬೇಕಾದ್ದು. ಪರಿಪೂರ್ಣ ಜ್ಞಾನಸ್ವರೂಪದ ಹೃದಯ ಸ್ವೀಕಾರಾರ್ಹ. ಆ ಹೃದಯವು ಒಳಗೂ ಹೊರಗೂ ಇರುವಂಥದಾದರೂ, ಅದಕ್ಕೆ ಒಳ ಮತ್ತು ಹೊರ ಪಾರ್ಶ್ವವೆಂಬುದಿಲ್ಲ."

ಹೃದಯ ಗಹ್ವರದಲ್ಲಿ ಏಕೈಕ ಬ್ರಹ್ಮನು ಏಕಾಕಿಯಾಗಿ 'ನಾನು–ನಾನು' ಎಂದು ಸ್ವಯಂಪ್ರಕಾಶದ ಆತ್ಮನಾಗಿ ಬೆಳಗುತ್ತಿದ್ದಾನೆ. ಆತ್ಮಶೋಧನೆಯಿಂದ, ಹೃದಯಾಂತರಾಳಕ್ಕೆ ಮುಳುಗಿ, ಆತ್ಮದಲ್ಲಿ ಅಂತರ್ಗತವಾಗಿರುವ ಸ್ಥಿತಿಯನ್ನು ಸಾಕ್ಷಾತ್ಕರಿಸಿಕೊಳ್ಳಿ.

ಆ ಸತ್ಯವಸ್ತು ಇಲ್ಲದೆ, ಅಸ್ತಿತ್ವದ ಜ್ಞಾನವಿರಲು ಸಾಧ್ಯವೆ? ಆಲೋಚನೆಗಳಿಂದ ಮುಕ್ತವಾಗಿ, ಆ ಸತ್ಯವು ಎಲ್ಲಾ ಆಲೋಚನೆಗಳ ಮೂಲವಾದ ಹೃದಯದಲ್ಲಿ



ನೆಲೆಗೊಂಡಿದೆ. ಆದ್ದರಿಂದಲೇ ಅದನ್ನು ಹೃದಯವೆಂದು ಕರೆಯಲಾಗಿದೆ. ಅದನ್ನು ಅವಲೋಕಿಸುವುದು ಹೇಗೆ? ಹೃದಯದಲ್ಲಿ ಇರುವುದೇ ಅದರ ಧ್ಯಾನ.

ಶುದ್ಧ ಸತ್ತೆಯ ಭೇದ ಕಲ್ಪಿಸದ ಪ್ರಜ್ಞೆಯೇ ಹೃದಯ. ನಿಜವಾಗಿ ಇದೇ ನೀವು. ಪದದ ನಿಷ್ಪತ್ತಿ (ಹೃತ್ –ಅಯಂ = ಹೃದಯ ನಾನು) ಇದೇ. ಹೃದಯದಿಂದ 'ನಾನತ್ವ' (I-am-ness)) ಏಳುತ್ತದೆ. ಇದು ಅನುಭವದಿಂದ ತಿಳಿದ ಸಂಗತಿ. ಸ್ವತಃ ಅದು **ಶುದ್ಧ ಸತ್ತ್ವ**. ಈ **ಶುದ್ಧ ಸತ್ತ್ವ** ರೂಪದಲ್ಲೇ (ರಜಸ್ತಮೋಗುಣಗಳಿಂದ ಕಲುಷಿತವಾಗದ್ದು) 'ನಾನು' ಎನ್ನುವುದು ಜ್ಞಾನಿಯಲ್ಲಿ ಉಳಿದಿರುವಂತೆ ಕಾಣುತ್ತದೆ.

ಆತ್ಮವೆನ್ನುವುದು ಹೃದಯ, ಸ್ವಯಂಪ್ರಕಾಶ. ಪ್ರಕಾಶವು ಮನಸ್ಸಿನ ನೆಲೆಯಾದ ಹೃದಯದಿಂದ ಎದ್ದು ಮಿದುಳನ್ನು ತಲುಪುತ್ತದೆ. ಜಗತ್ತು ಮನಸ್ಸಿನಿಂದ ನೋಡಲ್ಪಡುತ್ತದೆ. ಆದ್ದರಿಂದ ನೀವು ಆತ್ಮದ ಪ್ರತಿಫಲಿತ ಬೆಳಕಿನಿಂದ ನೋಡುತ್ತೀರಿ. ಜಗತ್ತು ಮನಸ್ಸಿನ ಕ್ರಿಯೆಯಿಂದ ಗ್ರಹಿಸಲಾಗುವುದು; ಅದು ಅಷ್ಟು ಪ್ರಕಾಶಿತವಾಗದಿರುವಾಗ ಅದಕ್ಕೆ ಜಗತ್ತಿನ ಅರಿವಿರುವುದಿಲ್ಲ.

'ನಾನು' ಎನ್ನುವುದು ನಿಮ್ಮ ಶರೀರದಲ್ಲಿ ಎಲ್ಲಿ ಏಳುತ್ತದೆಂಬುದನ್ನು ನೋಡಬೇಕೆಂದು ನಿಮ್ಮನ್ನು ಕೇಳುತ್ತೇನೆ. ಆದರೆ, ಅದು ಎದೆಯ ಬಲಗಡೆಯಲ್ಲಿರುವ ಹೃದಯದಿಂದ ಎದ್ದು ಅಲ್ಲೇ ಲೀನವಾಗುತ್ತದೆಂದು ಹೇಳುವುದು ಅಷ್ಟು ಸರಿಯಲ್ಲ. ಹೃದಯವೆನ್ನುವುದು ಸತ್ಯಕ್ಕೆ ಇನ್ನೊಂದು ಹೆಸರು; ಮತ್ತು ಅದು ದೇಹದ ಒಳಗೂ ಇಲ್ಲ, ಹೊರಗೂ ಇಲ್ಲ. ಅದಕ್ಕೆ ಒಳಗು ಹೊರಗು ಇರಲು ಸಾಧ್ಯವಿಲ್ಲ. ಏಕೆಂದರೆ, ಅದು ಇತರ ಸಂಬಂಧವಿಲ್ಲದೆ ಒಂದೇ ಇದೆ. ಹೃದಯವೆಂದರೆ ಶರೀರವಿಜ್ಞಾನದಲ್ಲಿನ ಅಂಗವೆಂದಾಗಲಿ, ನರಗಳ ಜಾಲವಾಗಲಿ, ಅಥವಾ ಅಂಥದೇ ಯಾವುದಾದರೂ ಆಗಲಿ ಎಂದು ಅರ್ಥವಲ್ಲ. ಆದರೆ ದೇಹವೇ ಆತ್ಮವೆಂದು ಭಾವಿಸಿ, ತಾನು ದೇಹದೊಳಗೆ ಇರುವುದಾಗಿ ಭಾವಿಸುವನೋ, ಅಂಥವನು ದೇಹದಲ್ಲಿ 'ನಾನು' ಎಂಬ ಆಲೋಚನೆ ಎಲ್ಲಿಂದ ಬರುತ್ತದೆ ಮತ್ತು ಲೀನವಾಗುತ್ತದೆ ಎನ್ನುವುದನ್ನು ನೋಡಬೇಕು. ಅದು ಎದೆಯ ಬಲಭಾಗದಲ್ಲಿರಬೇಕು; ಏಕೆಂದರೆ ಯಾವುದೇ ಜನಾಂಗ ಅಥವಾ ಧರ್ಮಕ್ಕೆ ಸೇರಿದ ಪ್ರತಿಯೊಬ್ಬನೂ, ಅವನು ಯಾವುದೇ ಭಾಷೆಯಲ್ಲಿ 'ನಾನು' ಎಂದು ಹೇಳುತ್ತಿದ್ದರೂ, ತನ್ನನ್ನು ಸೂಚಿಸಲು ಎದೆಯ ಬಲಭಾಗವನ್ನು ತೋರಿಸುತ್ತಾನೆ. ಪ್ರಪಂಚಾದ್ಯಂತ ಹೀಗೇ ತೋರಿಸುತ್ತಾರೆ; ಆದ್ದರಿಂದ ಅದೇ ಅದರ ಸ್ಥಳವಾಗಿರಬೇಕು. ಮತ್ತು, ಜಾಗ್ರದವಸ್ಥೆಯಲ್ಲಿ ಈ ನಾನೆಂಬ ಭಾವನೆ ಪ್ರತಿನಿತ್ಯ ಏಳುವುದನ್ನೂ ಮತ್ತು ನಿದ್ರೆಯಲ್ಲಿ ಹೊರಟುಹೋಗುವುದನ್ನೂ ಗಮನವಿಟ್ಟು ನೋಡುತ್ತಾ ಅದು ಹೃದಯದ ಬಲಗಡೆ ಇದೆಯೆಂಬುದನ್ನು ತಿಳಿಯಬಹುದು.

ಬಯಕೆಯೊಂದನ್ನು ಈಡೇರಿಸಿಕೊಳ್ಳುವುದರ ಮೂಲಕ ಅದನ್ನು ಹೋಗಲಾಡಿಸುವುದಾದರೆ, ಹಾಗೆ ಮಾಡುವುದರಿಂದೇನೂ ತೊಂದರೆಯಿಲ್ಲ. ಆದರೆ

ಸಾಮಾನ್ಯವಾಗಿ ಬಯಕೆಗಳನ್ನು ತೃಪ್ತಿಪಡಿಸುವುದರ ಮೂಲಕ ಅವನ್ನು ನಿರ್ಮೂಲನ ಮಾಡಲಾಗದು. ಈ ರೀತಿಯಲ್ಲಿ ಅವನ್ನು ನಿರ್ಮೂಲನ ಮಾಡಲು ಪ್ರಯತ್ನಿಸುವುದು ಬೆಂಕಿಯನ್ನು ಆರಿಸಲು ತುಪ್ಪ ಹೊಯ್ದಂತಾಗುತ್ತದೆ. ಆಸೆಯನ್ನು ಹೋಗಲಾಡಿಸುವ ಸರಿಯಾದ ವಿಧಾನವೆಂದರೆ, 'ಯಾರಿಗೆ ಆಸೆ ಬರುತ್ತದೆ? ಅದರ ಮೂಲ ಯಾವುದು?' ಎಂದು ಪತ್ತೆಮಾಡುವುದು. ಇವುಗಳನ್ನು ಕಂಡುಕೊಂಡ ಮೇಲೆ, ಆಸೆ ನಿರ್ಮೂಲನವಾಗುತ್ತದೆ; ಮತ್ತು ಮತ್ತೆ ಹುಟ್ಟುವುದೂ ಇಲ್ಲ, ಬೆಳೆಯುವುದೂ ಇಲ್ಲ.

ಜಗತ್ತನ್ನು ನೋಡುವುದರಿಂದ **ಜೀವ**ನಿಗೆ ಆ ಹೆಸರು ಬಂದಿದೆ. ಕನಸುಗಾರ ಕನಸಿನಲ್ಲಿ ಅನೇಕ ಜೀವರನ್ನು ನೋಡುತ್ತಾನೆ; ಆದರೆ ಅವರು ಯಾರೂ ಸತ್ಯವಲ್ಲ. ಕನಸುಗಾರನೊಬ್ಬನೇ ಅಸ್ತಿತ್ವದಲ್ಲಿದ್ದು ಅವರನ್ನೆಲ್ಲಾ ನೋಡುತ್ತಾನೆ. ಆದ್ದರಿಂದ ಅದು ವ್ಯಕ್ತಿ ಮತ್ತು ಜಗತ್ತಿನ ಜತೆ ಇದೆ. ಒಂದೇ ಒಂದು ಆತ್ಮವಿದೆಯೆಂಬ ವಾದವಿದೆ; ಇದು ಒಂದು **ಜೀವ**ದ ಪ್ರತಿಪಾದನೆಯೆಂದೂ ಹೇಳಲಾಗಿದೆ. **ಜೀವ** ಎನ್ನುವುದು ಒಂದೇ ಇದ್ದು ಅದು ಇಡೀ ಜಗತ್ತನ್ನೂ ಅದರೊಳಗಿನ ಜೀವರನ್ನೂ ನೋಡುತ್ತಾನೆ ಎಂದು ಪ್ರತಿಪಾದಿಸಲಾಗಿದೆ. ಆಗ **ಜೀವ** ಎಂದರೆ ಆತ್ಮ ಎಂದರ್ಥ. ಆದರೆ ಆತ್ಮ ನೋಡುಗ ಅಲ್ಲ. ಇಲ್ಲಿ ಅವನು ಜಗತ್ತನ್ನು ನೋಡುವನು ಎಂದು ಹೇಳಿದೆ. ಆದ್ದರಿಂದ ಅವನು **ಜೀವ** ಎಂದು ಭೇದ ಕಲ್ಪಿಸಲಾಗಿದೆ.

ಜಗತ್ತು ಬಾಹ್ಯವಲ್ಲ. ಭಾವನೆಗಳಿಗೆ ಬಾಹ್ಯಮೂಲ ಇರಲು ಸಾಧ್ಯವಿಲ್ಲ; ಏಕೆಂದರೆ, ಜಗತ್ತನ್ನು ಪ್ರಜ್ಞೆಯಿಂದ ಮಾತ್ರ ಗ್ರಹಿಸಬಹುದು. ಜಗತ್ತು ತಾನು ಅಸ್ತಿತ್ವದಲ್ಲಿರುವುದಾಗಿ ತಿಳಿಸುವುದಿಲ್ಲ. ಅದು ನಿಮ್ಮ ಭಾವನೆ. ಹಾಗಾದರೂ, ಈ ಭಾವನೆಯು ಸುಸಂಗತವಾಗಿಲ್ಲ, ಮತ್ತು ಅಖಂಡವಾದುದು. ಸುಷುಪ್ತಿಯಲ್ಲಿ ಜಗತ್ತನ್ನು ಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಅದು ನಿದ್ದೆ ಮಾಡುತ್ತಿರುವವನಿಗೆ ಅಸ್ತಿತ್ವದಲ್ಲಿಲ್ಲ. ಆದ ಕಾರಣ, ಜಗತ್ತು ಅಹಮ್ಮಿನ ಪರಿಣಾಮ. ಅಹಮ್ಮನ್ನು ಅನ್ವೇಷಿಸಿ. ಅದರ ಮೂಲವನ್ನು ಕಂಡುಹಿಡಿಯುವುದು ಅಂತಿಮ ಗುರಿ.

ಸಂನ್ಯಾಸ ಮತ್ತು ಸಾಕ್ಷಾತ್ಕಾರ ಒಂದೇ. ಅವು ಒಂದೇ ಸ್ಥಿತಿಯ ಬೇರೆಬೇರೆ ಮುಖಗಳು. ಅನಾತ್ಮವನ್ನು ತೊರೆಯುವುದು ಸಂನ್ಯಾಸ. ಆತ್ಮನಲ್ಲಿ ನೆಲಸಿರುವುದು ಜ್ಞಾನ ಅಥವಾ ಆತ್ಮಸಾಕ್ಷಾತ್ಕಾರ. ಅದೇ ಸತ್ಯದ, ಏಕಮೇವ ಸತ್ಯದ ಮುಖ; ಒಂದು ನೇತ್ಯಾತ್ಮಕವಾದುದು, ಇನ್ನೊಂದು ಸಕಾರಾತ್ಮಕವಾದುದು.

ನೀವು ಮೂರು ಬಗೆಯ ಸಾಧಾರಣ ಪುರುಷರಲ್ಲಿ – ಅಂದರೆ ಅಧಮ, ಮಧ್ಯಮ ಮತ್ತು ಉತ್ತಮ ಎಂಬ ಪುರುಷರಲ್ಲಿ – ಒಬ್ಬರಾಗಬಾರದು. ಆದರೆ ಪುರುಷೋತ್ತಮರಾಗಬೇಕು. ಈ ಸ್ಥಿತಿಯನ್ನು ತಲುಪಿ, ಆ ಸ್ಥಿತಿಯನ್ನು ನೀವೇ ಸ್ವತಃ ಅನುಭವಿಸಿ, ಅದರಲ್ಲಿ ಯಾವುದಾದರು **ವೃತ್ತಿ** ಇದೆಯೋ ಎಂದು



ಪರಿಶೀಲಿಸಬೇಕು. ನಾವು ಕೆಲವು ವೇಳೆ ಮಾಡುವಂತೆ, **ಬ್ರಹ್ಮಕರ ವೃತ್ತಿ**ಯ ಬಗ್ಗೆ ಮಾತನಾಡುವುದೂ ಯಥಾರ್ಥವಲ್ಲ. ಸಾಗರದಲ್ಲಿ ಲೀನವಾದ ನದಿಯ ಬಗ್ಗೆ ನಾವು, ಇನ್ನೂ ನದಿಯೆಂದೇ ಭಾವಿಸಿ, **ಸಮುದ್ರಕರ ನದಿ** ಎಂದು ಕರೆದರೆ, ಆಧ್ಯಾತ್ಮಿಕ ಪ್ರಗತಿಯ ಅಂತಿಮ ಹಂತವನ್ನು **ಬ್ರಹ್ಮಕರ ವೃತ್ತಿ** ಎಂದು ಕರೆಯಬಹುದು.

ಭೂತವೂ ಇಲ್ಲ, ಭವಿಷ್ಯವೂ ಇಲ್ಲ. ಇರುವುದು ವರ್ತಮಾನ ಮಾತ್ರ. ನೆನ್ನೆಯು ನೀವು ಅನುಭವಿಸಿದಾಗ ವರ್ತಮಾನವಾಗಿತ್ತು, ಮತ್ತು ನಾಳೆಯು ನೀವು ಅನುಭವಿಸುವಾಗ ವರ್ತಮಾನವಾಗಿರುತ್ತದೆ. ಆದ್ದರಿಂದ ಅನುಭವವು ವರ್ತಮಾನದಲ್ಲಿ ಮಾತ್ರ ನಡೆಯುತ್ತದೆ; ಮತ್ತು ಅನುಭವದಾಚೆ ಏನೂ ಇಲ್ಲ.

ನೋಡುವ ಕಣ್ಣು ಮಾಂಸದ ಕಣ್ಣಾದರೆ, ಆಗ ಪ್ರಾಪಂಚಿಕ ಆಕಾರಗಳು ಕಾಣುವುವು. ಆ ಕಣ್ಣಿಗೆ ಯವದ ಸಹಾಯ ದೊರೆತರೆ, ಸಾಧಾರಣ ಕಣ್ಣಿಗೆ ಕಾಣದ ವಸ್ತುಗಳಿಗೂ ಆಕಾರವಿರುವಂತೆ ಕಾಣುತ್ತದೆ; ಮನಸ್ಸು ಕಣ್ಣಾದರೆ, ಆಗ ಸೂಕ್ಷ್ಮರೂಪಗಳು ಕಾಣುತ್ತವೆ. ಹೀಗೆ ನೋಡುವ ಕಣ್ಣು ಮತ್ತು ನೋಡಲ್ಪಟ್ಟ ವಸ್ತುಗಳು ಒಂದೇ ಸ್ವರೂಪದವು; ಅಂದರೆ, ಕಣ್ಣುಗಳೇ ಒಂದು ಆಕಾರದವಾದರೆ, ಅವು ಆಕಾರ, ರೂಪಗಳನ್ನು ಬಿಟ್ಟು ಬೇರೇನನ್ನೂ ಕಾಣವು. ಆದರೆ ಭೌತಿಕ ಕಣ್ಣಿಗಾಗಲಿ ಮನಸ್ಸಿಗಾಗಲಿ ತಮಗೇ ಆದ ದೃಷ್ಟಿಶಕ್ತಿ ಇಲ್ಲ. ನಿಜವಾದ ಕಣ್ಣು ಆತ್ಮ; ಏಕೆಂದರೆ ಆ ಭಗವಂತ ನಿರಾಕಾರ; ಶುದ್ಧನೂ ಅನಂತ ಚೇತನನೂ, ಸತ್ಯನೂ ಆದುದರಿಂದ ಅವನಿಗೆ ಆಕಾರಗಳು ಕಾಣುವುದಿಲ್ಲ.

ರಾಮ ಎಂಬ ಹೆಸರಿನ ಮಹತ್ತ್ವದ ಬಗ್ಗೆ ಹೇಳುವುದಾದರೆ, 'ರಾ' ಎಂಬುದು ಆತ್ಮವನ್ನೂ, 'ಮ' ಎನ್ನುವುದು 'ಅಹಂ' ಅನ್ನೂ ಸೂಚಿಸುತ್ತವೆ. ಒಬ್ಬನು 'ರಾಮ' 'ರಾಮ' ಎಂದು ಒಂದೇ ಸಮನಾಗಿ ಉಚ್ಚರಿಸುತ್ತಾ ಇದ್ದರೆ, 'ಮ' ಎಂಬುದು ಮಾಯವಾಗುತ್ತದೆ. ಆ ಸ್ಥಿತಿಯಲ್ಲಿ ಬುದ್ಧಿಪೂರ್ವಕ 'ಧ್ಯಾನ'ದ ಪ್ರಯತ್ನವಿರುವುದಿಲ್ಲ; ಏಕೆಂದರೆ **ಧ್ಯಾನ** ಎನ್ನುವುದು ನಮ್ಮ ಸಹಜ ಪ್ರಕೃತಿ.

ನಿಜವಾದ ಪುನರ್ಜನ್ಮವೆಂದರೆ **ಅಹಂ** ಎನ್ನುವುದು ಅಳಿದು ಆತ್ಮನನ್ನು ಸೇರುತ್ತದೆ. ಇದು ಏಸುವಿನ ಕ್ರೂಶಾರೋಹಣದ ಅರ್ಥ. ದೇಹಾತ್ಮಭಾವವಿದ್ದರೆ, ಈ ಜನ್ಮದಲ್ಲಾಗಲಿ ಮುಂದಿನದರಲ್ಲಾಗಲಿ ದೇಹ ಯಾವಾಗಲೂ ಲಭ್ಯವಾಗುತ್ತದೆ; ಇದು ದೇಹಾತ್ಮಭಾವ ಅಳಿದು, ಅದರ ಮೂಲದಲ್ಲಿ – ಅಂದರೆ ಆತ್ಮದಲ್ಲಿ – ಲೀನವಾಗುವವರೆಗೆ ಇರುತ್ತದೆ.

ಶಾಸ್ತ್ರಗಳ ಸಾರವನ್ನು ಅರಿತ ಮೇಲೆ ಅವು ನಿಷ್ಪ್ರಯೋಜಕವಾಗುತ್ತವೆ. ವೇದಾದಿ ಧರ್ಮಗ್ರಂಥಗಳು 'ಉಚ್ಚ ಶಕ್ತಿ'ಯ (ಆತ್ಮದ) ಅಸ್ತಿತ್ವವನ್ನು ತೋರಲು ಮತ್ತು ಅದನ್ನು ತಲುಪುವ ಮಾರ್ಗವನ್ನು ತೋರಿಸಲು ಉಪಯುಕ್ತ, ಅಷ್ಟೆ. ಸಾರವನ್ನು ಗ್ರಹಿಸಿ ಅರಗಿಸಿಕೊಂಡ ಮೇಲೆ ಉಳಿದದ್ದೆಲ್ಲಾ ವ್ಯರ್ಥ. ಒಬ್ಬನು

ಶ್ರೇಣಿಯಲ್ಲಿ ಮೇಲೇರಿದಂತೆ, ತಾನು ದಾಟಿರುವ ಹಂತಗಳು ಉನ್ನತ ಮಟ್ಟಕ್ಕೆ ಸೋಪಾನಗಳು ಎಂದು ಮೊದಲಾದ್ದಾಗಿ ಭಾವಿಸುತ್ತಾನೆ. ಆ ಗುರಿಯನ್ನು ತಲುಪಿದಾಗ, ಅದು ಒಂದೇ ಇರುತ್ತದೆ. ಉಳಿದದ್ದೆಲ್ಲ ಅವನಿಗೆ ನಿಷ್ಪ್ರಯೋಜಕವಾಗುತ್ತವೆ. ಶಾಸ್ತ್ರಗಳು ನಿಷ್ಪ್ರಯೋಜಕವಾಗುವ ಹಂತ ಅದು.

ಸಾಕ್ಷಾತ್ಕಾರದ ಮಾತಾಡುವುದು ತಪ್ಪು. ಸಾಕ್ಷಾತ್ಕಾರ ಮಾಡಿಕೊಳ್ಳುವಂಥದು ಏನಿದೆ? ಸತ್ಯವಾದದ್ದು ಸದಾ ಸತ್ಯವೇ. ಅದನ್ನು ಸಾಕ್ಷಾತ್ಕರಿಸಿಕೊಳ್ಳುವುದು ಹೇಗೆ? ಅದಕ್ಕೆ ಬೇಕಾದದ್ದು ಇಷ್ಟೇ. ನಾವು ಮಿಥ್ಯೆಯನ್ನು ಸಾಕ್ಷಾತ್ಕರಿಸಿಕೊಂಡಿದ್ದೇವೆ. ಅಂದರೆ ಮಿಥ್ಯೆಯನ್ನು ಸತ್ಯವೆಂದು ಅರಿತಿದ್ದೇವೆ. ನಾವು ಈ ಭಾವನೆಯನ್ನು ಬಿಟ್ಟುಬಿಡಬೇಕು. **ಜ್ಞಾನ** ಸಂಪಾದಿಸಲು ನಾವು ಮಾಡಬೇಕಾಗಿರುವುದು ಇಷ್ಟೇ, ನಾವು ಹೊಸತಾದುದೇನನ್ನೂ ಸೃಷ್ಟಿಸುತ್ತಿಲ್ಲ; ಇಲ್ಲವೆ ಹಿಂದೆ ನಮ್ಮಲ್ಲಿಲ್ಲದ ಯಾವುದನ್ನೇ ಸಂಪಾದಿಸುತ್ತಿಲ್ಲ. ನಾವು ಬಾವಿ ಅಗೆದು ಒಂದು ಹಳ್ಳ ಮಾಡುತ್ತೇವೆ. ಹಳ್ಳದ ಅಥವಾ ಬಾವಿಯ **ಆಕಾಶ** ನಾವು ಸೃಷ್ಟಿಸಿದ್ದಲ್ಲ. ಆ **ಆಕಾಶ**ವನ್ನು ಮುಚ್ಚಿಕೊಂಡಿದ್ದ ಮಣ್ಣನ್ನು ತೆಗೆದುಹಾಕಿದ್ದೇವೆ ಅಷ್ಟೆ. **ಆಕಾಶ**ವು ಆಗಲೂ ಅಲ್ಲಿತ್ತು, ಮತ್ತು ಈಗಲೂ ಇದೆ. ಅಂತೆಯೇ ನಮ್ಮಲ್ಲಿರುವ, ಓಬೀರಾಯನ ಕಾಲದಿಂದ ಬಂದ **ಸಂಸ್ಕಾರ**ಗಳನ್ನೆಲ್ಲಾ ಬಿಸಾಡಬೇಕು, ಅಷ್ಟೆ. ಅವನ್ನೆಲ್ಲಾ ತೊರೆದುಬಿಟ್ಟಾಗ, ಆತ್ಮವೊಂದೇ ಪ್ರಕಾಶಮಾನವಾಗಿರುತ್ತದೆ.

ನಾವೇ ಸ್ವತಃ ಸತ್ಯವಾಗಿರುವಾಗ, ಸತ್ಯವನ್ನರಸುವಂಥ ನಿಗೂಢ ತತ್ತ್ವ ಬೇರೊಂದಿಲ್ಲ. ನಮ್ಮ ಸತ್ಯವನ್ನು ನಿರ್ಬಂಧಿಸುವ ಯಾವುದೋ ಒಂದು ಇದೆಯೆಂದು ಭಾವಿಸಿ, ಅದನ್ನು ನಾಶಗೊಳಿಸಬೇಕೆಂದು ಭಾವಿಸಿದ್ದೇವೆ. ಇದು ಹಾಸ್ಯಾಸ್ಪದ. ನಾವು ನಮ್ಮ ಈ ಪ್ರಯತ್ನಗಳ ಬಗ್ಗೆ ಅಪಹಾಸ್ಯ ಮಾಡುವ ದಿನವೊಂದು ಬರುತ್ತದೆ. ಹಾಗೆ ನಗುವ ದಿನ ಇಂದೇ ಆಗಿದೆ.

'ನಾನು ಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲೆನೆ?' ಎಂಬ ಸಂಶಯವೇ ಅಥವಾ 'ನಾನು ಸಾಕ್ಷಾತ್ಕಾರ ಮಾಡಿಕೊಂಡಿಲ್ಲ' ಎಂಬ ಭಾವನೆಯೇ ಸಾಕ್ಷಾತ್ಕಾರಕ್ಕೆ ಅಡಚಣೆ. ಸಾಕ್ಷಾತ್ಕಾರ ಎನ್ನುವುದು ಹೊಸದಾಗಿ ಪಡೆಯುವಂಥ ಒಂದು ವಸ್ತುವಲ್ಲ. ಆತ್ಮವನ್ನು ಆಗಲೇ ಸಾಕ್ಷಾತ್ಕರಿಸಿಕೊಂಡು ಆಗಿದೆ. ಈಗ ಆಗಬೇಕಾಗಿರುವುದು 'ನನಗೆ ಸಾಕ್ಷಾತ್ಕಾರವಾಗಿಲ್ಲ' ಎಂಬ ಭಾವನೆಯನ್ನು ತೊಲಗಿಸುವುದು.

* * * *



## ಮಾತುಕತೆ

ಭಕ್ತ : ಆನಂದದ ಸ್ವರೂಪವನ್ನು ದಯವಿಟ್ಟು ತಿಳಿಸಿ.

ಶ್ರೀ ರಮಣ ಮಹರ್ಷಿ : ಒಬ್ಬ ವ್ಯಕ್ತಿಯು ತನ್ನ ಸಂತೋಷಕ್ಕೆ ಕಾರಣ ಬಾಹ್ಯಕಾರಣಗಳು ಮತ್ತು ತನ್ನ ಸಿರಿಸಂಪತ್ತುಗಳು ಎಂದು ಭಾವಿಸಿದರೆ, ಆಗ ಅವನ ಸಂತೋಷವು ಸಿರಿಸಂಪತ್ತುಗಳಿಂದ ಹೆಚ್ಚಬೇಕು, ಮತ್ತು ಅವುಗಳು ಕಡಮೆಯಾದರೆ ಸಂತೋಷವೂ ಕಡಮೆಯಾಗಬೇಕು ಎಂಬ ತೀರ್ಮಾನಕ್ಕೆ ಬರುವುದು ಯುಕ್ತಿಯುಕ್ತವಾಗಿದೆ. ಆದ್ದರಿಂದ ಅವನಲ್ಲಿ ಸಿರಿಸಂಪತ್ತುಗಳು ಇಲ್ಲದಿದ್ದರೆ ಅವನ ಸಂತೋಷ ಶೂನ್ಯವಾಗಬೇಕು. ಮಾನವನ ಅನುಭವಕ್ಕೆ ಬಂದಿರುವ ವಿಷಯವೇನು? ಅದು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆಯೆ? ಸುಷುಪ್ತಿಯಲ್ಲಿ, ಮನುಷ್ಯನಿಗೆ ತನ್ನ ದೇಹವೂ ಸೇರಿದಂತೆ ಯಾವ ಸಿರಿಸಂಪತ್ತೂ ಇರುವುದಿಲ್ಲ. ಆಗ ಅವನು ದುಃಖಿತನಾಗಿರುವ ಬದಲು ತುಂಬಾ ಸಂತೋಷವಾಗಿಯೇ ಇರುತ್ತಾನೆ. ಪ್ರತಿಯೊಬ್ಬರೂ ಚೆನ್ನಾಗಿ ನಿದ್ದೆ ಮಾಡಬೇಕೆಂದು ಇಷ್ಟಪಡುತ್ತಾರೆ. ಇದರಿಂದ ಹೊಮ್ಮುವ ತೀರ್ಮಾನವೆಂದರೆ ಸಂತೋಷವೆನ್ನುವುದು ಮಾನವನಲ್ಲಿ ಅಂತರ್ಗತವಾದುದು; ಅದು ಬಾಹ್ಯ ಕಾರಣಗಳಿಂದ ಬರುವಂಥದಲ್ಲ. ಪರಿಶುದ್ಧವಾದ ಸಂತೋಷದ ಭಂಡಾರವನ್ನು ತೆರೆಯಲು ಒಬ್ಬನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಆನಂದವೆನ್ನುವುದು ನಿಮ್ಮದೇ ಸಹಜಸ್ವಭಾವ. ಆದ್ದರಿಂದ ಅದನ್ನು ಬಯಸುವುದು ತಪ್ಪಲ್ಲ. ತಪ್ಪು ಯಾವುದೆಂದರೆ, ಅದನ್ನು ಹೊರಗಡೆ ಅರಸುವುದು; ಏಕೆಂದರೆ ಅದು ಒಳಗೇ ಇದೆ.

ಭಕ್ತ : **ಕರ್ಮ**ಕ್ಕೆ ಎಂದಾದರೂ ಕೊನೆ ಇದೆಯೆ?

ಶ್ರೀ ರ.ಮ. : ಕರ್ಮಗಳಲ್ಲಿ ತಮ್ಮನ್ನು ನಾಶವಾಡಿಕೊಳ್ಳುವ ಬೀಜಗಳಿರುತ್ತವೆ.

ಭಕ್ತ : ಪ್ರತ್ಯಕ್ಷ ಜ್ಞಾನದ ಸ್ವರೂಪದ ಬಗ್ಗೆ ದಯವಿಟ್ಟು ತಿಳಿಸಿ.

ಶ್ರೀ ರ.ಮ. : ಒಬ್ಬನು ಯಾವುದೇ ಸ್ಥಿತಿಯಲ್ಲಿದ್ದರೂ ಪ್ರತ್ಯಕ್ಷಗ್ರಹಿಕೆಗಳು ಆ ಸ್ಥಿತಿಯನ್ನು ತಳೆಯುತ್ತವೆ. ವಿವರಣೆ ಏನೆಂದರೆ, ಜಾಗ್ರದವಸ್ಥೆಯಲ್ಲಿ ಸ್ಥೂಲ ಶರೀರವು ಸ್ಥೂಲ ನಾಮಗಳನ್ನೂ, ರೂಪಗಳನ್ನೂ ಗ್ರಹಿಸುತ್ತದೆ; ಸ್ವಪ್ನಾವಸ್ಥೆಯಲ್ಲಿ ಮನೋಕಾಯವು ಮಾನಸಿಕ ಸೃಷ್ಟಿಗಳನ್ನೂ ಅವುಗಳ ನಾನಾರೂಪಗಳಲ್ಲಿ ಗ್ರಹಿಸುತ್ತದೆ; ಸುಷುಪ್ತಿಯಲ್ಲಿ ದೇಹಾತ್ಮಭಾವ ಹೊರಟುಹೋಗಿರುವುದರಿಂದ ಗ್ರಹಿಕೆಗಳೇ ಇರುವುದಿಲ್ಲ. ಅಂತೆಯೇ ದಿವ್ಯ ಅಥವಾ ಅಲೌಕಿಕ ಸ್ಥಿತಿಯಲ್ಲಿ ಬ್ರಹ್ಮನೊಂದಿಗೆ ಅಭೇದವು ಆ ವ್ಯಕ್ತಿಯನ್ನು ಎಲ್ಲದರೊಂದಿಗೆ ಸಮರಸವಾಗಿ ಇಡುತ್ತದೆ; ಆಗ ಆತ್ಮವನ್ನು ಹೊರತುಪಡಿಸಿ ಬೇರಾವುದೂ ಇರುವುದಿಲ್ಲ.

ಪಾಲ್ ಬ್ರಂಟನ್ : ಈ ಮಲೆ (ತಿರುವಣ್ಣಾಮಲೆ) ಪೊಳ್ಳೆ?

ಶ್ರೀ ರ.ಮ. : ಪುರಾಣಗಳು ಹಾಗೆ ಹೇಳುತ್ತವೆ. ಹೃದಯವನ್ನು ಕುಹರ ಎಂದು ಕರೆಯಲಾಗಿದೆ; ಅದರಲ್ಲಿ ಒಳಹೊಕ್ಕರೆ ಅದು ವಿಶಾಲ ಪ್ರದೇಶವೆಂದು ಮನವರಿಕೆಯಾಗುತ್ತದೆ. ಅದೇ ರೀತಿ ಈ ಮಲೆ ಪ್ರಕಾಶಮಯ.

ಪಾಲ್ ಬ್ರಂಟನ್ : ಒಳಗಡೆ ಗುಹೆಗಳಿವೆಯೆ?

ಶ್ರೀ ರ.ಮ. : ಅಂತರ್ದೃಷ್ಟಿಗಳಲ್ಲಿ, ನಾನು ಗುಹೆಗಳು, ಹಾದಿಬೀದಿಗಳುಳ್ಳ ನಗರಗಳು ಮೊದಲಾದವನ್ನು ಮತ್ತು ಇಡೀ ಜಗತ್ತನ್ನೇ ನೋಡಿದ್ದೇನೆ.

ಪಾಲ್ ಬ್ರಂಟನ್ : ಅಲ್ಲಿ ಸಿದ್ಧರಿದ್ದಾರೆಯೆ?

ಶ್ರೀ ರ.ಮ. : ಎಲ್ಲಾ ಸಿದ್ಧರೂ ಅಲ್ಲಿದ್ದಾರೆಂದು ಹೇಳಲಾಗಿದೆ.

ಪಾಲ್ ಬ್ರಂಟನ್ : ಈ ಜಗತ್ತಿನಂತೆ?

ಒಬ್ಬ ಸಂದರ್ಶಕ : ಸಿದ್ಧರು ಹಿಮಾಲಯದಲ್ಲಿ ಇದ್ದಾರೆಂದು ಹೇಳುತ್ತಾರೆ.

ಶ್ರೀ ರ.ಮ. : ಕೈಲಾಸ ಪರ್ವತ ಹಿಮಾಲಯ ಪರ್ವತದಲ್ಲಿದೆ. ಅದು ಶಿವನ ತಾಣ. ಆದರೆ ಈ ಮಲೆಯೇ ಸಾಕ್ಷಾತ್ ಶಿವ. ಅವನ ಧಾಮದ ಸಕಲ ಸಾಧನಸಾಮಗ್ರಿಗಳೂ ಅವನೇ



ಸ್ವತಃ ನೆಲೆಸಿರುವ ಕಡೆ ಇರಲೇಬೇಕು.

ಪಾಲ್ ಬ್ರಂಟನ್ : ಈ ಮಲೆಯು ಪೊಳ್ಳು ಎಂಬ ಅಭಿಪ್ರಾಯವನ್ನು ಮಹರ್ಷಿಗಳು ನಂಬುವರೆ?

ಶ್ರೀ ರ.ಮ. : ಪ್ರತಿಯೊಂದೂ ವೈಯಕ್ತಿಕ ದೃಷ್ಟಿಕೋನವನ್ನವಲಂಬಿಸಿದೆ. ಸ್ವತಃ ನೀವೇ ನಿಮ್ಮ ಪುಸ್ತಕದಲ್ಲಿ ವಿವರಿಸಿರುವಂತೆ ಈ ಮಲೆಯಲ್ಲಿ ಋಷ್ಯಾಶ್ರಮಗಳನ್ನು ನೋಡಿದ್ದೀರಿ.

ಪಾಲ್ ಬ್ರಂಟನ್ : ಹೌದು; ಆದರೆ ಅದು ಮಲೆಯ ಮೇಲ್ಮೈಯಲ್ಲಿ; ಆ ದೃಷ್ಟಿ ನನ್ನೊಳಗೆ ಇತ್ತು.

ಶ್ರೀ ರ.ಮ. : ನೀವು ಹೇಳಿದಂತೆಯೇ. ಪ್ರತಿಯೊಂದೂ ಒಬ್ಬನ ಒಳಗೇ ಇದೆ. ಲೋಕವನ್ನು ನೋಡಬೇಕಾದರೆ, ನೋಡುಗನೊಬ್ಬ ಇರಲೇಬೇಕು. ಆತ್ಮವಿಲ್ಲದೆ ಜಗತ್ತಿರಲು ಸಾಧ್ಯವಿಲ್ಲ. ಆತ್ಮವು ಸರ್ವಾಂತರ್ಯಾಮಿ. ವಾಸ್ತವವಾಗಿ ಎಲ್ಲವೂ ಆತ್ಮವೇ. ಆತ್ಮದ ಹೊರತಾಗಿ ಯಾವುದೂ ಇಲ್ಲ.

ಪಾಲ್ ಬ್ರಂಟನ್ : ಈ ಮಲೆಯ ರಹಸ್ಯವೇನು?

ಶ್ರೀ ರ.ಮ. : ಈ ಮಲೆಯ ರಹಸ್ಯ ಆತ್ಮದ ರಹಸ್ಯವೇ.

ಭಕ್ತ : ಆತ್ಮಸಾಕ್ಷಾತ್ಕಾರದ ಉದ್ದೇಶವೇನು?

ಶ್ರೀ ರ.ಮ. : ಆತ್ಮಸಾಕ್ಷಾತ್ಕಾರವೇ ಪರಮ ಪುರುಷಾರ್ಥ ಮತ್ತು ಅದೇ ಅದರ ಉದ್ದೇಶ.

ಭಕ್ತ : ಅಂದರೆ, ಅದರಿಂದೇನು ಉಪಯೋಗ?

ಶ್ರೀ ರ.ಮ. : ನೀವು ಏಕೆ ಆತ್ಮಸಾಕ್ಷಾತ್ಕಾರದ ಬಗ್ಗೆ ಕೇಳುವಿರಿ? ನಿಮ್ಮ ಈಗಿನ ಸ್ಥಿತಿಯ ಬಗ್ಗೆ ಏಕೆ ತೃಪ್ತರಾಗಿಲ್ಲ? ನೀವು ಅತೃಪ್ತರಾಗಿದ್ದೀರಿ ಎಂಬುದು ಕಂಡಂತೆಯೇ ಇದೆ; ಮತ್ತು ನೀವು ಆತ್ಮಸಾಕ್ಷಾತ್ಕಾರ ಮಾಡಿಕೊಂಡರೆ ನಿಮ್ಮ ಅತೃಪ್ತಿ ಕೊನೆಗೊಳ್ಳುವುದು.

ಭಕ್ತ : ಈ ಪ್ರಕ್ರಿಯೆಯ ಗುರಿ ಏನು?

ಶ್ರೀ ರ.ಮ. : ಸತ್ಯವಾದುದನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು.

ಭಕ್ತ : ಆ ಸತ್ಯದ ಸ್ವರೂಪವೇನು?

ಶ್ರೀ ರ.ಮ. : ಎ) ಆದಿಯಾಗಲಿ ಅಂತ್ಯವಾಗಲಿ ಇಲ್ಲದ ಅಸ್ತಿತ್ವ – ನಿತ್ಯತ್ವ; ಬಿ) ಎಲ್ಲ ಕಡೆ ಇರುವುದು, ಅನಂತ;

ಸಿ) ಎಲ್ಲಾ ಆಕಾರ, ಎಲ್ಲಾ ಬದಲಾವಣೆಗಳು, ಎಲ್ಲಾ ಬಲಗಳು, ಎಲ್ಲಾ ವಸ್ತು ಮತ್ತು ಚೇತನಗಳ ಆಧಾರವಾದ ಅಸ್ತಿತ್ವ;

ಡಿ) ಜ್ಞಾತೃ, ಜ್ಞಾನ ಮತ್ತು ಜ್ಞಾತ – ಈ ಮುಕ್ಕೂಟವನ್ನು ನೆಲೆತಪ್ಪಿಸುವಂಥದು. ಈ ತ್ರಿಕಗಳು ಕಾಲ ದೇಶಗಳಲ್ಲಿ ಕೇವಲ ತೋರ್ಕೆಗಳು. ಆದರೆ ಸತ್ಯವು ಅವುಗಳ ಆಚೆ ಮತ್ತು ಹಿಂದೆ ಇದೆ. ಅವು ಸತ್ಯದ ಮೇಲಿನ ಮರೀಚಿಕೆಯಂತೆ. ಅವು ಭ್ರಮೆಯ ಫಲಗಳು.

ಭಕ್ತ : ನಾನೂ ಕೂಡ ಮಾಯೆಯಾದರೆ, ಈ ಮಾಯೆಯನ್ನು ಯಾರು ತೊಲಗಿಸುತ್ತಾರೆ?

ಶ್ರೀ ರ.ಮ. : ಸತ್ಯವಾದ 'ನಾನು' ಮಿಥ್ಯೆಯಾದ 'ನಾನು' ಎಂಬುದನ್ನು ತೊಲಗಿಸಿಯೂ ಏಕೈಕ 'ನಾನು' ಆಗಿ ಉಳಿಯುತ್ತದೆ. ಆತ್ಮಸಾಕ್ಷಾತ್ಕಾರದ ವಿರೋಧಾಭಾಸ ಹೀಗಿದೆ. ಸಾಕ್ಷಾತ್ಕಾರ ಮಾಡಿಕೊಂಡವನು ಅದರಲ್ಲಿ ಯಾವ ವಿರೋಧವನ್ನೂ ಕಾಣನು.

ಭಕ್ತ : ನಾವು ಈ ಸಂಧಿಕಾಲದಲ್ಲಿರುವುದರಿಂದ ಜಗತ್ತಿನ ಭವಿಷ್ಯದ ಬಗ್ಗೆ ಮಹರ್ಷಿಗಳು ಅಭಿಪ್ರಾಯ ನೀಡುವರೆ?

ಶ್ರೀ ರ.ಮ. : ನೀವು ಏಕೆ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಳ್ಳಬೇಕು? ನಿಮಗೆ ವರ್ತಮಾನವೇ ಸರಿಯಾಗಿ ಗೊತ್ತಿಲ್ಲ. ವರ್ತಮಾನದ ಕಡೆ ಗಮನಕೊಡಿ; ಆಗ ಭವಿಷ್ಯ ತನ್ನನ್ನು ತಾನು ನೋಡಿಕೊಳ್ಳುತ್ತದೆ.

ಭಕ್ತ : ಶೀಘ್ರವಾಗಿ ಈ ಜಗತ್ತು ಸ್ನೇಹಶೀಲತೆ ಹಾಗೂ ಪರಸ್ಪರ ನೆರವು ನೀಡುವ ಹೊಸ ಯುಗವನ್ನು ಪ್ರವೇಶಿಸುವುದೆ, ಇಲ್ಲವೆ ಸಂಪೂರ್ಣ ಅವ್ಯವಸ್ಥೆ ಮತ್ತು ಯುದ್ಧಗಳಿಂದ ಹಾಳಾಗುವುದೆ?

ಶ್ರೀ ರ.ಮ. : ಈ ಜಗತ್ತಿನ ನಿಯಾಮಕ ಒಬ್ಬನಿದ್ದಾನೆ; ಅವನು ಈ ಜಗತ್ತನ್ನು ನೋಡಿಕೊಳ್ಳುತ್ತಾನೆ. ಈ ಜಗತ್ತಿಗೆ ಬದುಕನ್ನು ನೀಡಿದವನಿಗೆ ಅದರ ಯೋಗಕ್ಷೇಮ ಹೇಗೆ ನೋಡಿಕೊಳ್ಳಬೇಕೆಂಬುದೂ ಗೊತ್ತು.



ಭಕ್ತ : ಆದರೂ ಪೂರ್ವಾಗ್ರಹಗಳಿಲ್ಲದ ಕಣ್ಣುಗಳಿಂದ ಸುತ್ತಲೂ ನೋಡಿದರೆ, ಈ ಉಪಕಾರಬುದ್ಧಿ ಎಲ್ಲಿ ಬರುತ್ತದೆಂಬುದು ನೋಡುವುದು ಕಷ್ಟ.

ಶ್ರೀ ರ.ಮ.: : ನೀವು ಹೇಗಿದ್ದೀರೋ ಹಾಗೆ ಜಗತ್ತು. ನಿಮ್ಮನ್ನು ನೀವು ಅರಿತುಕೊಳ್ಳದೆ, ಜಗತ್ತನ್ನು ಅರಿಯಲು ಪ್ರಯತ್ನಿಸುವುದರಿಂದ ಏನು ಪ್ರಯೋಜನ? ಸತ್ಯಾನ್ವೇಷಿಗಳು ಈ ಪ್ರಶ್ನೆಯನ್ನು ಪರಿಗಣಿಸಬೇಕಾಗಿಲ್ಲ. ಜನರು ಇಂಥ ಪ್ರಶ್ನೆಗಳ ಬಗ್ಗೆ ತಮ್ಮ ಶಕ್ತಿಯನ್ನು ಅಪವ್ಯಯ ಮಾಡುವರು. ಮೊದಲು ನಿಮ್ಮ ಹಿಂದಿನ ಸತ್ಯವನ್ನು ಶೋಧಿಸಿ; ಆಗ ನೀವೂ ಒಂದು ಭಾಗವಾಗಿರುವ ಜಗತ್ತಿನ ಸತ್ಯದ ಬಗ್ಗೆ ಅರಿಯಲು ಉತ್ತಮ ಸ್ಥಾನದಲ್ಲಿರುವಿರಿ.
ದೇಹವು ಮೊದಲಿಗೆ ಅಸ್ತಿತ್ವಕ್ಕೆ ಬಂದಾಗ ಅದರ ಮುಂದಿನ ಕಾರ್ಯಚಟುವಟಿಕೆಗಳೆಲ್ಲವೂ ನಿರ್ಧರಿತವಾಗಿರುತ್ತವೆ. ಅವನ್ನು ಸ್ವೀಕರಿಸುವುದು ಅಥವಾ ತಿರಸ್ಕರಿಸುವುದು ನಿಮ್ಮ ಕೈಯಲ್ಲಿಲ್ಲ.

ಆರ್ಥರ್ ಆಸ್ಬೊರ್ನ್ : ಒಬ್ಬನ ಬದುಕಿನ ಪ್ರಮುಖ ಘಟನಾವಳಿಗಳು ಮಾತ್ರ – ಉದಾಹರಣೆಗೆ ಅವನ ಪ್ರಧಾನ ವೃತ್ತಿ – ಪೂರ್ವನಿರ್ಧಾರಿತವೆ? ಅಥವಾ ಒಂದು ಲೋಟ ನೀರು ಕುಡಿಯುವುದು, ಕೋಣೆಯ ಒಂದು ಭಾಗದಿಂದ ಇನ್ನೊಂದಕ್ಕೆ ಹೋಗುವಂಥ ಕ್ಷುಲ್ಲಕವಾದ ಕೆಲಸ ಕಾರ್ಯಗಳೂ ಪೂರ್ವನಿರ್ಧಾರಿತವೆ?

ಭಗವಾನ್ : ಪ್ರತಿಯೊಂದೂ ಪೂರ್ವನಿರ್ಧಾರಿತ.

ಆರ್ಥರ್ ಆಸ್ಬೊರ್ನ್ : ಹಾಗಾದರೆ ಮಾನವನಿಗೆ ಯಾವ ಜವಾಬುದಾರಿ ಇದೆ, ಎಷ್ಟು ಸ್ವಾತಂತ್ರ್ಯವಿದೆ?

ಭಗವಾನ್ : ದೇಹ ಏಕೆ ಅಸ್ತಿತ್ವಕ್ಕೆ ಬರುತ್ತದೆ? ಈ ಜನ್ಮದಲ್ಲಿ ನಾನಾ ಕೆಲಸಕಾರ್ಯಗಳು ಅದರಿಂದಾಗಬೇಕೆಂದು ಪೂರ್ವ ನಿಯೋಜಿತವಾಗಿದೆ. ಸ್ವಾತಂತ್ರ್ಯದ ಬಗ್ಗೆ ಹೇಳುವುದಾದರೆ, ಒಬ್ಬನಿಗೆ ದೇಹವೇ ಆತ್ಮವೆಂದು ಭಾವಿಸದೆ ಇರಲು, ಮತ್ತು ಅದರ ಕಾರ್ಯ ಚಟುವಟಿಕೆಗಳಿಂದ ಒದಗುವ ಸುಖದುಃಖಗಳಿಂದ ಪ್ರಭಾವಿತವಾಗದೆ ಇರಲು ಯಾವಾಗಲೂ ಸ್ವಾತಂತ್ರ್ಯವಿದೆ.

ಭಕ್ತ : ಮನುಷ್ಯನಿಗೆ ಏನಾದರೂ ಸ್ವಾತಂತ್ರ್ಯವಿದೆಯೆ? ಇಲ್ಲವೆ ಅವನ ಬದುಕಿನ ಎಲ್ಲವೂ ಪೂರ್ವನಿರ್ಧಾರಿತವೆ?

ಭಗವಾನ್ : ಸಂಕಲ್ಪ ಸ್ವಾತಂತ್ರ್ಯವು ವೈಯಕ್ತಿಕತೆಯ ಜತೆ ಇದೆ. ವೈಯಕ್ತಿಕತೆ ಇರುವವರೆಗೆ ಸಂಕಲ್ಪ ಸ್ವಾತಂತ್ರ್ಯವೂ ಇದೆ. ಎಲ್ಲಾ ಧರ್ಮಗ್ರಂಥಗಳೂ ಈ ಅಂಶವನ್ನು ಅವಲಂಬಿಸಿದವೇ; ಮತ್ತು ಅವು ಸಂಕಲ್ಪಸ್ವಾತಂತ್ರ್ಯವನ್ನು ಸರಿಯಾದ ಮಾರ್ಗದಲ್ಲಿ ನಿರ್ದೇಶಿಸಬೇಕು.

ಸಂಕಲ್ಪಸ್ವಾತಂತ್ರ್ಯ ಅಥವಾ ದೈವನಿಯತಿ ಸಿದ್ಧಾಂತದಲ್ಲಿ ನಂಬಿಕೆ ಯಾರಿಗಿದ್ದು ಅವನು ಅದಕ್ಕೆ ಬದ್ಧನಾಗಿದ್ದಾನೆಯೆ ಎಂಬುದನ್ನು ಕಂಡುಹಿಡಿಯಿರಿ. ಆಗ ಆ ಎರಡನ್ನೂ ಮೀರಿದಂತೆ. ಈ ಪ್ರಶ್ನೆಗಳನ್ನು ಚರ್ಚಿಸುವ ಉದ್ದೇಶ ಇದೊಂದೇ. ಯಾರಿಗೆ ಈ ಪ್ರಶ್ನೆಗಳು ಏಳುತ್ತವೆ? ಅದನ್ನು ಪತ್ತೆ ಮಾಡಿ ಶಾಂತಿಯಿಂದಿರಿ.

ಕರ್ಮ, ಭಕ್ತಿ, ಯೋಗ ಮತ್ತು ಜ್ಞಾನ ಯೋಗಗಳ ಮಾರ್ಗದ ಉದ್ದೇಶ ಯಾರಿಗೆ **ಕರ್ಮ, ವಿಭಕ್ತಿ, ವಿಯೋಗ** ಮತ್ತು **ಅಜ್ಞಾನ**ಗಳಿವೆಯೆಂಬುದನ್ನು ಶೋಧಿಸುವುದು. ಈ ಶೋಧನೆಯಿಂದ ಅಹಂಕಾರ ಅಳಿಸಿಹೋಗುತ್ತದೆ; ಮತ್ತು ಈ ನಕಾರಾತ್ಮಕ ಗುಣಗಳು ಎಂದೂ ಇಲ್ಲದ ಆತ್ಮನಲ್ಲಿ ನೆಲೆಯಾಗಿರುವುದೇ ಸತ್ಯವೆಂದು ತಿಳಿಯುತ್ತದೆ.

ಒಬ್ಬ ವ್ಯಕ್ತಿಯು ಕರ್ತನಾಗಿರುವವರೆಗೆ, ಅವನು ತನ್ನ ಕರ್ಮಫಲಗಳನ್ನನುಭವಿಸುತ್ತಾನೆ. ಆದರೆ ಯಾರು ಕರ್ತನೆಂಬುದನ್ನು ಅನ್ವೇಷಿಸಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಒಡನೆ, ಅವನಿಗೆ ತಾನು ಕರ್ತನೆಂಬ ಪ್ರಜ್ಞೆ ಹೊರಟುಹೋಗಿ, ಕರ್ಮತ್ರಯಗಳೂ ಕೊನೆಗೊಳ್ಳುತ್ತವೆ. ಇದು ನಿತ್ಯಮುಕ್ತಿಯ ಸ್ಥಿತಿ.

ನಾವೆಲ್ಲರೂ ನಿಜವಾಗಿ **ಸತ್–ಚಿತ್–ಆನಂದ** ಸ್ವರೂಪರು; ಆದರೆ, ನಾವು ವಿಧಿಯಿಂದ ಬದ್ಧರಾದ್ದರಿಂದ ಈ ಎಲ್ಲಾ ದುಃಖಗಳನ್ನು ಅನುಭವಿಸುವೆವು ಎಂದು ಕಲ್ಪಿಸಿಕೊಳ್ಳುತ್ತೇವೆ.

ಆರ್ಥರ್ ಆಸ್ಬೋರ್ನ್ : ನಾವು ಏಕೆ ಹೀಗೆ ಭಾವಿಸುತ್ತೇವೆ? ಈ ಅಜ್ಞಾನದ ಸ್ಥಿತಿ ನಮಗೆ ಏಕೆ ಬರುತ್ತದೆ?



ಭಗವಾನ್ : ಈ ಅಜ್ಞಾನ ಯಾರಿಗೆ ಬಂದಿದೆ ಎಂಬ ಪ್ರಶ್ನೆಯನ್ನು ನಿಮ್ಮನ್ನು ನೀವು ಕೇಳಿಕೊಳ್ಳಿ; ಆಗ ಅದು ನಿಮ್ಮ ಬಳಿ ಬಂದೇ ಇಲ್ಲವೆಂದೂ, ಮತ್ತು ನೀವು ಯಾವಾಗಲೂ **ಸಚ್ಚಿದಾನಂದ** ಸ್ವರೂಪಿಗಳೆಂದೂ ಅರಿವಾಗುತ್ತದೆ. ಈಗಾಗಲೇ ಒಬ್ಬನು ಏನಾಗಿದ್ದಾನೋ ಅದನ್ನು ಆಗಲು ಎಲ್ಲಾ ಬಗೆಯ ನೇಮನಿಷ್ಠೆಗಳನ್ನು ಅನುಸರಿಸುವನು. ಮಾನವನು ಸೀಮಿತನು ಮತ್ತು ಸಂಸಾರತಾಪತ್ರಯಗಳಿಂದ ಬದ್ಧನು ಎಂಬ ತಪ್ಪುಕಲ್ಪನೆಯನ್ನು ಹೋಗಲಾಡಿಸುವುದೇ ಈ ಎಲ್ಲಾ ಪ್ರಯತ್ನದ ಉದ್ದೇಶ.

ಭಕ್ತ : ನಿಯತಿ (ವಿಧಿ) ಎಂಬುದು ಇದೆಯೆ? ವಿಧಿಯಂತೆ ಏನು ನಡೆಯಬೇಕೋ ಅದು ನಡೆಯುವುದಾದರೆ, ಪ್ರಾರ್ಥನೆ ಅಥವಾ ಪ್ರಯತ್ನದಿಂದ ಏನಾದರೂ ಪ್ರಯೋಜನವಿದೆಯೆ? ಅಥವಾ ನಾವು ಸುಮ್ಮನೆ ನಿಷ್ಕ್ರಿಯವಾಗಿ, ಸೋಮಾರಿಯಾಗಿ ಇರಬೇಕೆ?

ಭಗವಾನ್ : ವಿಧಿಯನ್ನು ಗೆಲ್ಲಲು ಅಥವಾ ಅದಕ್ಕೆ ಅಧೀನವಾಗಿಲ್ಲದಿರಲು ಎರಡು ವಿಧಾನಗಳಿವೆ. ಯಾರು ಈ ವಿಧಿಯ ಆಟಕ್ಕೆ ಒಳಗಾಗುತ್ತಾರೆಂದು ಅನ್ವೇಷಿಸಿ, ಅಹಂಕಾರ ಮಾತ್ರ ಅದರಿಂದ ಬಂಧಿತವಾಗಿದೆಯೇ ಹೊರತು ಆತ್ಮವಲ್ಲ, ಮತ್ತು ಅಹಂಕಾರ ಅಸ್ತಿತ್ವದಲ್ಲಿಲ್ಲದ್ದು ಎಂಬುದನ್ನು ಅರಿಯಬೇಕು. ಇನ್ನೊಂದು ವಿಧಾನವೆಂದರೆ, ಭಗವಂತನಿಗೆ ಸಂಪೂರ್ಣವಾಗಿ ಶರಣಾಗಿ, ತನ್ನ ನಿಸ್ಸಹಾಯಕತೆಯನ್ನು ಅರಿತು ಸದಾ ಕಾಲವೂ 'ಓ, ಭಗವಂತ, ನನ್ನದೇನೂ ಇಲ್ಲ, ಎಲ್ಲವೂ ನಿನ್ನದೇ' ಎಂದು ಹೇಳುತ್ತಾ, 'ನಾನು' ಮತ್ತು 'ನನ್ನದು' (ಅಹಂಕಾರ ಮಮಕಾರಗಳನ್ನು) ಎಂಬುದನ್ನು ತೊರೆದು, ತನಗೆ ಏನು ಮಾಡಬೇಕೆಂಬುದನ್ನು ಆ ಭಗವಂತನ ಇಚ್ಛೆಗೆ ಬಿಟ್ಟುಬಿಡುವುದು. ಭಗವಂತನಿಂದ ಅದು, ಇದು ಬೇಕು ಎಂದು ಕೇಳುತ್ತಿರುವವರೆಗೆ ಶರಣಾಗತಿ ಎಂದೂ ಪೂರ್ಣವಾಗುವುದಿಲ್ಲ. ನಿಜವಾದ ಶರಣಾಗತಿ ಎಂದರೆ, ಭಗವತ್ಪ್ರೇಮಕ್ಕಾಗಿ ಪ್ರೇಮ, ಬೇರಾವುದಕ್ಕೂ ಅಲ್ಲ, ಮೋಕ್ಷಕ್ಕಾಗಿಯೂ ಅಲ್ಲ. ಬೇರೆ ಮಾತುಗಳಲ್ಲಿ

ಹೇಳುವುದಾದರೆ, ವಿಧಿಯ ಮೇಲೆ ವಿಜಯ ಸಾಧಿಸಬೇಕಾದರೆ, ಅಹಂಕಾರವು ಸಂಪೂರ್ಣವಾಗಿ ಅಳಿಸಿ ಹೋಗಬೇಕು. ಇದನ್ನು ನೀವು ಆತ್ಮಶೋಧನೆಯಿಂದಾಗಲಿ, **ಭಕ್ತಿಮಾರ್ಗ**ದಿಂದಾಗಲಿ ಸಾಧಿಸಬೇಕು.

ಭೂತ ಮತ್ತು ಭವಿಷ್ಯತ್ತುಗಳು ವರ್ತಮಾನವಿಲ್ಲದೆ ಸಾಧ್ಯವಿಲ್ಲವಾದ್ದರಿಂದ, ನಿತ್ಯವಾದುದನ್ನು, ಸತ್ಯವಾದುದನ್ನು ಅರಿಯಲು **ಈಗಲೇ** ಸಕಾಲ. ನಿರ್ವಿಕಾರವೂ ನಿತ್ಯವೂ ಆದ ಆತ್ಮವು ಕಾಲದೇಶಗಳಿಂದ – ಕಾಲದೇಶಗಳು ದೇಹ ಮತ್ತು ಆತ್ಮಗಳಿಗೆ ಸಾಪೇಕ್ಷವಾದವು – ಅತೀತವಾದುದು. ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಮುನಿಯು ಸಂಕಲ್ಪಸ್ವಾತಂತ್ರ್ಯವನ್ನೂ ವಿಧಿಯನ್ನೂ ಮೀರಿದವನು. ಇವೆರಡರ ಬಗ್ಗೆ ಅಜ್ಞಾನಿಗಳು ಮಾತ್ರ ತಲೆಕೆಡಿಸಿ ಕೊಳ್ಳುವರು. ಅಜ್ಞಾನಿಗಳಿಗೆ 'ನಾನು' ಎಂಬುದು ಆ ದೇಹಕ್ಕೆ ಸೀಮಿತವಾದ ಆತ್ಮ; ಜ್ಞಾನಿ ಅಥವಾ ವಿವೇಕಿಗೆ 'ನಾನು' ಎನ್ನುವುದು ಅನಂತ ಆತ್ಮ.

"ಸಂಕಲ್ಪ ಸ್ವಾತಂತ್ರ್ಯವು ವಿಧಿಯನ್ನು ಜಯಿಸಬಲ್ಲುದೆ?" ಇಂಥ ಪ್ರಶ್ನೆಗಳು ಸಂಕಲ್ಪಸ್ವಾತಂತ್ರ್ಯ ಮತ್ತು ಹಣೆ ಬರೆಹಗಳ ಮೂಲವನ್ನು ಕಾಣದವರನ್ನು ಬಾಧಿಸುವುವು. ಈ ಮೂಲವನ್ನು ಕಂಡವರು ಅಂಥ ವಾದವಿವಾದ ಗಳನ್ನೆಲ್ಲಾ ಬಿಟ್ಟುಬಿಟ್ಟಿದ್ದಾರೆ. ಈ ವಿಧಿ ಅಥವಾ ಸಂಕಲ್ಪ ಸ್ವಾತಂತ್ರ್ಯವಿರುವವರು ಯಾರು? ಅದನ್ನು ಪತ್ತೆ ಮಾಡಿ; ಆಗ ಈ ಪ್ರಶ್ನೆ ಏಳುವುದಿಲ್ಲ.

* * * *